

ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 26 ಸಂಚಿಕೆ 26 ಜೂನ್ 27, 2004 ಬೆಲೆ ರೂ. 3.00



'ಕಾವೇರಿ ಕುಟುಂಬ' ಕಗ್ಗಂಟು ಬಿಡಿಸುವ ಯತ್ನ





ಇತಿಹಾಸದ ಪಠ್ಯಪುಸ್ತಕ ಪರಾಮರ್ಶೆಯೇಕೆ?

ದಿಕ್ಕುಂಟೇನಯ್ಯಾ ಈ ಸರ್ಕಾರಕ್ಕೆ ?



ನಗೆಪಾಟಲಿಗೀಡಾದ ವಾಜಪೇಯಿ

- ಹೊಸ ಸನ್ನಿವೇಶ ಮತ್ತು ಕಾರ್ಮಿಕ ವರ್ಗ
- ಹರಿದ ಕಾವೇರಿ
- ಮೆಟಲ್ ಕ್ಲೋಸರ್ಸ್ ಕಾರ್ಮಿಕರ ಮೇಲೆ ನಿಲ್ಲದ ದೌರ್ಜನ್ಯ
- ಚಿಂತನೆಗೆ ಹಚ್ಚುವ ಚಿತ್ರ 'ದೇವ್'

ಯುರೋ-ಬ್ರಾಂಡ್ ಜಾಗತೀಕರಣಕ್ಕೆ ತಿರಸ್ಕಾರ

ಇತಿಹಾಸದ ಪುಟಗಳಿಂದ

"ಹೀಗಿದ್ದರು ನಮ್ಮ ನಾಯನಾರ್"

ಇತ್ತೀಚಿಗೆ ನಿಧನರಾದ ಇ.ಕೆ.ನಾಯನಾರ್ ಅವರನ್ನು ಬಲ್ಲವರು ಅವರು ತಮ್ಮ ಸಾವಿನ ಬಗ್ಗೆಗೂ ನಗಬಲ್ಲವರಾಗಿದ್ದರು ಎಂಬುದನ್ನು ತಿಳಿದಿದ್ದರು.

ಹೌದು ಈತ ಅತಿ ವಿರಳ ರಾಜಕಾರಣಿ. ಅತ್ಯಂತ ಮುತ್ಸದ್ದಿತನದವರು. ಈತನ ಅನೇಕ ಪ್ರತಿಭೆಗಳಿಗಾಗಿ ನಾನು ಆತನನ್ನು ಮೆಚ್ಚಿಕೊಂಡಿದ್ದೇನೆ. ಇವುಗಳಲ್ಲಿ ಅಪಾರ ಹಾಸ್ಯಪ್ರಜ್ಞೆ, ತಿಳುವಳಿಕೆ ಮತ್ತು ಜಾಣತನ.

ನಾನು ಅವರನ್ನು 1986ರ ಒಂದು ದಿನ ತೀರ ಅಲ್ಪಕಾಲ ಅನಿರೀಕ್ಷಿತವಾಗಿ ಭೇಟಿಯಾದೆ. ಅದು ಮುಖ್ಯಮಂತ್ರಿಯಾಗಿ ಅವರ ಮೂರನೇ ಅವಧಿ ಇರಬೇಕೆಂದು ಕಾಣುತ್ತದೆ. ಆ ಕುರ್ಚಿಯಲ್ಲಿ ಅವರಿಗೆ ಇನ್ನೊಂದು ಅವಧಿಯ ಅವಕಾಶವಿತ್ತು. ನಾನು ತಿರುವನಂತಪುರಂನಲ್ಲಿದ್ದೆ. ಅವರ ಕಛೇರಿಯ ಎದುರಿಗಿನ ಅತಿಥಿಗೃಹದಲ್ಲಿ ನಾನು ತಂಗಿದ್ದೆ.

ನನ್ನ ಅಭ್ಯಾಸದಂತೆ ನನ್ನ ವರದಿಗಾರನನ್ನು ನಾವು ಒಳಹೋಗಿ ಮುಖ್ಯಮಂತ್ರಿಯವರನ್ನು ಕಾಣಬಹುದೆ ಎಂದು ಕೇಳಿದೆ. ಆತ ಅದು ನಾಯನಾರ್ ಆದ್ದರಿಂದ ಸುಲಭ ಎಂದು ಹೇಳಿದ. ನಾನು ಹಿಂದೆಯೂ ಕೇರಳದ ಹಲವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೆ. ಇಎಂಎಸ್, ಸಿ.ಅಚ್ಯುತ್ ಮೆನನ್ ಮತ್ತು ಇತರರನ್ನು ಕಂಡು ಅವರ ಬಗ್ಗೆ ಮೆಚ್ಚಿಗೆ ಬೆಳೆಸಿಕೊಂಡಿದ್ದೆ. ಸಿಪಿಐ/ ಸಿಪಿಐ(ಎಂ) ನ ಇವರೆಲ್ಲ ಅತ್ಯಂತ ನೇರ ನಡೆಯುವರು ಹಾಗೂ ಅತ್ಯಂತ ಪ್ರಾಮಾಣಿಕರು.



ನಾವು ಮುಖ್ಯಮಂತ್ರಿಗಳ ಕಛೇರಿ ತಲುಪಿದಾಗ ಚೆರಿಯನ್ ಎಂಬ ಹಿರಿಯ ರಾಜಕಾರಣಿ ನಮ್ಮನ್ನು ಮುಖ್ಯಮಂತ್ರಿಗಳ ಕೊಠಡಿಗೆ ಕರೆದುಕೊಂಡು ಹೋದರು. ನಾಯನಾರ್, ಅವರು ಕಣ್ಣೆವೆ ಮುಚ್ಚದೆ 'ಹಲೋ' ಎಂದರು. ಅತ್ಯಂತ ಬೆಚ್ಚನೆಯ ಸ್ವಾಗತ ನೀಡಿದರು. ಅವರ ಅಂದಿನ ಕಾರ್ಯಕ್ರಮವನ್ನು ಮರೆತವರಂತೆ ಕುರ್ಚಿಯಲ್ಲಿ ಹಿಂದೆ ಸರಿದು ಕುಳಿತರು. ನನಗಾಗಿ, ನನ್ನೊಡನೆ ಹರಟಲು ಬಹುಕಾಲದಿಂದ ಕಾದು ಕುಳಿತವರಂತೆ.

ಯಾರೋ ನಾನು ಆಕ್ಸ್‌ಫರ್ಡ್‌ನ ಮನುಷ್ಯ ಎಂದು ಹೇಳಿದಾಗ ಅವರು "ಅವರೇ ದೇಶವನ್ನು ಆಳಿದವರು ಬ್ರಿಟೀಷರು ಆಳಲು ನೆರವು ನೀಡಿದವರಾಗಿ, ಬೂರ್ಜ್ವಗಳು ಗುತ್ತೇದಾರಿ ಬಂಡವಾಳಿಗರ ಏಜೆಂಟರು...." ಎಂದು ಉದ್ಧರಿಸಿದರು. ಇಷ್ಟೆಲ್ಲಾ ಪದ ಪುಂಜಗಳನ್ನು ಸಹಜವಾಗಿಯೆಂಬಂತೆ ಹರಿಸಿದ ಅವರು ಭಾವಪೂರ್ಣವಾಗಿ ನಕ್ಕರು. "ಹೇಳಿ" ಎಂದರು. ನಾನು ಎಲ್ಲ ಆಕ್ಸ್‌ಫರ್ಡ್ ಜನ ಅವರ ಕಲ್ಪನೆಯಂತೆ ಇರುವುದಿಲ್ಲ ಎಂದು ವಿವರಿಸಿದೆ. "ಗೊತ್ತು ಗೊತ್ತು" ಎಂದು ಮತ್ತೆ ನಕ್ಕರು. ಅವರ ಬೆಚ್ಚಗಿನ ನಗೆ ನನಗೆ ಮನೆಯ ವಾತಾವರಣ ನೀಡಿತು. ಅನಂತರ ಪರಸ್ಪರರ ಸಾಮಾನ್ಯ ಆಸಕ್ತಿಯ ವಿಷಯಗಳ ವಿನಿಮಯ ಮಾಡಿಕೊಂಡೆವು. ಕೃಷಿ, ಭೂಸುಧಾರಣೆ, ರಾಜ್ಯದ ಸಾಂಪ್ರದಾಯಿಕ ಕೃಷಿಗೆ ಕೆಡುಕು ಮಾಡಿದ್ದು ಇತ್ಯಾದಿ ನನ್ನ ನೆಚ್ಚಿನ ವಿಷಯಗಳು.

ಹೇಗೆ ಭತ್ತದ ಬೆಳೆ ನಷ್ಟದಾಯಕವಾಯಿತು ಎಂಬುದು ಭತ್ತದ ಉತ್ಪಾದನೆ ಕುಸಿದಿದ್ದು ಇತ್ಯಾದಿ ಅವರು ಇದರಲ್ಲೆಲ್ಲ ಕೇರಳದ ಕಮ್ಯೂನಿಸ್ಟರ ಪಾತ್ರವನ್ನು ಸಮರ್ಥಿಸಿಕೊಂಡರು. ಅವರ ಬಾಯಿಂದ ವಾಕ್‌ಪ್ರವಾಹವೇ ಹರಿಯತೊಡಗಿತ್ತು. ಚೆರಿಯನ್ ಮುಖ್ಯಮಂತ್ರಿಗಳು ಬಾಯಿಂದ ಹರಿದು ಬರುತ್ತಿದ್ದ ಕಟೋಕ್ತಿಗಳ ಹತೋಟಿಯ ಪ್ರಯತ್ನದಲ್ಲಿದ್ದರೂ ಈ ರಾಜಕೀಯ ಸಹಾಯಕರು ಅಲ್ಲಿ ಮುಖ್ಯಮಂತ್ರಿಗಳ ವಾಕ್ಪ್ರವಾಹವನ್ನು ಹತೋಟಿ ಮಾಡಲೆಂದೇ ನಿಯುಕ್ತರಾಗಿದ್ದರು ಎಂದು ನನಗೆ ನಂತರ ತಿಳಿಯಿತು.

ಬಡವರ ಮತ್ತು ನಿರ್ಗತಿಕರ ಬಗ್ಗೆ ಇಷ್ಟು ಪ್ರೌಢಿಮೆಯಿಂದ ಮಾತನಾಡುವ ಪ್ರಖರ ಸೈದ್ಧಾಂತಿಕ ಮುಖ್ಯಮಂತ್ರಿ ಬೇರಾವ ರಾಜ್ಯದಲ್ಲಿ ಕಾಣಸಿಗಲು ಸಾಧ್ಯ ಹೇಳಿ. ಟಿವಿ ಪರದೆಯ ಮೇಲೆ ಮುಖಾಮುಖಿ ಪ್ರಶ್ನೆಗಳಿಗೆ ನೇರ ಮತ್ತು ಜನಪ್ರಿಯವಾಗಿ ಉತ್ತರ ನೀಡಿದ ರಾಜಕಾರಣಿ ನಾಯನಾರ್.

ಅವರೇ ಅವರಿಗೆ ಅಳತೆಗೋಲು ಮುಖ್ಯಮಂತ್ರಿಯ ಕುರ್ಚಿಯಲ್ಲಿರಲಿ ಅಥವಾ ಎಕೆಜಿ ಕೇಂದ್ರದ ಬೆಂಚಿನ ಮೇಲಿರಲಿ- ಎಲ್ಲಿ ಕುಳಿತರೂ ಅವರು ಮಹಾನ್ ನೇತಾರ.

ವಿ.ಇಸ್ವರಮೂರ್ತಿ
'ಅಗ್ರಿಕಲ್ಚರ್ ಆ್ಯಂಡ್ ಇಂಡಸ್ಟ್ರಿ' ಸಮೀಕ್ಷೆಯ ಸಂಪಾದಕ)

ಇವರು ಜನತೆಯ ಅಪರೂಪದ ಪ್ರತಿನಿಧಿಗಳು

ಎಡಪಕ್ಷಗಳ ಸಂಸತ್ ಸದಸ್ಯರು ಇತರೆ ಪಕ್ಷಗಳಿಂದ ತೀರಾ ವಿಭಿನ್ನ, ವಿಶಿಷ್ಟ ಗುಣದ ಅಪರೂಪದ ಈ ಜನಪ್ರತಿನಿಧಿಗಳ ಬಗ್ಗೆ ಹೊರಜಗತ್ತಿಗೆ ಏನನ್ನೂ ತಿಳಿಸದ ಮಾಧ್ಯಮಗಳು, ಕೆಸರೆರಚುವರ ಜೊತೆ ಕೈಜೋಡಿಸುತ್ತವೆ. ದೇಶಕ್ಕೆ ಅವರು ನೀಡಿದ ಕೊಡುಗೆ ಯಾಕೆ ಮರೆ ಮಾಡುವುದು ಎಂದು ಪ್ರಶ್ನಿಸುತ್ತಿದ್ದಾರೆ ನಾಗರೀಕರೊಬ್ಬರು.

ಲೋಕಸಭಾ ಚುನಾವಣೆಗಳ ಫಲಿತಾಂಶ ಬಂದು ಕೇಂದ್ರದಲ್ಲಿ ಸರ್ಕಾರ ರೂಪಿಸುವ ನಿಟ್ಟಿನಲ್ಲಿ ಸಿ.ಪಿ.ಐ.(ಎಂ) ನಾಯಕತ್ವದಲ್ಲಿ ಎಡಪಕ್ಷಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತಿರುವುದು ಈ ದೇಶದ ಒಂದು ವಿಭಾಗದ ಮಧ್ಯಮ, ಮೇಲು ವರ್ಗಗಳ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲ ವನ್ನುಂಟುಮಾಡಿದೆ.

ಈ ಗಾಬರಿ ಹುಟ್ಟಿಸಲು ಇಂಗ್ಲಿಷ್ ಭಾಷೆಯ ಬಿಳಿ ಕಾಲರಿನ ಖಾಸಗಿ ಟಿ.ವಿ.ಚಾನೆಲ್‌ಗಳು ಮತ್ತು ಕೆಲವು ಭಾರತೀಯ ಭಾಷಾ ಪತ್ರಿಕೆಗಳು ಕಾರಣವಾಗಿದೆ.

ನಾನು ಮಾರ್ಕ್ಸ್‌ವಾದಿಯಾಗಿ ರದಿದ್ದರೂ, ಎಲ್ಲಾ ಸುಧಾರಣೆಗಳನ್ನು ವಿರೋಧಿಸಿ ವಿನಾಶದತ್ತ ಕೊಂಡೊಯ್ಯುವ ರಾಷ್ಟ್ರ ವಿರೋಧಿಗಳೆಂದು ಎಡಪಕ್ಷಗಳನ್ನು ಮಾಧ್ಯಮಗಳು ಬಿಂಬಿಸುತ್ತಿರುವುದು ನನಗೆ ನೋವಾಗಿದೆ.

ಕಳೆದ ಆರು ವರ್ಷಗಳಿಂದ ಬಲ ಪಂಥೀಯ ಪಕ್ಷವೊಂದು ಕೈಗೊಂಡ ಸುಧಾರಣಾ ಕ್ರಮಗಳಿಂದ ಲಾಭ ಹೊಂದಿದ ನಗರ ವಾಸಿಗಳಾದ ನಮಗೆ ಈಗ ಸುಧಾರಣಾ ಪ್ರಕ್ರಿಯೆ ಹಿಮ್ಮುಖವಾಗಿ ನಡೆಯುವ ವಿಚಾರ ನುಂಗಲು ಕಷ್ಟವಾದ ವಿಚಾರವಾಗಿದೆ. ಆದರೆ ಟಿ.ವಿ.ಚಾನೆಲ್‌ಗಳು ಪ್ರತಿಬಿಂಬಿಸುವ ರೀತಿಯಲ್ಲಿ ಅದು ಕೆಟ್ಟದಾಗಿರುವುದಿಲ್ಲ.


ಎಡಪಕ್ಷಗಳ ರಾಜಕಾರಣಿಗಳು ಕೇಳುತ್ತಿರುವ ಯಾವ ವಿಚಾರಗಳು ಬಿಳಿ ಕಾಲರಿನ ಮಾಧ್ಯಮಗಳನ್ನು ಒಳಗೊಂಡಂತೆ ಅವರ ವಿರೋಧಿಗಳಿಗೆ ಪಥ್ಯವಾಗದಿರುವುದು?

ಎಡಪಕ್ಷಗಳ ರಾಜಕಾರಣಿಗಳ ಬಡವರ ಪರಕಾಳಜಿಯೆ? ಅಂಚಿಗೆ ತಳ್ಳಲ್ಪಡುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿರುವ ಕಾರ್ಮಿಕ ವರ್ಗದ ಮೇಲಿನ ಅವರ ಪ್ರೀತಿಯೇ? ಅತ್ಯಲ್ಪ ಕೂಲಿಗೆ ದುಡಿಯುತ್ತಿರುವ ಶೋಷಿತ ಕೃಷಿ ಕೂಲಿಗಾರರ ಮೇಲಿನ ಕಾಳಜಿಯೇ?


ಎಡಪಕ್ಷಗಳ ಈ ರಾಜಕಾರಣಿಗಳ ಬಗ್ಗೆ ಇತ್ತೀಚಿನ ದಿನಗಳಲ್ಲಷ್ಟೇ ನಮ್ಮ ಮಾಧ್ಯಮಗಳು ಆಸಕ್ತಿ ವಹಿಸುತ್ತಿವೆ.

ನಮ್ಮ ಮಾಧ್ಯಮಗಳು ಈ ಎಡಪಕ್ಷಗಳ ರಾಜಕಾರಣಿಗಳ ಬಗೆಗಿನ ಹೆಚ್ಚಿನ ಆಸಕ್ತಿ ವಹಿಸದ ಕಾರಣ ನಮ್ಮ ದೇಶದ ಜನತೆಗೆ ಈತನಕ ಇವರ ಬಗ್ಗೆ ಹೆಚ್ಚು ತಿಳಿದಿರಲಿಲ್ಲ.

ನಮ್ಮ ಸಂಸತ್ ಸದಸ್ಯರ ಪೈಕಿ ಅತ್ಯಂತ ಪ್ರಾಮಾಣಿಕರಾಗಿರುವವರೆಂದರೆ ಈ ಪಕ್ಷಗಳ ಸಂಸತ್ ಸದಸ್ಯರು. ಇವರು ಹಲವು ವರ್ಷಗಳಿಂದ ವಿರೋಧ ಪಕ್ಷದಲ್ಲಿ ದುಡಿಯುತ್ತ ದನಿಯಿಲ್ಲದ ಅಗೋಚರ ಜನಸಮೂಹದ ಹಿತಾಸಕ್ತಿಗಳಿಗಾಗಿ ಸಂಸತ್‌ನೊಳಗೆ ದಿನದಿನವೂ ದನಿಯೆತ್ತಿದವರು. ಎಂಟು ವರ್ಷದ ಹಿಂದೆ ಸಂಸತ್ ಸದಸ್ಯರ ಪೈಕಿ ದೆಹಲಿಯಲ್ಲಿ ಶೇಕಡಾ ಇಪ್ಪತ್ತೈದರಷ್ಟು ಸದಸ್ಯರಿಗೆ ಕಾರುಗಳಿದ್ದವು. ಮತ್ತು ಸಂಸತ್ ಅಧಿವೇಶನದಲ್ಲಿ ಭಾಗವಹಿಸಲು ಅವರು ತಮ್ಮ ಕಾರುಗಳಲ್ಲಿ ಬರುತ್ತಿದ್ದರು. ಇವತ್ತು ಕಾರು ಹೊಂದಿದವರ ಸಂಖ್ಯೆ ಶೇಕಡಾ ಎಪ್ಪತ್ತೈದಕ್ಕೆ ಹೆಚ್ಚಿದೆ. ಸಂಸತ್ತಿನ ಹೊರಗೆ ನೀವು ಮರ್ಸಿಡಸ್, ಟೊಯಾಟೊ, ಲೆಕ್ಸಸ್ ಇನ್ನಿತರ ಹಲವು ಮಾದರಿಯ ಕಾರುಗಳನ್ನು ಕಾಣಬಹುದು. ಆದರೆ ಈಗ ಸ್ಪೀಕರ್‌ರಾಗಿರುವ ಸೋಮನಾಥ ಚಟರ್ಜಿಯವರನ್ನು ಬಿಟ್ಟರೆ ಬೇರೆ ಯಾವ ಎಡಪಕ್ಷಗಳ ಸಂಸತ್ ಸದಸ್ಯನಿಗೂ ಸ್ವಂತ ಕಾರಿಲ್ಲ. ಕಾರು ಹೊಂದಿದ್ದ ಓರ್ವ ಈಗ ಸಂಸತ್ ಸದಸ್ಯನಲ್ಲ. ಅದೂ ಕೂಡ ಆತ ಹೆಂಡತಿಯ ಕಛೇರಿಯಿಂದ ಸಿಕ್ಕಿದ ಸಾಲದಿಂದ ಖರೀದಿಸಿದ ಹಳೆಯ ಪ್ರೀಮಿಯರ್ ಪದ್ಮಿನಿ 1970 ರ ಮಾದರಿಯ ಹಳೆಯ ಕಾರು.



ಸೋಮನಾಥ ಚಟರ್ಜಿ



ಇಂದ್ರಜಿತ್ ಗುಪ್ತ

ಸಿ.ಪಿ.ಐ.ನ ಹಿರಿಯ ಗೌರವಾನ್ವಿತ ಮುಖಂಡ ಮತ್ತು ಅತ್ಯುತ್ತಮ ಸಂಸದೀಯ ಪಟು, ಹೆಚ್.ಡಿ.ದೇವೆಗೌಡ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಇಂದ್ರಜಿತ್ ಗುಪ್ತ ಕೂಡ ಜನಪಥದಲ್ಲಿದ್ದ ಅವರ ಸರಳವಾದ ಫ್ಲಾಟಿನಿಂದ (ಮನೆಯಿಂದ) ಸಂಸತ್‌ಗೆ ನಡೆದುಕೊಂಡೇ ಬರುತ್ತಿದ್ದರು.

ಇವತ್ತು ಕೂಡ ಎಡಪಕ್ಷಗಳ ಎಲ್ಲ ಸದಸ್ಯರೂ ಕೂಡ ತಮ್ಮ ಫ್ಲಾಟುಗಳಿಗೆ ನಡೆದುಕೊಂಡೇ ಹೋಗುತ್ತಾರೆ ಅಥವಾ ಪಾರ್ಲಿಮೆಂಟಿಗೆ ಬರುವ ಬಸ್ಸು ಹಿಡಿದು ಹೋಗುತ್ತಾರೆ. ಫ್ಲಾಟುಗಳ ವಿಚಾರ ಬಂದರೆ ಪ್ರತಿಯೊಬ್ಬರೂ ಒಂದೊಂದು ಫ್ಲಾಟು ಪಡೆಯಲು ಅರ್ಹರು. ಆದರೆ ಪಕ್ಷಕ್ಕಾಗಿ ದುಡಿಯುವ ಓರ್ವ ಅಥವಾ ಇಬ್ಬರು ಸಂಗಾತಿಗಳೊಡನೆ ಪ್ರತಿಯೊಬ್ಬ ಸಂಸತ್ ಸದಸ್ಯನೂ ತನ್ನ ಫ್ಲಾಟನ್ನು ಹಂಚಿಕೊಳ್ಳಬೇಕು.

ಪಕ್ಷದ ಸಂಸತ್ ಸದಸ್ಯರೆಲ್ಲರೂ ತಮಗೆ ಸಿಗುವ ಪೂರ್ತಿ ವರಮಾನವನ್ನು ಪಕ್ಷಕ್ಕೆ ನೀಡಬೇಕು ಮತ್ತು ಪಕ್ಷ, ಅವರ ಜೀವನ ನಿರ್ವಹಣೆಯ ಖರ್ಚಿಗಾಗಿ ಅಲ್ಪ ವೇತನವನ್ನು ನೀಡುತ್ತದೆ.

ಸಂಸತ್ ಅಧಿವೇಶನದ ಬೇರೆ ಬೇರೆ ಸಮಿತಿಗಳ ಹಾಜರಾತಿ ಪುಸ್ತಕವನ್ನು ನೀವು ಪರಿಶೀಲಿಸಿದ್ದರೆ ಎಡ ಪಕ್ಷಗಳ ಸದಸ್ಯರದೇ ಗರಿಷ್ಟ ಹಾಜರಾತಿ ಇರುವುದು ಖಚಿತ. ಈ ಸಂಸತ್ ಸದಸ್ಯರು ನಿಯಮಿತವಾಗಿ ಹಾಜರಾಗುವುದು ಮಾತ್ರವಲ್ಲ. ಈ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಾಕಷ್ಟು ಅಧ್ಯಯನ ಅಭ್ಯಾಸ ಮಾಡಿಕೊಂಡು ಭಾಗವಹಿಸುತ್ತಾರೆ.

ಆದುದರಿಂದ ಇವತ್ತು ಉನ್ನತ ನೈತಿಕ ತತ್ವಾದರ್ಶಗಳ ಬಗ್ಗೆ ಮಾತನಾಡುವುದಿದ್ದರೆ, ಆಚರಣೆಯಲ್ಲಿ ಪ್ರಾಮಾಣಿಕರಿದ್ದರೆ, ಅದಕ್ಕೆ ಎಡ ಪಕ್ಷಗಳ ಸಂಸತ್ ಸದಸ್ಯರೇ ಅರ್ಹರು ಎನ್ನುವುದರಲ್ಲಿ ಆಶ್ಚರ್ಯವೇನಿಲ್ಲ. ಈ ವಿಚಾರವನ್ನು ಸಂಸತ್ತಿನ ಹಿರಿಯರು ಕೂಡ ಮಾನ್ಯ ಮಾಡುತ್ತಾರೆ, ಆದರೆ ದುರದೃಷ್ಟವಶಾತ್ ನಮ್ಮ ದೇಶದ ಬಹುಪಾಲು ಜನತೆಗೆ ಮತ್ತು ಬಹುಸಂಖ್ಯಾತ ಮಾಧ್ಯಮಗಳಿಗೆ ಈ ವಿಚಾರ ಗೊತ್ತಿಲ್ಲ.

ಯಾವುದೇ ಮಂತ್ರಿಯನ್ನು ಕೇಳಿ ಆತ ಒಪ್ಪಿಕೊಳ್ಳುತ್ತಾನೆ. ಎಡ ಪಕ್ಷದ ಯಾವುದೇ ಸಂಸತ್ ಸದಸ್ಯನನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ ಯಾಕೆಂದರೆ ಯಾವುದೇ ಪ್ರಸ್ತಾಪವನ್ನು ಪರಿಶೀಲನೆ ಮಾಡದೆಯೇ ಅಥವಾ ಸಮರ್ಪಕವಾದ ಸ್ಪಷ್ಟನೆಗಳು ದೊರಕದೆ ಅದನ್ನು ಜಾರಿಗೊಳಿಸಲು ಎಡಪಕ್ಷದ ಯಾವುದೇ ಸಂಸತ್ ಸದಸ್ಯ ಬಿಡುವುದಿಲ್ಲ. ಎಡಪಕ್ಷಗಳ ಮತ್ತು ಅವುಗಳ ಸಂಸತ್ ಸದಸ್ಯರ ಈ ಸದ್ದಿಲ್ಲದ ಅವಿರತ ಶ್ರಮ ಮತ್ತು ಎಚ್ಚರವೇ ಈ ದೇಶದ ಸಂಸದೀಯ ಪ್ರಜಾಪ್ರಭುತ್ವ ಇನ್ನಷ್ಟು ಹದಗೆಡದಿರಲು ಕಾರಣ ಎನ್ನುವುದನ್ನು ಹಲವು ಮಂತ್ರಿಗಳು ಮತ್ತು ಬೇರೆ ಪಕ್ಷಗಳ ಸಂಸತ್ ಸದಸ್ಯರು ಖಾಸಗಿಯಾಗಿ ಒಪ್ಪಿಕೊಳ್ಳುತ್ತಾರೆ.

ಎಡಪಕ್ಷಗಳ ಈ ಸಂಸತ್ ಸದಸ್ಯರು ಜನಸಾಮಾನ್ಯರ ಬಗ್ಗೆ ಬರೇ ವೇದಿಕೆಯಲ್ಲಿ ಮಾತನಾಡುವವರಲ್ಲ. ಯಾಕೆಂದರೆ ಈ ಸಂಸತ್ ಸದಸ್ಯರೇ ಸಾಮಾನ್ಯ ಪುರುಷರು ಮತ್ತು ಮಹಿಳೆಯರು ಹಾಗಾಗಿ ಅವರಿಗೆ ಸರ್ಕಾರದ ಪ್ರತಿಯೊಂದು ನೀತಿಯು, ಯೋಜನೆಯು, ಕಾರ್ಯಾಚರಣೆಯು ನಿರ್ಧಾರವೂ ಜನಸಾಮಾನ್ಯರನ್ನು ಎಲ್ಲಿ ಚುಚ್ಚುತ್ತದೆ, ಕಾಡುತ್ತದೆ ಎನ್ನುವುದು ಚೆನ್ನಾಗಿ ಗೊತ್ತಿದೆ.

ಆದುದರಿಂದ ಇವರನ್ನು ರಾಷ್ಟ್ರ ವಿರೋಧಿಗಳೆಂದೋ ವಿಘ್ನ ಸಂತೋಷಿಗಳೆಂದಲೋ ಕೆಸರೆರಚುವರೆಂದೋ ಅವರ ಮೇಲೆ ಹಾರಿ ಬೀಳುವ ಬದಲು ಈ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರ ಅಗಾಧ ಕೊಡುಗೆಯನ್ನು ಗುರುತಿಸುವ ಕಾಲ ಈಗ ಬಂದೊದಗಿದೆ.

ಗಿರೀಶ್ ನಿಕಮ್
ವಿಜಯ್ ಟೈಮ್ಸ್
ಕನ್ನಡಕ್ಕೆ ಐ.ಆರ್.ಪ್ರಮೋದ್

ದಿಕ್ಕು ದೆಸೆಯುಂಟೇನಯ್ಯಾ ಈ ಸರ್ಕಾರಕ್ಕೆ?


ಕಾಂಗ್ರೆಸ್ ಮತ್ತು ಜನತಾದಳ(ಎಸ್) ನ ಮೈತ್ರಿಕೂಟದ ಸರ್ಕಾರದ ಪರವಾಗಿ ಪ್ರಥಮವಾದ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣ ದಿಕ್ಕುದಿಶೆಯಿಲ್ಲದ್ದು. ಅದು ತಿರಸ್ಕರಿಸಲ್ಪಟ್ಟ ಎಸ್.ಎಂ.ಕೃಷ್ಣರ ಸರ್ಕಾರದ ಹಳೇಜಾಡಿನ ಅಧಿಕಾರ ಶಾಹಿಗಳ ವರದಿ. ನಾಡನ್ನು ಭೀಕರವಾಗಿ ಕಾಡುತ್ತಿರುವ ಕೋಮುವಾದ, ಆರ್ಥಿಕ ನೀತಿಗಳನ್ನು ಎದುರಿಸುವ ಕನಿಷ್ಟ ರಾಜಕೀಯ ಅಂಶಗಳೇ ಇಲ್ಲ. ಇಲ್ಲಿ ಎದ್ದುಕಂಡ ಕೊರತೆಯೆಂದರೆ - ಸಮಾನ ಕನಿಷ್ಟ ಕಾರ್ಯಕ್ರಮ ಇಲ್ಲದಿರುವುದು. ಇದಿಲ್ಲದೇ ಹೇಗೆ ಸಾಗಬಹುದೆಂಬ ಲೆಕ್ಕಾಚಾರವಿದೆಯೇ?

ದಿಕ್ಕು ದೆಸೆಯೆಂಬುದಿದೆಯೇ ಈ ಸರ್ಕಾರಕ್ಕೆ? ಇದ್ದರೆ ಅದಾವುದು? ಹಿಂದಿನ ಎಸ್.ಎಂ.ಕೃಷ್ಣರ ಸರ್ಕಾರ ಜನರಿಂದ ತಿರಸ್ಕರಿಸಲ್ಪಟ್ಟು ಹೊಸ ಜನಾದೇಶದಂತೆ ಮೈತ್ರಿಕೂಟದ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ ಎಂಬ ಅರಿವು, ಅದರ ಎಚ್ಚರ, ನೆನಪು ಧರಂಸಿಂಗ್‌ರವರಿಗಾಗಲಿ, ಅಧಿಕಾರಸೂತ್ರ ಹಿಡಿದವರಿಗೆ ಇದೆಯೇ? ಇದ್ದರೆ ಅದರ ಒಂದು ಕೂದಲೆಳೆಯಷ್ಟಾದರೂ ಕಾಳಜಿ ಈ ಅಧಿವೇಶನದಲ್ಲಿ ಪ್ರತಿಫಲಿಸಬೇಕಿತ್ತು. ಅದರಲ್ಲೂ ಸರ್ಕಾರದ ನೀತಿ-ರೂಪುರೇಷೆಗಳ ಪ್ರಾತಿನಿಧಿಕ ಎಂಬ ರಾಜ್ಯಪಾಲರ ಭಾಷಣದಲ್ಲಾದರೂ ಹೊರ ಹೊಮ್ಮಬೇಕಿತ್ತು! ಆದರೆ ಇದರ ಬದಲು ಅಧಿಕಾರಶಾಹಿಗಳ ಅರಣ್ಯರೋಧನದಂತ - ಕೃಷ್ಣನ ಸರ್ಕಾರದ ಉಳಿದುಹೋದ ಹಳಸಲು ಯೋಜನೆಯಂತೆ ಕಳಪೆಯಾಗುತ್ತಿರಲಿಲ್ಲ. ಜನಸ್ಪಂದನ-ರಾಜಕೀಯ ಸಂವೇದನೆಯೇ ಇಲ್ಲದ ಸಿಇಓ ಮಾದರಿಯ ತುಂಡು ಇದಾಗುತ್ತಿರಲಿಲ್ಲ.

ಅಧಿವೇಶನದ ಆರಂಭದ ದಿನ ರಾಜ್ಯಪಾಲರು ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವುದು ಪಾಲಿಸಿಕೊಂಡು ಬಂದ ಸಂಪ್ರದಾಯ. ಅನಗತ್ಯವಾದ ಅಲಂಕಾರಿಕ ಸ್ಥಾನವಾಗಿರುವ ಬೊಕ್ಕಸಕ್ಕೆ ಬಿಳಿಯಾನೆಯಾಗಿರುವ ರಾಜ್ಯಪಾಲರ ಮೂಲಕ ಜನರಿಂದ ಆಯ್ಕೆಯಾಗಿರುವ ಸರ್ಕಾರ ತನ್ನ ನೀತಿ-ನಿಲುಮೆ, ಕಾರ್ಯಕ್ರಮಗಳ ಕುರಿತು ಪಾಠ ಒಪ್ಪಿಸುವುದು ವಾಡಿಕೆ. ಜನತೆಯಿಂದ ಚುನಾಯಿತವರ್ಗದ - ಜನರೊಂದಿಗೆ ಬೆರೆಯುವ ಅವಕಾಶಗಳೇ ಕಡಿಮೆ ಇರುವ ಕೇಂದ್ರದ ಕಡಿವಾಣಧಾರಿ ರಾಜ್ಯಪಾಲರು ಮಾತು ಮಾತಿಗೆ 'ನನ್ನ ಸರ್ಕಾರ ನನ್ನದು' ಎಂದೇ ಹೇಳುವುದೇ ಹಾಸ್ಯಾಸ್ಪದ.

ರಾಜ್ಯಪಾಲರ ಭಾಷಣದಲ್ಲಿ ಹೊಸ ಸರ್ಕಾರದ ಹೊಸ ನೀತಿಯಾಗಲಿ ಜನಾದೇಶದ ಸ್ಫೂರ್ತಿಯಾಗಲಿ ಕಾಣಲೇ ಇಲ್ಲ. ವಿಶ್ವಬ್ಯಾಂಕ್-ವಿದೇಶಿ ಹಣಕಾಸು ಬ್ಯಾಂಕ್‌ಗಳಿಂದ ಸಾಲ ತಂದು 'ಹಬ್ಬ' ಮಾಡುವುದೇ ಅಭಿವೃದ್ಧಿ! ಕಂಪನಿಗಳಿಗೆ ಕೋಟ್ಯಾಂತರ ಮಾಫಿ ಮಾಡಿ ಗಂಟು ಹೊಡೆಯುವುದೇ ಪ್ರಗತಿ ಎಂಬ ಹಿಂದಿನ ಸರ್ಕಾರದ ಹೈಟೆಕ್ ಮಂತ್ರವನ್ನು ಧರಂ-ಸಿದ್ರಾಮಣ್ಣ ಹಿಡಿದರೆ ಎಸ್.ಎಂ.ಕೃಷ್ಣರಂತೆ ನಾಪತ್ತೆಯಾಗಬೇಕಾದುದು ಅನಿವಾರ್ಯ. ನಿಜ! ಫಲಿತಾಂಶ ಹೊರಬಿದ್ದ ಬಳಿಕ 15 ದಿನಗಳು ಸರ್ಕಾರ ರಚಿಸುವ ಕಸರತ್ತು ಆ ಬಳಿಕ ಖಾತೆ ಹಂಚಿಕೆಗಳ ವರಸೆ, ಹೀಗಾಗಿ ಈ ಮೈತ್ರಿಕೂಟಕ್ಕೆ ಸರ್ಕಾರದ ಧೋರಣೆ-ಯೋಜನೆ ರೂಪಿಸಲು ಪುರುಸೊತ್ತೇ ಎಲ್ಲಿತ್ತು. ಇರಲಲ್ಲಿ ಆದರೆ ಕನಿಷ್ಟ ಅಧಿಕಾರಿ ಬರೆದ ಭಾಷಣದ ಮೇಲೆ ಒಮ್ಮೆ ಕಣ್ಣಾಡಿಸಿ ಅಂತಹ ಒಂದು ಹೊಸ ನೀತಿಯನ್ನು ಪ್ರಕಟಿಸುವ, ಜನರಿಗೆ ಸ್ಪಂದಿಸುವ ಭರವಸೆಯನ್ನಾದರೂ ನೀಡಬಹುದಿತ್ತು. ಇಷ್ಟು ಸಾಧ್ಯವಾಗದೇ ಹೋದದ್ದು ಆತಂಕಕಾರಿ.

ಸತತ ಮೂರು ವರ್ಷಗಳಿಂದಲೂ ಭೀಕರ ಬರವನ್ನು ರಾಜ್ಯದ ಜನತೆ ಅನುಭವಿಸಿದ್ದಾರೆ. ಕಾರ್ಷಿಕ ಬಿಕ್ಕಟ್ಟಿನ ಪರಿಣಾಮವಾಗಿ ರಾಜ್ಯದಲ್ಲಿ ಸಾವಿರಾರು ರೈತರು ಜೀವಕಳೆದುಕೊಂಡಿದ್ದಾರೆ. ನಾಲ್ಕು ಹನಿ ಮಳೆ ಬಿದ್ದರೂ ಬರದ ಬಾಧೆ ತಪ್ಪಿಲ್ಲ, ಕೂಲಿಯೂ ಸಿಗುತ್ತಿಲ್ಲ. ಈ ಸಮಸ್ಯೆಯನ್ನು ಆದ್ಯತೆ ವಿಷಯವನ್ನಾಗಿ ಪರಿಗಣಿಸಿಯೇ ಇಲ್ಲ. ಬರದ ಕಾಮಗಾರಿ ಪೂರ್ಣ ವಿಫಲವಾಗಿ ಭಾರಿ ಹಗರಣದ



ಕೂಪವಾಗಿರುವಾಗ ಅದರ ಪ್ರಸ್ತಾಪವೇ ರಾಜ್ಯಪಾಲರ ಭಾಷಣದಲ್ಲಿಲ್ಲ. ರೈತರಿಗೆ ಬೀಜ ನೀಡಿಕೆಯ ಪ್ರಸ್ತಾಪವೇನೋ ಇದೆ. ರಿಯಾಯಿತಿಗಳನ್ನು ನೀಡಲಾಗುವುದಂತೆ. ಆದರೆ ಅದರ ಅಕ್ರಮ ಮಾರಾಟ, ಬೀಜಗಳ ತೀವ್ರ ಕೊರತೆ, ಕಳಪೆ ಬೀಜಗಳನ್ನು ಖಾಸಗಿಯವರು ಮಾರುತ್ತಿರುವಂತಹ ವಂಚನೆಯ ಜಾಲ ಈ ಸರ್ಕಾರಕ್ಕೆ ತಿಳಿದಿಲ್ಲವೇ? ಅಥವಾ ಅನುಮೋದನೆಯೇ? ಕೃಷಿಕರಿಗೆ ಸಾಲದ ಹೊರೆಯೇ ಪ್ರಧಾನವಾಗಿದೆ, ಸಾಲದ ಮನ್ನಕ್ಕೆ ಅಗತ್ಯಕ್ರಮ ಪ್ರಕಟಿಸಬೇಕಿತ್ತು. ಸಾಲ ನೀತಿ ಹೊರಬರಬೇಕಿತ್ತು

ಕೈಗಾರಿಕಾ ಪ್ರಶ್ನೆಗಳ ಬಗ್ಗೆಯೂ ಇದೆ ನಿಷ್ಕಾಳಜಿ ಧೋರಣೆ. ನಷ್ಟದಲ್ಲಿರುವ ಸಾರ್ವಜನಿಕ ವಲಯದ ಕಾರ್ಖಾನೆಗಳನ್ನು ಮುಚ್ಚುವುದು, 5 ವಲಯಗಳನ್ನು ಖಾಸಗಿಯವರಿಗೆ ಮಾರುವುದು ಈ ಸರ್ಕಾರ ಕಂಡುಕೊಂಡಿರುವ ಕೈಗಾರೀಕರಣದ ಮಾರ್ಗವಿರುವಂತೆ ಬಿಂಬಿಸಿವೆ. 2ನೇ ಹಂತದಲ್ಲೂ ಇನ್ನೂ 19 ವಲಯಗಳಿಗೆ ಇತಿಶ್ರೀ ಹಾಕುವ ಪ್ರಸ್ತಾಪವನ್ನು ಮುಂಡಿಸಿದೆ. ಈ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದಾಗಲೀ, ನಡೆಸಿದ ಪ್ರಯತ್ನಗಳ ಫಲವಾಗಲೀ ತಿಳಿದಿಲ್ಲ. ಈ ಘಟಕಗಳನ್ನೇ ನಂಬಿ, ಈಗಲೂ ಜೀವ ಹಿಡಿದಿರುವ ಕಾರ್ಮಿಕರ ಭವಿಷ್ಯವೇನು? ಎಂಬ ಬಗ್ಗೆ ಚಕಾರವನ್ನೇ ಎತ್ತಿಲ್ಲ. ಅಷ್ಟು ಮಾತ್ರವಲ್ಲ ರಾಜ್ಯಪಾಲರ ಮಾರುದ್ದದ ಭಾಷಣ ದುಡಿಯುವ ವರ್ಗಗಳ ಸಂಕಷ್ಟಗಳ ಬಗ್ಗೆ ನಿರ್ಲಕ್ಷಿಸಿದೆ, ಇನ್ನು ಅಸಂಘಟಿತರ ನೆನಪಾದರೂ ಎಲ್ಲಿಂದ ಬರಬೇಕು. ಕೈಗಾರಿಕಾ ಶಾಂತಿ ಹೆಸರಿನಲ್ಲಿ ಕಾರ್ಮಿಕರ ಹಕ್ಕು ರಕ್ಷಿಸದಿದ್ದರೆ ಹೇಗೆ ಉದ್ಯಮಗಳ ಖಾಸಗೀಕರಣ - ಮುಚ್ಚುವುದು, ಜೈವಿಕ ಹಾಗೂ ಮಾಹಿತಿ ತಂತ್ರಜ್ಞಾನದ ಉದ್ಧಾರವೇ ಅಭಿವೃದ್ಧಿ ಎಂಬ ಉದಾರೀಕರಣದ ಉರುಳಿಗೆ ರಾಜ್ಯಪಾಲರ ಭಾಷಣ ಕೊರಳು

ಪುಟ 8 ಕ್ಕೆ

ಈವಾರ ಕರ್ನಾಟಕ

ಎಸ್.ವೈ.ಗುರುಶಾಂತ್

ಚುನಾವಣೆ ಮುಗಿಯಿತಲ್ಲಾ, ನಿಮಗೇಕೆ ರೇಷನ್!?

ಈ ಸರ್ಕಾರ ಹೇಗೆ ಯೋಚಿಸುತ್ತಿದೆ? ಏನು ಮಾಡಬಯಸುತ್ತದೆ ಎಂದು ನಿಖರವಾಗಿ ಹೇಳುವುದು ಕಷ್ಟವಾಗುತ್ತಿದೆ. ಈ ಸರ್ಕಾರಕ್ಕೆ ಅಂತಹ ಚಿಂತನೆ ಮತ್ತು ಕ್ರಿಯೆ ಹಾದಿ ಇದೆಯೇ? ಕಾಂಗ್ರೆಸ್ ಮತ್ತು ಜನತಾದಳ(ಎಸ್) ಪಕ್ಷಗಳೆರಡೂ ಚುನಾವಣಾ ಪ್ರಣಾಳಿಕೆಯಲ್ಲಿ ಮಾರುದ್ದ ಮಾತನಾಡಿದ್ದರು. ಬಡಜನರಿಗೆ ಅಕ್ಕಿ ಕಿ.ಲೋ.ಗೆ ರೂ. 3.50 ರಂತೆ ನೀಡಲು ಇಬ್ಬರ ನಡುವೆ ಸ್ಪರ್ಧೆಯೇ ಏರ್ಪಟ್ಟಿತ್ತು. ಹೇಳಿದಂತೆ ಮಾಡುವುದಿರಲಿ, ಹಳದಿ ಕಾರ್ಡ್‌ನ ಕೊರತೆಯ ಕಾರಣ ಹೇಳಿ ನೀಡಲಾಗಿದ್ದ ತಾತ್ಕಾಲಿಕ ಕಾರ್ಡ್‌ಗಳನ್ನು ಹೇಳದೇ ಕೇಳದೇ ರದ್ದುಪಡಿಸಿ ಆದೇಶ ಹೊರಡಿಸಿಬಿಟ್ಟಿದೆ. ಬಡ ಜನರಿಗಾಗಿ, ಬರ ಪೀಡಿತರಿಗೆಂದು ಬಂದ ಕೂಲಿಗಾಗಿ ಕಾಳನ್ನು ಲಕ್ಷಾಂತರ ಟನ್ ಅಕ್ರಮ ಕಾಳಸಂತೆ ಮಾಡಿರುವ ಭಾರಿ ಹಗರಣ ದಿವದಿನವೂ ಬಿಚ್ಚಿಕೊಳ್ಳುತ್ತಾ ಬೃಹತ್ ಸ್ವರೂಪ ತಾಳುತ್ತಿರುವಾಗಲೇ, ಸಂಕಷ್ಟದಲ್ಲಿರುವ ಜನರಿಗೆ ಕೊಂಚವಾದರೂ ಗಂಜಿ ಕಾಣಿಸುತ್ತಿದ್ದ ಈ ಕಾರ್ಡ್‌ಗಳನ್ನು ರದ್ದುಪಡಿಸಿರುವುದು ಗಾಯದ ಮೇಲೆ ಎಳೆದ ಬರೆಯೇ ಆಗಿದೆ.

ಸರ್ಕಾರದ ಈ ಆಘಾತಕಾರಿ ನಿರ್ಧಾರದಿಂದ 20 ಲಕ್ಷಕ್ಕೂ ಅಧಿಕ ಕುಟುಂಬಗಳು ಹೊಂದಿದ್ದ ಹೊತ್ತಿನ ಗಂಜಿಯನ್ನು ಕಳೆದುಕೊಂಡಿವೆ. ಹೀಗೆ ಜನರ ಕೈಯಿಂದ ಅನ್ನದಗುಳು ಅಪಹರಿಸಿ ಕಾರ್ಡ್‌ಗಳನ್ನು ಕೈಗಿಡುವಾಗಲೇ ನಿರ್ಧರಿಸಿದಂತೆ ಕಾಣುತ್ತದೆ. ವಿಶ್ವಬ್ಯಾಂಕ್‌ನ ನಿರ್ದೇಶನದಂತೆ ಪಡಿತರ ಕಾರ್ಡ್ ಕಡಿತ, ದರ ಹೆಚ್ಚಳದಂತಹ ಅಮಾನವೀಯ ಕ್ರಮಗಳಿಗೆ ಕೈ ಹಾಕಿದ ಸರ್ಕಾರ ಜನರ ಪ್ರತಿಭಟನೆ ಗಮನಿಸಿ ಚುನಾವಣೆಗಳು ಹತ್ತಿರವಾಗಿರುವುದರಿಂದ ಕಾರ್ಡ್ ಬದಲಿಗೆ ತಾತ್ಕಾಲಿಕ ಚೀಟಿಗಳನ್ನು ನೀಡಿತ್ತು. ಮತದಾನ ಮುಗಿದು, ಅಧಿಕಾರವೂ ಗಿಟ್ಟಿಸಿಕೊಂಡ ಬಳಿಕ ತನ್ನ 'ಗುಪ್ತ ಅಜೆಂಡಾ' ಜಾರಿಗಿಳಿದಿದೆ. ಎಂತಹ ನಿರ್ಲಜ್ಜ ಕ್ರಮವಿದು!

ಧರಂ-ಸಿದ್ದರಾಮಯ್ಯನವರ ಸರ್ಕಾರಕ್ಕೆ, ಅವರ ಪಕ್ಷಗಳಿಗೆ ಕನಿಷ್ಟ ಹೊಸ ಜನಾದೇಶದಿಂದ ಅಧಿಕಾರಕ್ಕೆ ಬಂದವರು, ಹಿಂದಿನ ಸರ್ಕಾರದ ನೀತಿಗಳನ್ನು ಜನ ತಿರಸ್ಕರಿಸಿದ್ದಾರೆ, ಆದ್ದರಿಂದ ಹೊಸ ರೀತಿಯಲ್ಲೇ ಹೊಸ ದಿಕ್ಕಿನಲ್ಲಿ ಅಧಿಕಾರ ನಡೆಸಬೇಕಿದೆಯೆಂಬ ಕನಿಷ್ಟ ಎಚ್ಚರ ಇರಬೇಕಿತ್ತು. ಆದರೆ ಹಿಂದಿನ ಎಸ್.ಎಂ.ಕೃಷ್ಣರ ಸರ್ಕಾರದ ನಿರ್ಧಾರಗಳೇ ಇಂದಿಗೂ ಜಾರಿಗಿಳಿಯುತ್ತಿವೆ. ಇವುಗಳನ್ನು ತಡೆಯುವ ಶಕ್ತಿ ಇಲ್ಲವೇ? ಅಥವಾ ಇಚ್ಛೆಯೇ ಇಲ್ಲವೇ? ಚುನಾಯಿತ ಜನ ಪ್ರತಿನಿಧಿಗಳನ್ನು - ಸಚಿವರನ್ನು ಲೆಕ್ಕಕ್ಕೆ ಇಡದೇ ಅಧಿಕಾರಶಾಹಿ ದರ್ಬಾರು ನಡೆಸುತ್ತಿದೆಯೇ?

ಇಂತಹ ನಿರ್ಧಾರವನ್ನು ಪ್ರತಿಭಟಿಸಿದ ಬಳಿಕ ಮುಖ್ಯಮಂತ್ರಿ-ಉಪ ಮುಖ್ಯಮಂತ್ರಿಗಳು 'ಬಡವರ ಅಗತ್ಯ ಕಸಿದುಕೊಳ್ಳಲ್ಲ' 'ಅರ್ಹರಿಗೆ ಕೊಡುತ್ತೇವೆ - ರಕ್ಷಿಸುತ್ತೇವೆ' ಎಂದೆಲ್ಲಾ ಮಾತನಾಡಿದ್ದಾರೆ. 'ಅರ್ಹರು' ಎಂಬ ಮಾನದಂಡವೇ ಮಹಾಮೋಸದಿಂದ ಕೂಡಿರುವಾಗ, ಎಲ್ಲವೂ ಬಡವರಿಗಾಗಿಯೇ ಎಂದು ಭೊಗಳೆ ನಿತ್ಯ ಪಾರಾಯಣವಾಗಿರುವಾಗ ಸರ್ಕಾರದ ಕಾಳಜಿ ನಿಜಕ್ಕೂ ಜನರನ್ನು ರಕ್ಷಿಸುವುದಾಗಿದೆಯೇ ಎಂಬ ಅನುಮಾನ ಮೂಡುತ್ತದೆ. ನೀತಿ-ನಿರ್ದೇಶನವಿಲ್ಲದೇ ಕಾಲ ತಳ್ಳುತ್ತಿರುವುದರ ಪರಿಣಾಮವನ್ನು ಕಾಂಗ್ರೆಸ್-ಜೆಡಿ(ಎಸ್) ನಾಯಕರು ಅನುಭವಿಸಬೇಕಾದೀತು!

ಕಾವೇರಿ: ಸಂಗ್ರಹಿತ ನೀರು ಹಂಚಿಕೊಳ್ಳುವುದೇ ಸೂತ್ರ

ಕಾವೇರಿ ನದಿಯಿಂದ ತಮಿಳುನಾಡಿಗೆ ನೀರು ಬಿಡಿ ಎಂದು ಕೋರಿ ಹಲವು ನಿಯೋಗಗಳು ಕೇಂದ್ರ ಸರ್ಕಾರಕ್ಕೆ-ರಾಜ್ಯ ಸರ್ಕಾರಕ್ಕೂ ಮನವಿ ಸಲ್ಲಿಸಿದವು. ಕೇಂದ್ರದ ಜಲಸಂಪನ್ಮೂಲ ಆಯೋಗದ ಅಧಿಕಾರಿಗಳು ನೀರಿನ ಎತ್ತರ ಎಷ್ಟು-ಏನೆಲ್ಲಾ ಎಂಬುದನ್ನು ಪರಿಶೀಲಿಸಿ ಪ್ರಧಾನಿಗಳಿಗೆ ವರದಿ ಒಪ್ಪಿಸಿಯೂ ಆಯಿತು.

ಈಗ ಪ್ರಧಾನಿಯವರು ತಮಿಳುನಾಡಿಗೆ ನೀರು ಬಿಡಿ ಎಂದು ಮುಖ್ಯಮಂತ್ರಿಗಳಿಗೆ ಸೂಚಿಸಿದ್ದಾರೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿದೆ. ಕಬಿನಿ ತುಂಬಿ ಉಕ್ಕಿ ಹರಿಯುತ್ತಿದೆ. ಒಳ ಹರಿವು ತೀವ್ರವಾಗಿದ್ದು ಅಪಾಯದ ಮಟ್ಟಕ್ಕೆ ನೀರು ಸಂಗ್ರಹ ಆಗಿದೆ. ಕೃಷ್ಣರಾಜ ಸಾಗರದಲ್ಲೂ ನೀರು 95 ಅಡಿಗೇರಿದೆ. ಹಾರಂಗಿಯಲ್ಲೂ ನೀರಿನ ಸಂಗ್ರಹ ಹೆಚ್ಚುತ್ತಿದೆ. ಮಳೆ ಸುರಿಯುತ್ತಿದೆ. ಜಲಾಶಯಗಳೂ ಭರ್ತಿಯಾಗುತ್ತಿರುವುದಾದರೂ ಸಂಗ್ರಹಿತ ನೀರಿನಲ್ಲಿ ಉಭಯ ರಾಜ್ಯಗಳೂ ಹಂಚಿಕೊಳ್ಳಲೇಬೇಕು ಎಂಬುದು ಅನಿವಾರ್ಯ, ಒಪ್ಪಿತ ಸತ್ಯ. 'ನಮಗೆ ಸಾಕಾದರೆ ಮಾತ್ರ ನಿಮಗೆ ನೀರು' ಎಂಬುದು ಸರಿಯಲ್ಲ. ಈ ನದಿ ಪಾತ್ರದ ಮೇಲೆ ಅದರ ಹರವಿನ ಎಲ್ಲಾ ರಾಜ್ಯಗಳ ಜನತೆಗೂ ಹಕ್ಕಿದೆ. ಅದು ಜನರ ಸಹಜ ಪಾಲು. ಆದ್ದರಿಂದ ರಾಜ್ಯ ಸರ್ಕಾರ ಮಧ್ಯಂತರ ತೀರ್ಪಿನ ಅನುಷ್ಠಾನದ ಜಾರಿಯತ್ತ ತಮಿಳುನಾಡಿಗೆ ನಿಗದಿಯಾದಂತೆ ನೀರು ಬಿಡಬೇಕು. ಮಳೆ ಬರುತ್ತಲಿದೆ ಬಿಡಬೇಕಿಲ್ಲ ಎಂದು ಕೆಲವರ ವಾದ ಸರಿಯಲ್ಲ. ಒಂದು ವೇಳೆ ಪೂರ್ಣ ಅನುಷ್ಠಾನ ಕಷ್ಟವೆಂದಾದಲ್ಲಿ ಪ್ರಧಾನಿ ಅಧ್ಯಕ್ಷತೆಯ 'ಕಾವೇರಿ ನದಿ ಪ್ರಾಧಿಕಾರ'ದಲ್ಲಿ ಸಮಾಲೋಚಿಸಿ ನೀರನ್ನು ಹರಿಸಬೇಕಾಗುತ್ತದೆ.

ಈ ದಿಶೆಯಲ್ಲಿ ಕರ್ನಾಟಕ ಸರ್ಕಾರ ಪ್ರಧಾನಿಯವರ ಸಲಹೆಯನ್ನು ಪರಿಗಣಿಸಿ, ಸದ್ಭಾವನೆಯ ವಾತಾವರಣದಲ್ಲಿ ನೀರನ್ನು ಬಿಡಲು ಯೋಚಿಸಿದೆ. ಅದು ಕಾರ್ಯಗತ ಕೂಡಲೇ ಜಾರಿಯಾಗುವುದು ಅತ್ಯಗತ್ಯ.

ಮೆಟಲ್ ಕ್ಲೋಸರ್ಸ್ ಮಾಲೀಕರ ದೌರ್ಜನ್ಯ

ನಿಲ್ಲದ ಕಾರ್ಮಿಕರ ಹೋರಾಟ –ಒಂದಾಗಿರುವ ಮಾಲೀಕರು–ಪೊಲೀಸರು–ರೌಡಿಗಳು



ಐಕ್ಯರಂಗದಲ್ಲಿ ಈಗಾಗಲೇ ಬೆಂಗಳೂರಿನ ಕಾರ್ಖಾನೆ ಒಂದರ ಕಾರ್ಮಿಕರು ಬದುಕಿಗಾಗಿ ದುಡಿಮೆ ಮಾಡುವಾಗ ಕೈಬೆರಳುಗಳನ್ನು ಕಳೆದುಕೊಂಡ ಗೋಳಿನ ಕಥೆ ಪ್ರಕಟವಾಗಿದೆ. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಮೆಟಲ್ ಕ್ಲೋಸರ್ಸ್ ಹಾಗೂ ಎಂಸಿ ಕ್ರೌನ್ಸ್ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆ ಕಾರ್ಮಿಕರು ಸಿಐಟಿಯು ಸಂಘ ಸೇರಿ ರಾಜ್ಯ ಸರ್ಕಾರ ನಿಗದಿಪಡಿಸಿದ ಕನಿಷ್ಟ ವೇತನ ಕೇಳಿದ ಕಾರಣಕ್ಕಾಗಿ ಹಾಗೂ ಕಾರ್ಖಾನೆ ಒಳಗೆ ಸುರಕ್ಷಿತ ಇಲ್ಲದ ಯಂತ್ರಗಳನ್ನು ಬದಲಾಯಿಸಬೇಕು ಎಂದು ಒತ್ತಾಯಿಸಿದ ಒಂದೇ ಕಾರಣಕ್ಕಾಗಿ ಮಾಲೀಕರು ಸಂಘದ 25 ಮಂದಿ ಪದಾಧಿಕಾರಿಗಳನ್ನು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಕಾನೂನು ಬಾಹಿರವಾಗಿ ಬೆಂಗಳೂರಿನಿಂದ ಕುಣಿಗಲ್‌ಗೆ ವರ್ಗಾವಣೆ ಮಾಡಿದ್ದಾರೆ.

ಅಲ್ಲದೆ ಕನಿಷ್ಟ ವೇತನ ನ್ಯಾಯಾಲಯದ ಮುಂದೆ ಹಾಕಿರುವ ವಿವಾದವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಕಾರ್ಮಿಕರಿಂದ ಬಲವಂತವಾಗಿ ಕಾರ್ಖಾನೆ ಒಳಗೆ ಸಹಿ ಪಡೆಯಲು ಪ್ರಯತ್ನಿಸಿದ್ದಾರೆ. ಎಲ್ಲಾ ಕಾರ್ಮಿಕರು ಈ ಬಗ್ಗೆ ಸಂಘಟಿತರಾಗಿ ಪ್ರತಿಭಟಿಸಿದ ಕಾರಣ ಮಾಲೀಕರು ಕಾರ್ಖಾನೆಯ 600 ಕ್ಕೂ ಹೆಚ್ಚು ಕೆಲಸಗಾರರಿಗೆ ಕಳೆದ ಏಪ್ರಿಲ್ 27 ರಿಂದ ಕೆಲಸ ನಿರಾಕರಿಸಿದ್ದಾರೆ. ಈ ಬಗ್ಗೆ ಜಂಟಿ ಕಾರ್ಮಿಕ ಆಯುಕ್ತರ ಮುಂದೆ ನಡೆದ ಸಂಧಾನ ಸಭೆಯಲ್ಲಿ ಆಡಳಿತ ವರ್ಗ ಹಾಗೂ ಕಾರ್ಮಿಕ ಸಂಘಕ್ಕೆ ಒಪ್ಪಂದ ನಡೆದು ಈ ಒಪ್ಪಂದದ ಪ್ರಕಾರ ಆಡಳಿತ ವರ್ಗದವರು ಎಲ್ಲಾ ಕಾರ್ಮಿಕರಿಗೆ ಮೇ 17 ರ ಬೆಳಿಗ್ಗಿನ ಪಾಳಿಯಿಂದ ಕೆಲಸ ನೀಡಲು ಒಪ್ಪಿ ಒಪ್ಪಂದಕ್ಕೆ ಸಹಿ ಮಾಡಲಾಯಿತು.



ಜಿ.ಎನ್.ನಾಗರಾಜ್ ಕಾರ್ಮಿಕರಿಗೆ ಅಕ್ಕಿ ವಿತರಣೆ ಮಾಡುತ್ತಿರುವುದು

ಮೇ 17 ರಂದು ಈ ಒಪ್ಪಂದದ ಪ್ರಕಾರ ಕಾರ್ಮಿಕರು ಕೆಲಸಕ್ಕೆ ಹೋದಾಗ ಮಾಲೀಕರು ಈ ಕಾರ್ಮಿಕರನ್ನು ಕಾರ್ಖಾನೆ ಒಳಗೆ ಬಿಡಲಿಲ್ಲ ಬದಲಾಗಿ 60 ಕ್ಕೂ ಹೆಚ್ಚು ರೌಡಿಗಳನ್ನು ಬೆಂಗಳೂರಿನ ಜಯನಗರ ವಲಯದ ಅಸಿಸ್ಟೆಂಟ್ ಪೊಲೀಸ್ ಕಮಿಷನರ್ ಮುನಿವೆಂಕಟಪ್ಪ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಬೇಗ್ ಇವರು ಖುದ್ದಾಗಿ ರಕ್ಷಣೆ ನೀಡಿ ಕಾರ್ಖಾನೆ ಒಳಗೆ ಕರೆತಂದು ಕೆಲಸ ಮಾಡಿಸುತ್ತಿದ್ದಾರೆ ಹಾಗೂ ಮಾಲೀಕರ ಬೆಂಗಾವಲಾಗಿ ನಿಂತು ಖಾಯಂ ಕಾರ್ಮಿಕರನ್ನು ಹೊರಗೆ ಇಟ್ಟು ರೌಡಿಗಳ ಮೂಲಕ ಕಾರ್ಖಾನೆ ನಡೆಸಲು ಎಲ್ಲಾ ರೀತಿಯ ಸಹಾಯ ಮಾಡುತ್ತಿದ್ದಾರೆ. ಕಾರ್ಖಾನೆಯ ಮಹಿಳಾ ಕಾರ್ಮಿಕರು ಸೇರಿದಂತೆ ನೂರಾರು ಕಾರ್ಮಿಕರ ವಿರುದ್ಧ ಹಲವಾರು ಸುಳ್ಳು ಪೊಲೀಸ್ ಕೇಸ್‌ಗಳನ್ನು ದಾಖಲಿಸಲಾಗಿದೆ. ಕಾರ್ಮಿಕರೊಬ್ಬರಾದ ವೇಲುಮುರುಗನ್ ಹಾಗೂ ರಾಮಮೂರ್ತಿ ಮೇಲೆ ಮಾಲೀಕರ ಪರ ರೌಡಿಗಳು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇದೆಲ್ಲದರಿಂದ ದೃತಿಗೆಡದೆ ಕಾರ್ಮಿಕರು ತಮ್ಮ ಹೋರಾಟ ಮುಂದುವರೆಸಿದ್ದಾರೆ ಹಾಗೂ ರೌಡಿಗಳ ದಾಳಿಯನ್ನು ಸಮರ್ಥವಾಗಿ ಎದುರಿಸಿ ನಿಂತಿದ್ದಾರೆ ಹಾಗೂ ಮುಖ್ಯವಾಗಿ ಮಹಿಳಾ ಕಾರ್ಮಿಕರು ಈ ಎಲ್ಲಾ ರೌಡಿಗಳ, ಪೋಲೀಸರ ದಾಳಿ, ದಬ್ಬಾಳಿಕೆಗಳನ್ನು ಎದುರಿಸುವಲ್ಲಿ ವಿಶೇಷ ಧೈರ್ಯ ತೋರಿಸಿದ್ದಾರೆ.



ಮಾರಕಾಸ್ತ್ರಗಳೊಂದಿಗೆ ಕಾರ್ಖಾನೆಯೊಳಗೆ ರೌಡಿಗಳು

ಕಾರ್ಮಿಕ ಆಯುಕ್ತರ ಮುಂದೆ ನಡೆದ ಒಪ್ಪಂದವನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿ ಮೇ 21 ರಂದು ಹೋರಾಟದಲ್ಲಿರುವ ಕಾರ್ಖಾನೆ ಕಾರ್ಮಿಕರು ಬೆಂಗಳೂರಿನ ಇತರೆ ಅಸಂಘಟಿತ ಕಾರ್ಮಿಕರ ಜೊತೆಗೂಡಿ ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಬೃಹತ್ ಧರಣಿ ನಡೆಸಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಹಾಗೂ ಕಾರ್ಯದರ್ಶಿಗಳಾದ ಇ.ಕೆ.ಎನ್.ರಾಜನ್ ಹಾಗೂ ಮೆಲ್ಕಿಯೋರ್.ಆರ್.ಡಿ.ರವರ ನೇತೃತ್ವದಲ್ಲಿ ಕಾರ್ಮಿಕರ ನಿಯೋಗ ಕಾರ್ಮಿಕ ಆಯುಕ್ತರನ್ನು ಭೇಟಿ ಮಾಡಿ ಅವರ ಮುಂದೆ ನಡೆದ ಒಪ್ಪಂದದ ಜಾರಿಗೆ ಕ್ರಮವಹಿಸಲು ಒತ್ತಾಯಿಸಿದೆ. ದೇಶದ ಕಾನೂನಿಗೆ ಕಿಂಚಿತ್ತೂ ಗೌರವ ನೀಡದ ಕಾರ್ಖಾನೆ ಮಾಲೀಕ ಪ್ರಶಾಂತ್ ಹೆಗ್ಡೆ ಪೊಲೀಸರ ಸಹಾಯದಿಂದ ಧೈರ್ಯವಾಗಿ ಕಾರ್ಖಾನೆ ನಡೆಸುತ್ತಿದ್ದಾನೆ. ಈ ನಡುವೆ ಸಿವಿಲ್ ನ್ಯಾಯಾಲಯ ಕಾರ್ಮಿಕರ ಸಮಸ್ಯೆಯನ್ನು ಸರಿಯಾಗಿ ಪರಿಶೀಲಿಸದೆ ಕಾರ್ಖಾನೆ ಗೇಟ್‌ನಿಂದ ಕಾರ್ಮಿಕರು 50 ಮೀಟರ್ ದೂರದಲ್ಲಿ ನಿಲ್ಲಬೇಕೆಂದು ತಡೆಯಾಜ್ಞೆ ನೀಡಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬೂರ್ಜ್ವಾ ಸರ್ಕಾರಗಳ ಆಡಳಿತದಲ್ಲಿ ನ್ಯಾಯಾಲಯಗಳು ಮಾಲೀಕರ ಪರವಾದ ಈ ವ್ಯತಿರಿಕ್ತ ತೀರ್ಪುಗಳು ಸಹಜ. ಜೊತೆಗೆ ಇಂದಿನ ನಿಧಾನ ಪ್ರವೃತ್ತಿಯ ಕಾನೂನು ವ್ಯವಸ್ಥೆ ಇದಕ್ಕೆ ಪೂರಕವಾಗಿದೆ.

ಆರ್.ಡಿ. ಮೆಲ್ಕಿಯೋರ್





ಹಲ್ಲೆಗೊಳಗಾದ ಕಾರ್ಮಿಕರು

ಬಿತ್ತನೆ ಬೀಜ ಕಾಳಸಂತೆಗೆ ಮಾರಾಟ ಸಂಚು

ಡಿವೈಎಫ್ಐ ಪ್ರತಿಭಟನೆ

ರಾಜ್ಯದಲ್ಲಿ ಭರವಸೆಯ ಮುಂಗಾರು ಆರಂಭಗೊಂಡಿದ್ದು, ಕಳೆದ 3-4 ವರ್ಷಗಳಿಂದ ಸತತ ಬರಗಾಲಕ್ಕೆ ಒಳಗಾಗಿದ್ದ ರೈತರು ಬಿತ್ತನೆ ಮಾಡಲು ಅನುಕೂಲವಾಗುವಂತೆ ನೂತನ ರಾಜ್ಯ ಸರ್ಕಾರ ರಾಜ್ಯದ ರೈತರಿಗೆ ರಿಯಾಯತಿ ದರದಲ್ಲಿ ಬಿತ್ತನೆ ಬೀಜ ಪೂರೈಸುತ್ತಿದೆ. 'ಕೂಳಿಗಾಗಿ ಕಾಳು' ಯೋಜನೆಯಲ್ಲಿ ಲಕ್ಷಾಂತರ ಕ್ವಿಂಟಲ್ ಅಕ್ಕಿ ತಿಂದಿರುವ ಅಧಿಕಾರಿಗಳು ಈಗ ಬಿತ್ತನೇ ಬೀಜಗಳಿಗೂ ಬಾಯಿ ಹಾಕಿರುವ ಘಟನೆ ಹಾಸನದಲ್ಲಿ ನಡೆದಿದ್ದು, ಡಿವೈಎಫ್ಐ ಸಂಘಟನೆ ಸಕಾಲದಲ್ಲಿ ಮಧ್ಯಪ್ರವೇಶಿಸಿ ರೈತರಿಗೆ ಬಿತ್ತನೆ ಬೀಜ ಹಂಚಿಕೆಯಾಗುವಂತೆ ಮಾಡಿದೆ.

ಇತ್ತೀಚಿಗೆ ಹಾಸನದ ಕೃಷಿ ನಿರ್ದೇಶಕರ ಕಛೇರಿ ಆವರಣದಲ್ಲಿ ಭತ್ತದ ಬಿತ್ತನೆ ಬೀಜವನ್ನು ರೈತರಿಗೆ ರಿಯಾಯತಿ ದರದಲ್ಲಿ ವಿತರಿಸಲಾಗುತ್ತಿತ್ತು. ಆದರೆ ಕೃಷಿ ಇಲಾಖೆ ಅಧಿಕಾರಿಗಳು 70 ಚೀಲ ಬಿತ್ತನೆ ಬೀಜ ಬಂದಿದ್ದರೂ ಕೇವಲ 34 ಚೀಲ ಭತ್ತ ವಿತರಿಸಿ ದಾಸ್ತಾನು ಮುಗಿಯಿತು ಎಂದು ಘೋಷಿಸಿದರು. ಇದರಿಂದ ರೈತರು ನಿರಾಸೆಗೊಂಡರು. ಈ ಸಂದರ್ಭದಲ್ಲಿ ಬಿಟ್ಟಗೌಡನ ಹಳ್ಳಿ ಡಿವೈಎಫ್ಐ ಕಾರ್ಯಕರ್ತರಾದ ಬಿ.ಎಸ್ವಾಮಿ, ಮೊಗ್ಗಣ್ಣಗೌಡ ಮತ್ತಿತರರು ಅಧಿಕಾರಿಗಳನ್ನು ಬಿತ್ತನೆ ಬೀಜ ವಿತರಿಸುವಂತೆ ಕೋರಿದರು. ಆದರೆ ಅಧಿಕಾರಿಗಳು ಉದ್ಧಟತನದಿಂದ ವರ್ತಿಸಿದರು. ಇದರಿಂದ ಆಕ್ರೋಶಗೊಂಡ ಡಿವೈಎಫ್ಐ ಕಾರ್ಯಕರ್ತರು ಮತ್ತು ನೂರಾರು ರೈತರು ಬಿ.ಜಿ.ಗಿರೀಶ್, ರಾಜ್‌ಕುಮಾರ್, ಸ್ವಾಮಿ ಮೊಗ್ಗಣ್ಣಗೌಡ ಮತ್ತಿತರ ನೇತೃತ್ವದಲ್ಲಿ ಜಿಲ್ಲಾ ಕಛೇರಿ ಎದುರು ಪ್ರತಿಭಟನೆ ನಡೆಸಿ ರೈತರಿಗೆ ಉಳಿದಿರುವ ಬಿತ್ತನೆ ಬೀಜ ವಿತರಿಸುವಂತೆ ಆಗ್ರಹಿಸಿದರು. ಸ್ಥಳಕ್ಕೆ ಆಗಮಿಸಿದ ಜಿಲ್ಲಾಧಿಕಾರಿಗಳು ಸ್ಥಳದಲ್ಲೇ ತನಿಖೆ ನಡೆಸಿ, ರೈತರಿಗೆ ಬಿತ್ತನೆ ಬೀಜ ವಿತರಿಸುವಂತೆ ಆದೇಶಿಸಿದರು. ಆದರೂ 2-3 ದಿನಗಳಲ್ಲಿ ವಿತರಿಸುತ್ತೇವೆಂಬ ಹುಂಬ ಉತ್ತರ ಅಧಿಕಾರಿಗಳಿಂದ, ಇದರಿಂದ ಮತ್ತಷ್ಟು ಆಕ್ರೋಶಗೊಂಡ ಡಿವೈಎಫ್ಐ ಕಾರ್ಯಕರ್ತರು ಆಕ್ಷೇಪಿಸಿದಾಗ ಗತ್ಯಂತರವಿಲ್ಲದೆ ಕೃಷಿ ಅಧಿಕಾರಿಗಳು ಅಂದೇ 200 ಚೀಲ ಬಿತ್ತನೆ ಭತ್ತವನ್ನು ಡಿವೈಎಫ್ಐ ಕಾರ್ಯಕರ್ತರ ಸಮ್ಮುಖದಲ್ಲೇ ಸುಮಾರು 200 ರೈತರಿಗೆ ಹಂಚಿದರು. ನಂತರ ಈ ವಿತರಣೆ 2-3 ದಿನಗಳವರೆಗೆ ನಡೆಯಿತು.

ಶಾವಲ್ ಹಮೀದ್ ಗುಲ್ವಾಡಿ

ಕುಖ್ಯಾತ ವಾಜಪೇಯಿಯ ಮುಂದುವರೆದ ನಗೆಪಾಟಲು

ಇತ್ತೀಚಿನ ಚುನಾವಣೆಗಳಲ್ಲಿ ಎನ್.ಡಿ.ಎ. ಮತ್ತವರ ಪಕ್ಷದ ಹೀನಾಯ ಸೋಲಿಗೆ ಕಾರಣಗಳನ್ನು ಹುಡುಕಾಡುತ್ತಿರುವಾಗಲೇ, ಮಾಜಿ ಪ್ರಧಾನಿ ವಾಜಪೇಯಿಯವರು ತಕ್ಷಣ ಜ್ಞಾನೋದಯವಾಗಿ ಗುಜರಾತ್ ಹಿಂಸಾಚಾರವೇ ಸೋಲಿಗೆ ಕಾರಣ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಕೆಲವು ದಿನಗಳ ಹಿಂದೆ, ಬಿಜೆಪಿ ಸಂಸದೀಯ ಪಕ್ಷದ ಸಭೆಯನ್ನುದ್ದೇಶಿಸಿ ಮಾತನಾಡುವಾಗ, ಎನ್.ಡಿ.ಎ ಸೋಲಿಗೆ ಗುಜರಾತಿನ ಕೋಮು ಹಿಂಸಾಚಾರ ಕಾರಣವಲ್ಲ ಪ್ರಮುಖ ವಿಷಯದ ಮೇಲೂ ವಾಜಪೇಯಿಯವರು ತಮ್ಮ ತಿರುಚಿದ ನಾಲಿಗೆಯಿಂದ ಇಂತಹ ಮಾತುಗಳನ್ನಾಡಿದ್ದಾರೆ. ಗುಜರಾತ್ ಕುರಿತಂತೆ ಕೂಡ ಇಂತಹ ದ್ವಿಮುಖ ಮಾತುಗಳೇನೂ ಹೊಸತಲ್ಲ. ಸರ್ಕಾರಿ ಪ್ರಾಯೋಜಿತ ಕೋಮು ಹತ್ಯಾಕಾಂಡ ನಡೆಯುತ್ತಿದ್ದಾಗ ಅಹ್ಮದಾಬಾದಿಗೆ ಭೇಟಿ ನೀಡಿದ ವಾಜಪೇಯಿಯವರು ಹಿಂಸಾಚಾರಗಳು ನಾಚಿಕೆಗೇಡು ಎಂದು ವರ್ಣಿಸಿದ್ದರು. ಇದಾದ ಕೆಲವು ವಾರಗಳ ನಂತರ ಗೋವಾದಲ್ಲಿ ನಡೆದ ಬಿಜೆಪಿ ಸಭೆಯಲ್ಲಿ ಮತನಾಡುತ್ತ ಗುಜರಾತ್ ಗಲಭೆ ಬುಗಿದೇಳಲು ಮುಸ್ಲಿಂ ಸಮುದಾಯವೇ ಕಾರಣ ಎಂದು ದೂಷಿಸಿದ್ದರು.

ವಾಜಪೇಯವರ ಈ ಮನೋಭೂಮಿಕೆಯ ಹೊರತಾಗಿಯೂ ಬಿಜೆಪಿ/ ಆರ್.ಎಸ್.ಎಸ್. ಗಳು ಜನಾದೇಶವನ್ನು ಒಪ್ಪಿಕೊಳ್ಳಲು ಮೀನಾಮೇಷ ಎಣಿಸುತ್ತಿವೆ. ಅತ್ಯಂತ ಹೀನವಾದುದೇನೆಂದರೆ ಅವರು ಮನಮೋಹನ್ ಸಿಂಗ್ ಸರ್ಕರಕ್ಕೆ ಅಸ್ಥಿರತೆ ಸೂಚಿಸುವ ಭ್ರಮೆಗಳನ್ನು ಹೆಣೆಯುತ್ತಿರುವುದು ಮತ್ತು ಹಾಲಿ ಸರ್ಕಾರದ ಜನದೇಶದ ಅವಧಿ ಮುಗಿಯುವುದನ್ನು ಹೆಣೆಯುತ್ತಿರುವುದು ಮತ್ತು ಹಾಲಿ ಸರ್ಕಾರದ ಜನದೇಶದ ಅವಧಿ ಮುಗಿಯುವುದನ್ನು ಹೆಣೆಯುತ್ತಿರುವುದು ಮತ್ತು ಹಾಲಿ ಸರ್ಕಾರದ ಜನಾದೇಶದ ಅವಧಿ ಮುಗಿಯುವುದರೊಳಗೆ ಅಧಿಕಾರಕ್ಕೆ ಮರಳಲು ಪ್ರಯತ್ನಿಸುತ್ತಿರುವುದು. ವಾಜಪೇಯಿಯವರೇ ಗುಡುಗಿದಂತೆ ಐದು ವರ್ಷಗಳ ಕಾಲ ನಾನು ಸಂಸತ್ತಿನ ವಿರೋಧಿ ಸೀಟುಗಳ ಮೇಲೆ ಕುಳಿತುಕೊಳ್ಳುವುದಿಲ್ಲ ಎಂಬ ಮಾತಿನಿಂದ ಇದು ಸುಸ್ಪಷ್ಟವಾಗಿದೆ. ಲೋಕಸಭೆಯ ಪ್ರಥಮ ಅಧಿವೇಶನದಲ್ಲೇ ಇಂತಹುದ್ದು ಸಾಬೀತಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಎಂದೂ ರಾಷ್ಟ್ರಪತಿಗಳ ಭಾಷಣವನ್ನು ಚರ್ಚೆಯಿಲ್ಲದೆ ಸಂಸತ್ತು ಅಂಗೀಕರಿಸಿರಲಿಲ್ಲ. ಬಿಜೆಪಿ/ ಎನ್‌ಡಿಎ ಯಾವುದೇ ಚರ್ಚೆಗೆ ಅವಕಾಶ ನೀಡಲಿಲ್ಲ



ಮತ್ತು ಲೋಕಸಭೆ ಕಲಾಪಗಳಿಗೆ ನಿರಂತರವಾಗಿ ಅಡ್ಡಿ ಉಂಟುಮಾಡಿದರೆ. ವಾಜಪೇಯಿಯವರ ಹೇಳಿಕೆಯನ್ನು ಅಲ್ಲಗಳೆದು ಆರ್.ಎಸ್.ಎಸ್./ ವಿ.ಹೆಚ್.ಪಿ. ಯವರು ನರೇಂದ್ರ ಮೋದಿಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದ ಸೂಚನೆಗಳೇನೆಂದರೆ ಮತ್ತಷ್ಟು ಕೋಮು ಗಲಭೆಗಳನ್ನು ಸೃಷ್ಟಿ ಮಾಡುವುದರ ಮೂಲಕ ತಮ್ಮ ಅಸಹನೆಯನ್ನು ಹೊರಗೆಹುತ್ತಾರೆ ಎಂಬುದು. ಜನಾದೇಶವನ್ನು ಒಪ್ಪಿಕೊಳ್ಳಲು ನಿರಾಕರಿಸುವುದರ ಮೂಲಕ ಆರ್.ಎಸ್.ಎಸ್./ ಬಿಜೆಪಿಗಳು ಕೋಮುಗಲಭೆಯ ಬೆಂಕಿಹಚ್ಚಲು ಕಾಯುತ್ತಿವೆ. ಮತ್ತೊಮ್ಮೆ ದೇಶದ ಹಿತಾಸಕ್ತಿಗಿಂತ ತಮ್ಮ ರಾಜಕೀಯ ಆಕಾಂಕ್ಷೆಗಳೇ ಮುಖ್ಯ ಎಂಬುದನ್ನು ಈ ಸಂಘಟನೆಗಳು ಮುಂದಿಡುತ್ತಿವೆ. ಇಂತಹ ರಾಷ್ಟ್ರ ವಿರೋಧಿ ಕೃತ್ಯಗಳಲ್ಲಿ ಆರ್.ಎಸ್.ಎಸ್. ಸ್ವಂತ ತೊಡಗಿಸಿಕೊಂಡಿದೆ.

ತನ್ನ ಸಂಪೂರ್ಣ ಸೋಲಿಗೆ ಕಾರಣಗಳನ್ನು ಕಂಡುಕೊಳ್ಳಲು ಬಿಜೆಪಿಗೆ ಮತ್ತಷ್ಟು ಸಮಯ ಬೇಕಾಗಬಹುದು ಆದರೆ ಈ ತೀರ್ಪು ಭಾರತದ ವೈವಿಧ್ಯತೆ ಆಚರಣೆಯಾಗಿದೆ ಎಂಬುದಂತೂ ವಾಸ್ತವ. ಇಂತಹ ನಿರಾಕರಣೆಯೇ ಆರ್.ಎಸ್.ಎಸ್./ ಬಿಜೆಪಿಯನ್ನು ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಗಂಡಾಂತರಕಾರಿಯನ್ನಾಗಿ ಮಾಡಿರುವುದು, ಹಾಗೂ ಅಧಿಕಾರಕ್ಕೆ ಮರಳಲು ಎಂತಹ ಹೀನ ಕೃತ್ಯಕ್ಕೂ ಕೈಹಾಕುವಜಂತೆ ಮಾಡುವುದು.

ಜನದೇಶವನ್ನು ಗೌರವಿಸಬೇಕೆಂದರೆ ಆರ್.ಎಸ್.ಎಸ್./ ಬಿಜೆಪಿ/ ಎನ್.ಡಿ.ಎ.ಯ ಕುತಂತ್ರಗಳನ್ನು ನಿರಂತರವಾಗಿ ತಿರಸ್ಕರಿಸಬೇಕು. ಇದು ಮಾತ್ರವೇ ಎಲ್ಲಾ ದೇಶಪ್ರೇಮಿಗಳಿಗಿರುವ ಕರೆ.


ಬಜೆಟ್ ಪೂರ್ವ ಸಭೆಯಲ್ಲಿ ಹೊಸ ಆರ್ಥಿಕ ಮಂತ್ರಿಗಳಿಗೆ ಕೇಂದ್ರ ಕಾರ್ಮಿಕ ಸಂಘಟನೆಗಳ ಮನವಿ

ಶ್ರೀಮಂತರಿಗೆ ಹಾಗೂ ದೊಡ್ಡ ಭೂಮಾಲೀಕರಿಗೆ ತೆರಿಗೆ ವಿಧಿಸಲು, ಬೃಹತ್ ಉದ್ದಿಮೆದಾರರಿಂದ ಸಾಲ ಹಾಗೂ ತೆರಿಗೆ ಬಾಕಿ ಪರಿಣಾಮಕಾರಿಯಾಗಿ ವಸೂಲಿ ಮಾಡಲು, ಕಾರ್ಮಿಕರಿಗೆ, ನೌಕರರಿಗೆ, ಜನ ಸಾಮಾನ್ಯರಿಗೆ ಸಹಾಯವಾಗುವ ರೀತಿಯಲ್ಲಿ ಯೋಜನೆಗಳನ್ನು ಜಾರಿಗೆ ತರುವ ಅಂಶಗಳನ್ನು ಮುಂಬರುವ ಬಜೆಟ್‌ನಲ್ಲಿ ಸೇರಿಸಬೇಕೆಂದು ಎಡ ಟ್ರೇಡ್ ಯೂನಿಯನ್ ಸಂಘಟನೆಗಳು ವಿತ್ತಮಂತ್ರಿ ಪಿ. ಚಿದಂಬರಂ ರವರನ್ನು ಒತ್ತಾಯಿಸಿವೆ. ಬಜೆಟ್ ಮಂಡಿಸುವ ಮೊದಲು ಟ್ರೇಡ್ ಯೂನಿಯನ್ ಮುಖಂಡರ ಜೊತೆ ಚರ್ಚಿಸಲು ಸಭೆ ಕರೆದ ವಿತ್ತಮಂತ್ರಿಯವರನ್ನು ಟ್ರೇಡ್ ಯೂನಿಯನ್ ಮುಖಂಡರು ಅಭಿನಂದಿಸಿದರು.

ಎನ್.ಡಿ.ಎ. ಸರ್ಕಾರದ ರೀತಿಗಳಿಂದ ವಿಭಿನ್ನವಾಗಿ ಹೊಸ ಯುಪಿಎ ಮುಖಂಡತ್ವದಲ್ಲಿರುವ ಕೇಂದ್ರ ಸರ್ಕಾರ, ಕೇಂದ್ರ ಟ್ರೇಡ್ ಯೂನಿಯನ್ ಸಂಘಟನೆಗಳ ಜೊತೆ ಬಜೆಟ್ ಮಂಡಿಕೆ ಪೂರ್ವವಾಗಿ ನಡೆಸಿದ ಮಾತುಕತೆಯಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ.ಚಿತ್ತಬ್ರತ ಮಜೂಂದಾರ್ ಹಾಗೂ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಗುರುದಾಸ್ ಗುಪ್ತ ಭಾಗವಹಿಸಿದ್ದರು.

ಭ್ರಷ್ಟಾಚಾರ ಹಾಗೂ ತೆರಿಗೆ ವಂಚನೆ ಕ್ರಮಗಳಿಗೆ ತಡೆವೊಡ್ಡಿ, ಸಾಲ ಹಾಗೂ ಬಾಕಿ ಇರುವ ಉದ್ದಿಮೆದಾರರಿಂದ, ಶ್ರೀಮಂತರಿಂದ ತೆರಿಗೆ ಹಾಗೂ ಸಾಲದ ಮೊತ್ತವನ್ನು ಗಂಭೀರವಾಗಿ ವಸೂಲಿ ಮಾಡಬೇಕು, ಕಪ್ಪು ಹಣ ಪತ್ತೆ ಹಚ್ಚಬೇಕು, ಈ ಕ್ರಮದ ಮೂಲಕ 1 ಲಕ್ಷ ಕೋಟಿ ರೂಪಾಯಿಗಳ ವರಮಾನ ಗಳಿಸಲು ಸರ್ಕಾರಕ್ಕೆ ಸಾಧ್ಯವಿದೆಯೆಂದು ಸಿಐಟಿಯುನಿಂದ ಆರ್ಥಿಕ ಮಂತ್ರಿಗಳಿಗೆ ನೀಡಿದ ಮನವಿಯಲ್ಲಿ ತಿಳಿಸಲಾಗಿತ್ತು.

2001-02 ರ ವರ್ಷದಲ್ಲಿಯೇ 87 ಸಾವಿರ ಕೋಟಿ ರೂಪಾಯಿ ತೆರಿಗೆ ಬಕಿ ವಸೂಲಿ ಮಾಡಬೆಕಾಗಿದ್ದು ಈ ಪ್ರಯತ್ನ ನಡೆದಿಲ್ಲ. ಈ ಹಣ ಉದ್ದಿಮೆ ಮನೆತನಗಳಿಂದ ಹಾಗೂ ದೇಶದ ಇತರೆ ದೊಡ್ಡ ಉದ್ದಿಮೆದಾರರಿಂದ ಬಾಕಿ ಇರುತ್ತದೆ. ಈ ತೆರಿಗೆ ಬಾಕಿಯನ್ನು ಕಟ್ಟದಿರಲು ಈ ಉದ್ದಿಮೆದಾರರು ವಿವಿಧ ತಂತ್ರ ಅನುಸರಿಸುತ್ತಿದ್ದಾರೆ. ಆದರೆ ಜನ ಸಾಮಾನ್ಯರು ಟೆಲಿಫೋನ್ ಬಿಲ್ ಹಾಗೂ ವಿದ್ಯುತ್‌ಚ್ಛಕ್ತಿ ಬಿಲ್ ಕಟ್ಟದೆ ಬಾಕಿ ಇಟ್ಟು. ಸಂಪರ್ಕ ಕಡಿತಗೊಳಿಸಿದ್ದಲ್ಲಿ ಬಾಕಿ ಹಣ ಜೊತೆಗೆ ಬಡ್ಡಿ ಕಟ್ಟಿದರೆ ಮಾತ್ರ ಪುನಃ ದೂರವಾಣಿ ಹಾಗೂ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲಾಗುತ್ತದೆ. ಇದೇ ರೀತಿ ಕಾರ್ಪೊರೇಟ್ ಉದ್ದಿಮೆದಾರರಿಗೆ ಹಾಗೂ ಬೃಹತ್ ಉದ್ದಿಮೆದಾರರಿಗೆ ಮೊದಲು ತೆರಿಗೆ ಬಾಕಿ ಕಟ್ಟ ನಂತರ ಯಾವುದೇ ಆಕ್ಷೇಪಣೆ



ಇತ್ತಿ ಎಂದು ಸರ್ಕಾರ ಗಂಭೀರವಾಗಿ ತಿಳಿಸಬೇಕಾಗಿದೆ ಹಾಗೂ ಈ ಬಗ್ಗೆ ಸೂಕ್ತ ಕಾನೂನು ತರಬೇಕೆಂದು ಸಿಐಟಿಯು ಒತ್ತಾಯಿಸಿದೆ. ಎನ್‌ಡಿಎ ಸರ್ಕಾರ ಉದ್ಯೋಗರಹಿ ಕಾರ್ಪೇರೇಟ್ ಕೇಂದ್ರಗಳು ಬೆಳೆಯಲು ಅವಕಾಶಗಳನ್ನು ಸೃಷ್ಟಿಸಿತ್ತು, ಇದರ ಬದಲಾಗಿ ಉದ್ಯೋಗ ಸೃಷ್ಟಿ ಮಾಡುವ, ಜನಸಾಮಾನ್ಯರನ್ನು ಕೇಂದ್ರವಾಗಿಟ್ಟುಕೊಂಡ ಆರ್ಥಿಕ ಧೋರಣೆಗಳನ್ನು ಅನುಸರಿಸಬೇಕೆಂದು ಸಿಐಟಿಯು ವಿತ್ತಮಂತ್ರಿಗಳನ್ನು ಒತ್ತಾಯಿಸಿದೆ.

ಪ್ರಗತಿಪರ ಸಂಯುಕ್ತ ರಂಗದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳುವ ರೀತಿಯಲ್ಲಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆಯನ್ನು (National Employment Guarantee Act) ನಿರ್ಧರಿತ ಸಮಯದೊಳಗೆ ಜಾರಿಗೆ ತರಬೇಕೆಂದು, ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿಗೆ ತರಬೇಕೆಂದು ಸಹಾ ಸಿಐಟಿಯು ವಿತ್ತಮಂತ್ರಿಗಳಿಗೆ ಅರ್ಪಿಸಿದ ಮನವಿಯಲ್ಲಿ ತಿಳಿಸಿದೆ. ರೈತರ, ಕಾರ್ಮಿಕ ಮತ್ತು ಜನಸಾಮಾನ್ಯರ ಕೊಂಡುಕೊಳ್ಳುವ ಶಕ್ತಿ ಜಾಸ್ತಿಯಾದರೆ ಮಾತ್ರ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲು ಸಾಧ್ಯವೆಂದು ಸಿಐಟಿಯು ವಿತ್ತಮಂತ್ರಿಗಳಿಗೆ ತಿಳಿಸಿದೆ.

ಮಾಲೀಕರಿಗೆ ಬಂಡವಾಳ ಹೂಡಲು ತೆರಿಗೆ ರಿಯಾಯಿತಿ ನೀಡುವ ಸಮಯದಲ್ಲಿ ಹೊಸ ಉದ್ಯೋಗ ಸೃಷ್ಟಿ ಮಾಡುವಂತಹ ವ್ಯವಸ್ಥೆ ಕಲ್ಪಿಸಬೇಕೆಂಬುದನ್ನು ಕಡ್ಡಾಯ ಮಾಡಬೇಕು, ಭೂಸುಧಾರಣೆ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು, ಶ್ರೀಮಂತ ರೈತರು ಹಾಗೂ ಬೃಹತ್ ಫಾರ್ಮ್ ಹೌಸ್ ಮಾಲೀಕರನ್ನು ತೆರಿಗೆ ಪದ್ಧತಿ ಒಳಗೆ ತರಬೇಕೆಂದು, ಕೃಷಿಕೂಲಿಗಾರರಿಗೆ ಕನಿಷ್ಟ ವೇತನ ಸಿಗುವಂತೆ ಹಾಗೂ ಸಾಮಾಜಿಕ ಭದ್ರತೆ ಒದಗಿಸುವ ಕೇಂದ್ರ ಕಾನೂನುತರಬೇಕೆಂದು ಅಸಂಘಟಿತ ರಂಗದ ಕಾರ್ಮಿಕರಿಗೆ ಕಲ್ಯಾಣ ಯೋಜನೆ ತರಬೇಕೆಂದು ಸಿಐಟಿಯು ವಿತ್ತಮಂತ್ರಿಗಳನ್ನು ಕೇಳಿಕೊಂಡಿದೆ.

ಶೇರು ಮಾರಾಟದ ಮಂತ್ರಿ ಖಾತೆಯನ್ನು ರದ್ದು ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಟ್ರೇಡ್ ಯೂನಿಯನ್‌ಗಳು ಸ್ವಾಗತ ಮಾಡಿದವು. ಟ್ರೇಡ್ ಯೂನಿಯನ್‌ಗಳು ಸ್ವಾಗತ ಮಾಡಿದವು. ಟ್ರೇಡ್ ಯೂನಿಯನ್ ಹಾಗೂ ಕೈಗಾರಿಕೆ ಪುನರ್ ಸಂಘಟನೆ ಬಗ್ಗೆ ಒಂದು ಮಂತ್ರಿ ಖಾತೆ ಆರಂಭಿಸಬೇಕೆಂದು BIFR ರದ್ದು ಮಾಡಬೇಕೆಂದು, NCNT ಬಂದ ಕಾರಣ ಕೈಗಾರಿಕೆಗಳು ಮುಚ್ಚಲ್ಪಡುವುದನ್ನು ತಡೆಯಬೇಕೆಂದು ಟ್ರೇಡ್ ಯೂನಿಯನ್ ಸಂಘಟನೆಗಳು ಸರ್ಕಾರವನ್ನು ವಿನಂತಿಸಿವೆ.

ಗುತ್ತೇದಾರಿ ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ ತಾಳಲಾರದೆ ಮುಚ್ಚಿ ಹೋದ ಹಾಗೂ ಸಂಕಷ್ಟದಲ್ಲಿರುವ ದೇಶೀಯ ಸಣ್ಣ ಕೈಗಾರಿಕೆಗಳ ಪುನರುತ್ತಾನಕ್ಕಾಗಿ ಸಣ್ಣ ಉದ್ದಿಮೆಗಳಿಗೆ ತೆರಿಗೆ ವಿನಾಯಿತಿ ನೀಡಬೇಕು, ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಬೇಕೆಂದು ಹಾಗೂ ದೇಶೀಯ ಸಣ್ಣ ಕೈಗಾರಿಕೆಗಳ ಉಳಿವಿಗಾಗಿ ಮುಕ್ತ ಆಮದು ನೀತಿಯಿಂದ ದೇಶದೊಳಗೆ ಬರುವ ಸರಕುಗಳ ಮೇಲೆ ನಿರ್ಬಂಧ ಹೇರಬೇಕೆಂದು ಸಿಐಟಿಯು ಕೇಳಿಕೊಂಡಿದೆ.

ಸಂಗ್ರಹ - ಇ.ಕೆ.ಎನ್. ರಾಜನ್

ಶತಮಾನದಷ್ಟು ಹಳೆಯದಾದ ಕಾವೇರಿ ವಿವಾದವನ್ನು ಬಗೆಹರಿಸಲು ರಾಜಕೀಯ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಸ್ಥಾಪಿತ ಹಿತಾಸಕ್ತಿಗಳು ಕಾವೇರಿ ಕಣಿವೆ ಪ್ರದೇಶದ ರೈತರನ್ನು ಭಾವೋದ್ರೇಕಗೊಳಿಸಿ ಕರ್ನಾಟಕ ಮತ್ತು ತಮಿಳುನಾಡಿನ ಜನರ ನಡುವೆ ಸಾಮರಸ್ಯ ಕೆಡಿಸಲು ಪ್ರಯತ್ನಿಸುತ್ತಿದ್ದರು. ಆದರೆ ಇತ್ತೀಚೆಗೆ ಎರಡೂ ರಾಜ್ಯಗಳ ರೈತರ ನಡುವೆ ಸಾಮರಸ್ಯ ಮೂಡಿಸಿ ದೀರ್ಘಾವಧಿ ಪರಿಹಾರಕ್ಕಾಗಿ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿದೆ. ಈ ಕುರಿತ ಲೇಖನವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು ಬರೆದಿದ್ದಾರೆ.

ಕಾವೇರಿ ಕುಟುಂಬ

ಕಗ್ಗಂಟಾದ ಸಮಸ್ಯೆ ಬಿಡಿಸುವ ಪ್ರಯತ್ನ

ಜಿ.ಸಿ.ಬಯ್ಯಾರೆಡ್ಡಿ

ನಮಗೇ ನೀರಿಲ್ಲ, ತಮಿಳುನಾಡಿಗೆ ನೀರು ಬಿಡುವುದು ಹೇಗೆ? ಸಾಧ್ಯವಿಲ್ಲ ಎಂದರು ಮುಖ್ಯಮಂತ್ರಿಗಳು ...... ರಂದು ವಿಧಾನಸೌಧದಲ್ಲಿ ಸೇರಿದ್ದ ಸರ್ವ ಪಕ್ಷಗಳ ಸಭೆಯಲ್ಲಿ ಉಪಮುಖ್ಯಮಂತ್ರಿಗಳೂ ಸಹ ಇದಕ್ಕೆ ತಲೆಯಾಡಿಸಿದರು. ಮುಖ್ಯಮಂತ್ರಿಗಳ ಮತ್ತು ಉಪಮುಖ್ಯಮಂತ್ರಿಗಳ ಈ ನಿರ್ಧಾರ ಸರಿಯಿದೆ. ನಾವೂ ನಿಮ್ಮ ಜೊತೆಗೆ ಇದ್ದೇವೆ. ಯಾವುದೇ ಕಾರಣಕ್ಕೆ ನೀರು ಬಿಡಬೇಡಿ ಎಂದರು. ಸಿಪಿಐ(ಎಂ) ಪಕ್ಷವನ್ನು ಹೊರತುಪಡಿಸಿದ ಇತರೆ ಪಕ್ಷಗಳು ಮತ್ತು ಹಾಜರಿದ್ದ ರೈತ ಸಂಘಟನೆಗಳ ಮುಖಂಡರು. ಸಿಪಿಐ(ಎಂ) ಮಾತ್ರ ರಾಷ್ಟ್ರದ ಒಕ್ಕೂಟ ವ್ಯವಸ್ಥೆ ಮತ್ತು ಎರಡು ರಾಜ್ಯಗಳ ರೈತರ ಹಿತಗಳು, ವಿಶೇಷವಾಗಿ ರಾಜ್ಯದ ರೈತರ ದೀರ್ಘಾವಧಿ ಹಿತವನ್ನು ಗಮನದಲ್ಲಿ ಇಟ್ಟುಕೊಂಡು ನೀರು ಬಿಡುವುದೇ ಇಲ್ಲ ಎನ್ನುವ ರೀತಿಯ ನಿಲುವನ್ನು ತೆಗೆದುಕೊಳ್ಳಬಾರದೆಂದು ವಾದಿಸಿತು.

ನೀರು ಬಿಡುವುದಿಲ್ಲ ಎಂದು ಹೇಳಿ, ಆನಂತರ ನೀರು ಬಿಟ್ಟರೆ ಪರಿಣಾಮ ನೆಟ್ಟಗಿರುವುದಿಲ್ಲ. ಹಿಂದಿನ ಮುಖ್ಯಮಂತ್ರಿಗಳು ಸಹ, ಇಂತಹ ಸರ್ವ ಪಕ್ಷಗಳ ಸಭೆಗಳಲ್ಲಿ ನೀರು ಬಿಡುವುದಿಲ್ಲವೆಂದು ಹೇಳಿ ಪಾದಯಾತ್ರೆ ಇತ್ಯಾದಿಗಳನ್ನೆಲ್ಲ ಮಾಡಿ, ಕೊನೆಗೆ ನೀರು ಬಿಟ್ಟಿರುವ ಅನೇಕ ಪ್ರಸಂಗಗಳಿವೆ. ಇದು ಮರುಕಳಿಸಬಾರದು. ಈ ಬಗ್ಗೆ ಖಚಿತ ಭರವಸೆ ಬೇಕು ಎಂಬೆಲ್ಲ ಮಾತುಗಳು ಬಿರುಸಾಗಿ ಸರ್ವ ಪಕ್ಷಗಳ ಸಭೆಯಲ್ಲಿ ಎದ್ದುಬಂದವು. ಇಷ್ಟೆಲ್ಲ ಆದ ವಿವಾದಗಳ ನಡುವೆ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಸದ್ಯದ ಸ್ಥಿತಿ ಇದು. ಮುಂದಿನದ್ದು ಮುಂದೆ ನೋಡೋಣ ಎಂದು ಸಭೆಯನ್ನು ಮುಗಿಸಿದರು.

ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಬೇಕೆನ್ನುವ ಒತ್ತಾಯದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕರೆದಿದ್ದ ಸರ್ವ ಪಕ್ಷಗಳ ಸಭೆಯಿದು. ಇಂತಹ ಸಭೆಗಳು ಈತನಕ ಎಷ್ಟೋ ನಡೆದಿವೆ. ಮುಂದೆಯೂ ಮತ್ತಷ್ಟು ಸಭೆಗಳು ನಡೆಯಬೇಕಾಗುತ್ತೆ. ನೀರಿನ ಹಂಚಿಕೆಯಲ್ಲಿ ಕಷ್ಟ ಮತ್ತು ಸುಖ ಎರಡನ್ನು ಸಮನಾಗಿ ಹಂಚಿಕೊಂಡು ಮುಂದೆ ಹೋಗಬೇಕಾಗುತ್ತೆ. ಕಾವೇರಿ ನದಿ ನೀರಿನ ಹಂಚಿಕೆಯ ವಿಷಯ ಇವತ್ತು, ನಿನ್ನೆಯದಲ್ಲ. ಸುಮಾರು ಒಂದು ಶತಮಾನದಷ್ಟು ಹಳೇ ಪ್ರಶ್ನೆ. 1800 ಕೊನೆ ಮತ್ತು 1900 ರ ಆರಂಭದಲ್ಲಿ ಮದ್ರಾಸು ಮತ್ತು ಮೈಸೂರು ಪ್ರಾಂತ್ಯಗಳ ನಡುವೆ ಹಲವು ಸುತ್ತು ಮಾತುಕತೆಗಳು ನಡೆದು 1924ರ ಬ್ರಿಟಿಷ್ ಭಾರತದಲ್ಲಿ ಒಂದು ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದ 1974 ರವರೆಗೆ ಜಾರಿಯಲ್ಲಿ ಇತ್ತು. ಐವತ್ತು ವರ್ಷಗಳ ಒಪ್ಪಂದದ ಅವಧಿಯು ಪೂರ್ಣಗೊಂಡ ನಂತರ ಮತ್ತೆ ನೀರಿನ ಬಳಕೆಯ ಬಗ್ಗೆ ಹಲವು ಸುತ್ತು ಮಾತುಕತೆಗಳು ನಡೆದು ಕೊನೆಗೆ ಇದರ ಪರಿಹಾರಕ್ಕಾಗಿ ಕಾವೇರಿ ನದಿ ನ್ಯಾಯಾಧಿಕರಣವನ್ನು ಕೇಂದ್ರ ಸರ್ಕಾರ ರಚನೆ ಮಾಡಿತು. ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಕೇಂದ್ರ ಆಡಳಿತ ಪ್ರದೇಶವಾಗಿದ್ದ ಪಾಂಡಿಚೇರಿಗಳ ಅಂತರ ರಾಜ್ಯ ನದಿ ನೀರಿನ ವಿವಾದದ ಬಗ್ಗೆ ವಾದ, ಪ್ರತಿವಾದಗಳನ್ನು ಆಲಿಸಿ 1980-81 ರಿಂದ 1989-90 ರವರೆಗೆ ಮೆಟ್ಟೂರು ಜಲಾಶಯಕ್ಕೆ ಹರಿದು ಬಂದಿರುವ ನೀರಿನ ಒಳ ಹರಿವುಗಳನ್ನು ಆಧಾರವಾಗಿ ಇಟ್ಟುಕೊಂಡು, ಎರಡು ಒಳ್ಳೆಯ ಮತ್ತು ಎರಡು ಕೆಟ್ಟ ಒಳಹರಿವು ಇದ್ದ ವರ್ಷಗಳನ್ನು ಬಿಟ್ಟು ಉಳಿದ ಆರು ವರ್ಷಗಳ ಸರಾಸರಿಯನ್ನು ಲೆಕ್ಕಹಾಕಿ 1991 ರಲ್ಲಿ ಮಧ್ಯಂತರ ತೀರ್ಪು ನೀಡಿ ಪ್ರತಿ ನೀರಿನ ವರ್ಷದಲ್ಲಿ (ಜೂನ್-ಮೇ) ಕರ್ನಾಟಕ ರಾಜ್ಯ 205 ಟಿ.ಎಂ.ಸಿ ನೀರನ್ನು ಮೆಟ್ಟೂರು ಜಲಾಶಯಕ್ಕೆ ತಲುಪುವುದನ್ನು ಖಾತರಿಪಡಿಸಬೇಕೆಂದು ಆದೇಶಿಸಿತು. ಮಾತ್ರವಲ್ಲ ಒಟ್ಟು 205 ಟಿ.ಎಂ.ಸಿ. ನೀರನ್ನು ಪ್ರತಿ ವಾರ ಮತ್ತು ತಿಂಗಳಿನಲ್ಲಿ ನಿಗದಿತ ಪ್ರಮಾಣದ ನೀರನ್ನು ಬಿಡುಗಡೆ ಮಾಡಬೇಕೆಂದು ಸಹ ನ್ಯಾಯಾಧಿಕಾರಣ ಸ್ಪಷ್ಟಪಡಿಸಿತು.

ಇದರ ಜಾರಿಯಲ್ಲಿ ಸಮಸ್ಯೆ ಬಂದಾಗ ತನ್ನ ಮುಂದೆ ಬಾದಿತರು ಬರಬಹುದೆಂದು ಆದೇಶಿಸಿತು. ಇದು ಕೇವಲ ಮಧ್ಯಂತರ ತೀರ್ಪಾಗಿದ್ದ ನ್ಯಾಯಾಧಿಕರಣದ ಅಂತಿಮ ತೀರ್ಪು ಆದಷ್ಟು ಬೇಗ ಬರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಹದಿಮೂರು ವರ್ಷಗಳು ಕಳೆದರೂ ಈ ಅಂತಿಮ ತೀರ್ಪು ಹೊರಬರಲಿಲ್ಲ. ಈ ತೀರ್ಪು ಅಂತಿಮ ವಾಗಿ ಹೊರಬರಲು, ಇನ್ನು ಒಂದೆರಡು ವರ್ಷ ಗಳಾಗಬಹುದೆಂಬ ಮಾತುಗಳು ಕೇಳಿಬರುತ್ತಿವೆ.

ರಾಷ್ಟ್ರೀಯ ಪರಿಹಾರಕ್ಕಾಗಿ ಆಗ್ರಹ

ರಾಷ್ಟ್ರೀಯ ಜಲ ನೀತಿ, ನ್ಯಾಯಾಧಿಕಾರಣದ ಈ ತೀರ್ಪಿಗೆ ಆಧಾರವಾಗಬೇಕಾದ ಜಲಹಂಚಿಗೆ ಸಂಬಂಧಿಸಿದ ಮಾರ್ಗದರ್ಶನ ಸೂತ್ರಗಳು ಕೇಂದ್ರ ಸರ್ಕಾರ ರೂಪಿಸಿಲ್ಲದಿರುವ ಕಾರಣದಿಂದ ಅಂತಿಮವಾಗಿ ಬರಲಿರುವ ಈ ತೀರ್ಪು ಸಹ ಖಾಯಂ ಪರಿಹಾರವನ್ನು ನೀಡಲು ಸಾಧ್ಯವಾಗದೆ ಹೋಗಬಹುದೆಂಬ ಗುಮಾನಿಗಳು ಸಹ ಈಗಾಗಲೇ ಶುರುವಾಗಿವೆ.

ಇಂತಹ ಸ್ಥಿತಿಯಲ್ಲಿ ನ್ಯಾಯಾಧಿಕಾರಣ 1991 ರಲ್ಲಿ ಮಧ್ಯಂತರ ತೀರ್ಪು ನೀಡುವ ಸಮಯಕ್ಕೆ ಅಂದಾಜು ಮಾಡಿದ ಪರಿಸ್ಥಿತಿಗಿಂತ ತೀರ ಸಂಕಷ್ಟದ ಸ್ಥಿತಿ ಪದೇ ಪದೇ ಕಾವೇರಿ ಜಲಾನಯನ ಪ್ರದೇಶದಲ್ಲಿ ಉಂಟಾಗುತ್ತಿದೆ. ಪ್ರಕೃತಿಯ ವಿಕೋಪದಿಂದ ಮಳೆ ತೀರ ಕಡಿಮೆಯಾಗಿ ನ್ಯಾಯಾಧಿಕಾರಣದ ಮಧ್ಯಂತರ ತೀರ್ಪನ್ನು ನಿಗದಿತ ಕಾಲಕ್ಕೆ ಅನುಗುಣವಾಗಿ ಜಾರಿ ಮಾಡಲು ಹಾಗೂ ಒಟ್ಟಾರೆ ವರ್ಷದಲ್ಲಿಯು ಸಹ ಜಾರಿ ಮಾಡಲು ಕರ್ನಾಟಕಕ್ಕೆ ಸಾಧ್ಯವಿಲ್ಲದ ಸ್ಥಿತಿಗಳು ನಿರ್ಮಾಣವಾಗುತ್ತಿವೆ. ಇಂತಹುದೇ ಸ್ಥಿತಿ ಕಾವೇರಿಯ ತಮಿಳುನಾಡಿನ ಪ್ರದೇಶದಲ್ಲಿಯೂ ಮತ್ತಷ್ಟು ಬೀಕರವಾಗಿ ವ್ಯಕ್ತಗೊಂಡಿದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿ ಅನುಸರಿಸಬೇಕಾದ ಸಂಕಷ್ಟ ಪರಿಹಾರ ಸೂತ್ರ ನ್ಯಾಯಾಧಿಕಾರಣದ ತೀರ್ಪಿನಲ್ಲಿ ಇಲ್ಲದಿರುವುದು, ಈ ಮಧ್ಯಂತರ ತೀರ್ಪಿನ ಅನುಷ್ಠಾನಕ್ಕಾಗಿ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ರಚನೆ ಗೊಂಡಿರುವ ಕಾವೇರಿ ನದಿ ಪ್ರಾಧಿಕಾರದಲ್ಲಿಯೂ, ಸಂಕಷ್ಟ ಸೂತ್ರಕ್ಕೆ ಸಂಬಂಧಿಸಿ ಒಮ್ಮತಕ್ಕೆ ಬರಲು ಸಾಧ್ಯವಾಗದ ಕಾರಣದಿಂದ, ಜಲಾನಯನ ಪ್ರದೇಶದಲ್ಲಿ ಅಗತ್ಯ ಮಳೆಯಾಗದಿರುವ ಪ್ರತಿ ಸಂದರ್ಭದಲ್ಲಿಯೂ ಎರಡು ರಾಜ್ಯಗಳ ನಡುವೆ ಬಿಕ್ಕಟ್ಟಿನ ಸ್ಥಿತಿ ಉಂಟಾಗುತ್ತದೆ. ಈ ಬಿಕ್ಕಟ್ಟು ರಾಷ್ಟ್ರದ ಒಕ್ಕೂಟ ಸ್ವರೂಪವನ್ನು ಅಲುಗಾಡಿಸುವ ಮಟ್ಟಕ್ಕೆ ಹೋಗುವ, ಸಂವಿಧಾನಿಕ ಬಿಕ್ಕಟ್ಟನ್ನು ಉಂಟುಮಾಡುವ ಸ್ಥಿತಿಗಳು ನಿರ್ಮಾಣವಾಗುತ್ತಿವೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಂಡವಾಳ ಶಾಹಿ ರಾಜಕೀಯ ಪಕ್ಷಗಳು, ಕೆಲವು ಸಂಕುಚಿತ ವಾದಿ ಗಳು, ಭಾಷಾಂಧ ಶಕ್ತಿಗಳು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಇಂತಹ ಸ್ಥಿತಿಯಿಂದ ಪರಸ್ಪರ ಅಪನಂಬಿಕೆ, ಅವಿಶ್ವಾಸ, ದ್ವೇಷಗಳು ಎರಡು ರಾಜ್ಯಗಳ ಜನರಲ್ಲಿ, ಮುಖ್ಯವಾಗಿ ಕಾವೇರಿ ನದಿ ನೀರಿನಲ್ಲಿ ಜೀವವನ್ನು ಇಟ್ಟುಕೊಂಡಿರುವ ರೈತ,



ಕೂಲಿಕಾರರಲ್ಲಿ ಮೂಡಿದೆ.

ಕಾವೇರಿ ಬಿಕ್ಕಟ್ಟನ್ನು ಇತ್ಯರ್ಥಪಡಿಸಲು ಮಾತುಕತೆಗಳ ಮೂಲಕ ರೈತರ ಪ್ರಯತ್ನ -MIDS ಮುತುವರ್ಜಿ

ಇಂತಹ ಕಠಿಣ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾವೇರಿ ಜಲಾನಯನ ಪ್ರದೇಶದ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ರೈತರನ್ನು ಒಂದೆಡೆ ಸೇರಿಸಿ, ಪರಸ್ಪರ ತಿಳುವಳಿಕೆ, ಪ್ರೀತಿ ವಿಶ್ವಾಸದಿಂದ ಸಂಘರ್ಷ'ದಿಂದ 'ಸಹಕಾರ' ಎಂಬ ಘೋಷಣೆಯೊಂದಿಗೆ ಕಾವೇರಿ ಬಿಕ್ಕಟ್ಟನ್ನು ತಿಳಿಗೊಳಿಸಲು ಹಾಗೂ ನೀರು ಹಂಚಿಕೆ, ನಿರ್ದಿಷ್ಟವಾಗಿ ಸಂಕಷ್ಟ ಪರಿಹಾರ ಸೂತ್ರವನ್ನು ಸೂಚಿಸಲು ಸಾಧ್ಯವಾಗಬಹುದೆಂದು ಗುರಿ ಮತ್ತು ಉದ್ದೇಶದಿಂದ Madras institure of developmental studies (MIDS) ಎಂಬ ಸಂಸ್ಥೆಯ ಮುತುವರ್ಜಿಯೊಂದಿಗೆ ಕಳೆದ ವರ್ಷ ಏಪ್ರಿಲ್‌ನಲ್ಲಿ ಚೆನ್ನೈನಗರದಲ್ಲಿ ಎರಡು ರಾಜ್ಯಗಳ ಕಾವೇರಿ ಜಲಾನಯನ ಪ್ರದೇಶದ ರೈತರು, ರೈತ ಸಂಘಟನೆಗಳು, ಬುದ್ಧಿ ಜೀವಿಗಳು, ನೀರಾವರಿ ತಜ್ಞರ ಸಭೆ ನಡೆಯಿತು. MIDS ನ ಈ ಪ್ರಯತ್ನಕ್ಕೆ ತುಂಬಾ ಉತ್ತಮ ಪ್ರತಿಕ್ರಿಯೆ ದೊರೆತು ಯಶಸ್ವಿ ಸಭೆ ನಡೆದು, ಮುಂದಿನ ಸಭೆಯನ್ನು ಬೆಂಗಳೂರಿನಲ್ಲಿ ಸಂಘಟಿಸುವುದೆಂದು ನಿರ್ಧರಿಸಲಾಯಿತು.

ಈ ಹಿನ್ನೆಲೆಯಲ್ಲಿ ಜೂನ್ 4-5,2003ರಲ್ಲಿ ಬೆಂಗಳೂರಿನ National Institure of Advanced studies (NIAS) ನಲ್ಲಿ ಮತ್ತಷ್ಟು ಯಶಸ್ವಿಯಾದ ಸಭೆ ನಡೆಯಿತು.

ಈ ಸಭೆಗಳಲ್ಲಿ ಎರಡು ರಾಜ್ಯಗಳ ರೈತರು, ಪುಟ್ಟಣ್ಣಯ್ಯ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ (KPRS)ದ ಮುಖಂಡರು, ಕರ್ನಾಟಕ ಪ್ರಾಂತ ರೈತ ಸಂಘ (KPRS)ದ ಮುಖಂಡರು ರಾಜ್ಯದ ತಜ್ಞರು, ಬುದ್ಧಿಜೀವಿಗಳು ಭಾಗವಹಿಸಿದ್ದರು. ತಮಿಳುನಾಡಿನ ಕಾವೇರಿ ಪ್ರದೇಶದ ಅಚ್ಚುಕಟ್ಟುದಾರರ ಸಂಘದ

ಪುಟ 10ಕ್ಕೆ

ಕರ್ನಾಟಕದಕಲ್ಲಿ....

ಕಾವೇರಿ ಕುಟುಂಬದ ಪ್ರಯತ್ನಕ್ಕೆ ಕರ್ನಾಟಕ ರಾಜ್ಯದಲ್ಲಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಒಟ್ಟಾರೆ ಎಂಐಡಿಎಸ್‌ನ ಈ ಪ್ರಯತ್ನದಿಂದ ಎರಡು ರಾಜ್ಯಗಳ ರೈತರಲ್ಲಿ ಎರಡು ರಾಜ್ಯಗಳಲ್ಲಿನ ನೀರಿನ ಬಳಕೆ, ದುರ್ಬಳಕೆ, ಕೃಷಿಪದ್ಧತಿ, ಜಲಾಶಯಗಳಲ್ಲಿನ ನೀರಿನ ಮಟ್ಟ, ಅಂತರಜಲದ ಬಳಕೆ, ಲಭ್ಯತೆ ಇತ್ಯಾದಿ ಹಲವಾರು ವಿಷಯಗಳ ಬಗ್ಗೆ ಹಲವು ದಶಕಗಳಿಂದ ಇದ್ದ ಅನುಮಾನ ಅಪನಂಬಿಕೆಗಳು ಬಹುತೇಕ ಮಾಯವಾಗಿ, ನೈಜ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿದೆ. ಮತ್ತು ಪರಸ್ಪರ ಒಡನಾಟ ಸ್ನೇಹಮಯವಾದ ವಾತಾವರಣ ಉಂಟಾಗಿದೆ.

ಈ ಸ್ನೇಹಮಯ ವಾತಾವರಣ ಮತ್ತು ಪರಸ್ಪರ ವಿಶ್ವಾಸ ಖಂಡಿತ ಮುಂದಿನ ದಿನಗಳಲ್ಲಿ ಸಮಸ್ಯೆಯ ಪರಿಹಾರಕ್ಕೆ ತುಂಬಾ ಮಹತ್ವದ ಕಾಣಿಕೆ ನೀಡಲಿದೆ.

ಕಾವೇರಿ ಕುಟುಂಬಕ್ಕೆ ರೈತರ ಅದ್ಭುತ ಸ್ಪಂದನೆ

ಅತ್ಯಂತ ರಾಜಕೀಯಕರಣ ಗೊಂಡಿರುವ ಮತ್ತು ತೀರ ಜಟಿಲವಾದ ಕಾವೇರಿ ನೀರಿನ ಹಂಚಿಕೆಯ ಸಮಸ್ಯೆಯನ್ನು ಪರಸ್ಪರ ತಿಳುವಳಿಕೆ ಮತ್ತು ವಿಶ್ವಾಸದಿಂದ ಪರಿಹರಿಸಲು 'ಕಾವೇರಿ ಕುಟುಂಬ' ಮಾಡುತ್ತಿರುವ ಪ್ರಯತ್ನಕ್ಕೆ ತಮಿಳುನಾಡಿನ ರೈತರ ಸ್ಪಂದನೆ ನಿಜವಾಗಲು ಅಭೂತಪೂರ್ವ. 'ಕಾವೇರಿ ಕುಟುಂಬ'ದ ಸದಸ್ಯರು ಜಲಾಶಯಗಳ ಮತ್ತು ಕ್ಷೇತ್ರ ದರ್ಶನಕ್ಕೆ ಹೋದೆಡೆಯಲ್ಲಿ ನೂರಾರು ರೈತರು, ರೈತ ಸಂಘಟನೆಗಳ ಕಾರ್ಯಕರ್ತರು, ಆತ್ಮೀಯವಾದ ಸ್ವಾಗತವನ್ನು ನೀಡಿ ಯಥೇಚ್ಛವಾಗಿ ನೀರು ಬರುತ್ತಿದ್ದ ಸಂದರ್ಭದಲ್ಲಿ ತಮ್ಮ ಜೀವನದ ಸ್ಥಿತಿ, ಇತ್ತೀಚಿನ 3-4 ವರ್ಷಗಳ ತೀರ ಅಭಾವದ ಪರಿಸ್ಥಿತಿಯಿಂದ ಉಂಟಾಗಿರುವ ಭೀಕರ ಪರಿಣಾಮಗಳನ್ನು ವಿವರಿಸುತ್ತಾ, ಎರಡು ರಾಜ್ಯಗಳ ರೈತರೇ ನಡೆಸಿರುವ ಈ ಉತ್ತಮ ಪ್ರಯತ್ನಕ್ಕೆ ಯಶಸ್ಸು ದೊರೆಯಲೆಂದು ಮತ್ತು 'ಕಷ್ಟ' ಮತ್ತು 'ಸುಖ' ಎರಡನ್ನು ಹಂಚಿ ಕೊಳ್ಳುವ ರೀತಿಯಲ್ಲಿ ಸಮಸ್ಯೆಯ ಪರಿಹಾರ ತ್ವರಿತವಾಗಿ ಲಭಿಸಲೆಂದು ಹಾರೈಸುತ್ತಿದ್ದರು.

ಇತಿಹಾಸದ ಪಠ್ಯಪುಸ್ತಕಗಳು

ಮತ್ತೊಂದು ಪರಾಮರ್ಶೆಯೇಕೆ ?

ಮಾನವ ಸಂಪನ್ಮೂಲ ಮಂತ್ರಿ ಅರ್ಜುನ್ ೯ಗ್‌ರವರು 'ನಂಜೀಕರಣ'ವನ್ನು ನಿರ್ಮೂಲ ಾಡುವ ಅಗತ್ಯವಿದೆಯೆಂದು ಬಹಳಷ್ಟು ದ್ದು-ಗದ್ದಲ ಮಾಡಿದ ನಂತರ ಈಗ ಸದ್ಯಕ್ಕೆ ನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳನ್ನು ಂತೆಗೆದುಕೊಳ್ಳದಿರಲು ನಿರ್ಧರಿಸಿದ್ದಾರೆ. ೂವರು ಪ್ರಖ್ಯಾತ ಇತಿಹಾಸಕಾರರಿರುವ ಒಂದು ಮಿತಿಯನ್ನು ರಚಿಸಿದ್ದಾರೆ. ಅವರು ಈ ಠ್ಯಪುಸ್ತಕಗಳ 'ತ್ವರಿತ ಪರಾಮರ್ಶೆ' ನಡೆಸಿ ಈ ರ್ಷ ಆ ಪಠ್ಯಗಳನ್ನು ಮುಂದುವರೆಸಲು ಾಧ್ಯವಾಗುವಂತೆ ಶಿಫಾರಸ್ಸುಗಳನ್ನು ನೀಡಬೇಕಂತೆ. ಂದರೆ ಯಾವ ಆಕ್ಷೇಪಾರ್ಹ ಪರಿಚ್ಛೇದಗಳನ್ನು ೆಗೆಯಬೇಕು ಹಾಗೂ ಹಾಗೆ ತೆಗೆದ ಜಾಗವನ್ನು ುಂಬುವುದು ಹೇಗೆ ಎಂದಷ್ಟೇ ಶಿಫಾರಸು ಮಾಡಬೇಕು. ಈ ಮೂವರು ಚರಿತ್ರೆಕಾರರೆಂದರೆ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಾಜಿ ಅಧ್ಯಕ್ಷ ಎಸ್.ಶೆಟ್ಟರ್, ಶಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ್ಟಡೀಸ್‌ನ ಜೆ.ಎಸ್.ಗ್ರೇವಾಲ್ ಹಾಗೂ ಮೌಲಾನಾ ಅಝಾದ್ ಏಶ್ಯನ್ ಅಧ್ಯಯನ ಸಂಸ್ಥೆಯ ಸ್ಥಾಪಕ ನಿರ್ದೇಶಕ ಬರುನ್ ಡೇ. ಮಂತ್ರಿಗಳ ಈ ಕ್ರಮ ಹೊಸ ಸರ್ಕಾರ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಶಿಕ್ಷಣವನ್ನು ಕುರಿತು ಹೇಳಿರುವಷ್ಟರ ಮಟ್ಟಿಗೆ ಬರುವುದಿಲ್ಲ.

ಇತಿಹಾಸದ ಕೋಮುವಾದಿ ಕಣ್ಣೋಟ


ಕಳೆದ ಆರು ವರ್ಷಗಳಲ್ಲಿ ಶಿಕ್ಷಣ ತಜ್ಞರು, ಾಗರಿಕರಿಂದ ಶಿಕ್ಷಣದ ಕೋಮುವಾದೀಕರಣದ ರುದ್ಧ, ಅದರಲ್ಲೂ ಎನ್‌ಸಿಇಆರ್‌ಟಿ ಇತಿಹಾಸದ ಠ್ಯಪುಸ್ತಕಗಳ ಪರಿಷ್ಕರಣೆಯ ವಿರುದ್ಧ ಬಲವಾದ ್ರತಿಭಟನೆಗಳನ್ನು ಕಂಡಿದ್ದೇವೆ. ಶಿಕ್ಷಣವನ್ನು ಸಂಘ ರಿವಾರದ ರಾಜಕೀಯ ಅಜೆಂಡಾಕ್ಕೆ ನುಗುಣವಾಗಿಸುವಲ್ಲಿ ಇತಿಹಾಸ ಒಂದು ುಹತ್ವದ ವಿಷಯ. ಏಕೆಂದರೆ ಅದು ನಮ್ಮ ೂತಕಾಲದ ಒಂದು ದೃಶ್ಯವನ್ನು ನೀಡುವುದಲ್ಲದೆ ವಿಷ್ಯದ ಕಣ್ಣೋಟವನ್ನು ನೀಡುತ್ತದೆ. ಇದನ್ನು ಂದೂ ರಾಷ್ಟ್ರದ ಅಜೆಂಡಾ ಕುರಿತಂತೆ ರ್ವಸಮ್ಮತಿ ರೂಪಿಸಲು ಬಳಸಲು ಸಾಧ್ಯ ಂಬುದನ್ನು ಸಂಘ ಪರಿವಾರ ಕಂಡಿತು. ಲವಾರು ದಶಕಗಳಿಂದ ಆರ್‌ಎಸ್‌ಎಸ್ ತನ್ನ ೈನಂದಿನ ಶಾಖೆಗಳಲ್ಲಿ ಎಂತಹ ಕೋಮುವಾದಿ ಾಜಕೀಯ ಅಪಪ್ರಚಾರವನ್ನು ನಡೆಸಿಕೊಂಡು ಂದಿತ್ತೋ ಅದನ್ನು ಇಡೀ ಶಿಕ್ಷಣರಂಗಗಳಲ್ಲಿ ೊಡ್ಡ ಪ್ರಮಾಣದಲ್ಲಿ ತರಲು ಎನ್‌ಸಿಇಐರ್‌ಟಿ ಠ್ಯಪುಸ್ತಕಗಳನ್ನು ಪರಿಷ್ಕರಿಸಿತು.

ಈ ಪ್ರಾಯೋಜಿತ ಪಠ್ಯಪುಸ್ತಕಗಳು ಭಾರತದ ೂಲತಃ ಒಂದು ಹಿಂದೂ ರಾಷ್ಟ್ರವೆನ್ನುತ್ತದೆ. ದರ ನಾಗರಿಕತೆಯ ಬೇರುಗಳು ವೇದಗಳಲ್ಲಿವೆ, ರ್ಯರು ಈ ದೇಶದ ಮೂಲನಿವಾಸಿಗಳು, ಈಗಿನ ಂದುಗಳು ಅವರ ವಂಶಜರು, ಇತರ ರ್ಮಾವಲಂಬಿಗಳೆಲ್ಲಾ ಹೊರಗಿನವರು ಎನ್ನುತ್ತದೆ. ೈದಿಕ ನಾಗರಿಕತೆಯ ಕಾಲಾವಧಿಯನ್ನು ಸಾವಿರಾರು ರ್ಷಗಳಷ್ಟು ಹಿಂದಕ್ಕೆ ನೂಕಿ ಅದೇ ಜಗತ್ತಿನ ಅತೀ ್ರಾಚೀನ ನಾಗರೀಕತೆ, ಇತರ ನಾಗರಿಕತೆಗಳನ್ನೆಲ್ಲಾ ಲಿಸಿದದು ಅದೇ, ಬೇರೆಯವರಿಂದ ಅದು ಲಿಯಬೇಕಾದ್ದೇನಿಲ್ಲ ಎಂದು ಅವು ಹೇಳುತ್ತವೆ. ುಧ್ಯಯುಗ ಕೊನೆಗೊಂಡದ ಮುಸ್ಲಿಂ ವಿಜಯಗಳ ುಗ, ಆ ಅವಧಿಯಲ್ಲಿ ಸಾಂಸ್ಕೃತಿಕ ಮುನ್ನಡೆಯೇನೂ ಕಂಡುಬರಲಿಲ್ಲವಂತೆ. ಆಧುನಿಕ ಯುಗದ ಆರಂಭದ ಹಾಗೂ ನಂತರ ಸಮಾಜ ಸುಧಾರಕರಿಗೆ ಸ್ಥಾನವಿಲ್ಲ. ಸ್ವಾತಂತ್ರ್ಯ ಮುಖ್ಯವಾಗಿ ಹಿಂದುಗಳ ಪ್ರಯತ್ನಗಳಿಂದ ಬಂತಂತೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಬಗ್ಗೆ ಈ ಪಠ್ಯ ಪುಸ್ತಕಗಳಲ್ಲಿ ನಕಾರಾತ್ಮಕ ಪ್ರಸ್ತಾಪಗಳಿವೆ, ಮಹಿಳೆಯರು ಲೆಕ್ಕಕ್ಕೇ ಇಲ್ಲ.

ಹೀಗೆ ಕೋಮುವಾದಿ ಚರಿತ್ರೆ ಲೇಖನ ಮತ್ತು ಅದರ ಸ್ಥಾನದಲ್ಲಿ ಧರ್ಮನಿರಪೇಕ್ಷ ಇತಿಹಾಸದ ಬೋಧನೆ ಕೆಲವು ಪರಿಚ್ಛೇದಗಳನ್ನು ಕೈಬಿಟ್ಟು ಕೆಲವು ವಿವರಗಳನ್ನು ಸೇರಿಸುವ ಪ್ರಶ್ನೆಯಲ್ಲ ಎಂಬುದು ಸ್ಪಷ್ಟ. ಇಲ್ಲಿ ಬೇಕಾಗಿರುವುದು ವಿಭಜನಕಾರಿ, ಅಂಧಶ್ರದ್ಧೆಯ ಹಾಗೂ ವಾಸ್ತವಕ್ಕಿಂತ ಕಟ್ಟುಕಥೆಯನ್ನಾಧರಿಸಿದ ಕಣ್ಣೋಟದ ಸಂಪೂರ್ಣ ನಿರಾಕರಣೆ. ಆಕ್ಷೇಪಾರ್ಹ ಪಠ್ಯಗಳನ್ನು ಹೊಸ ಸರಕಾರ ತಕ್ಷಣವೇ ಹಿಂತೆಗೆದುಕೊಳ್ಳಬೇಕಾಗಿತ್ತು.

ಈಗ ಹಿಂತೆಗೆದುಕೊಳ್ಳದಿದ್ದರೆ......

ಸಮಿತಿಗಳನ್ನು ನೇಮಿಸುವುದು ನಿರ್ಣಯಗಳನ್ನು ಮುಂದೂಡುವುದಕ್ಕಾಗಿ ಎಂಬುದೀಗ ನಮ್ಮ ಸಾಮಾನ್ಯ ಅನುಭವ. ಹೊಸ ಶಿಕ್ಷಣ ಮಂತ್ರಿಗಳು ರಚಿಸಿರುವ ಪರಾಮರ್ಶೆ ಸಮಿತಿಯಿಂದ ನಿರೀಕ್ಷಿಸುವುದೂ ಇದನ್ನೇ. ಬಿಜೆಪಿಗೆ ಇದರಿಂದ ಖುಶಿಯಾಗಿರುತ್ತದೆ, ಮುರಳಿಮನೋಹರ ಜೋಷಿಯವರಿಗೆ ತನ್ನ ಕೆಲಸಗಳು ಎಷ್ಟು ಪರಿಣಾಮಕಾರಿ ಎಂದು ಜಂಭ



ಕೊಚ್ಚಿಕೊಳ್ಳಬಹುದು.

ಕೆಲವರು ಇದೊಂದು ಜಾಗರೂಕ ಹೆಜ್ಜೆ ಎಂದು ಚಪ್ಪಾಳೆ ತಟ್ಟಬಹುದು. ಆದರೆ ಈ ಪಠ್ಯಪುಸ್ತಕಗಳನ್ನು ಈಗಾಗಲೇ ಸಾಕಷ್ಟು ಪರಾಮರ್ಶೆ ಮಾಡಿಲ್ಲವೆ ಎಂದು ಹಲವರು ಮಂತ್ರಿಗಳನ್ನು ಕೇಳಬಹುದು. ಈ ಪಠ್ಯಪುಸ್ತಕಗಳ ಬಗ್ಗೆ ಸಾರ್ವಜನಿಕ ವೇದಿಕೆಗಳಲ್ಲಿ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ವ್ಯಾಪಕವಾದ ಚರ್ಚೆ, ವಿಶ್ಲೇಷಣೆ ನಡೆದಿದೆ. ಈ ಪುಸ್ತಕಗಳು ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು. ಅವುಗಳು ಇರಲೇಬಾರದಾಗಿತ್ತು ಎಂಬುದು ಈ ಎಲ್ಲಾ ಚರ್ಚೆ, ಪರಾಮರ್ಶೆಗಳ ತೀರ್ಮಾನ. ಈ ಬಗ್ಗೆ ಹಲವು ಆಧಿಕಾರಿಕ ವರದಿಗಳು, ಪರಾಮರ್ಶೆಗಳು ಈಗಾಗಲೇ ನಮ್ಮ ಮುಂದಿವೆ. ನಿಜವಾಗಿಯೂ ಮಂತ್ರಿಗಳು ಶಿಕ್ಷಣದ ನಂಜೀಕರಣವನ್ನು ಹೋಗಲಾಡಿಸಬೇಕೆಂದು ಬಯಸಿದ್ದರೆ, ಅದಕ್ಕೆ ಬೇಕಾದ ರಾಜಕೀಯ ಇಚ್ಛಾ ಶಕ್ತಿಯಿದ್ದಿದ್ದರೆ ಹೀಗೆ ಇನ್ನೊಂದು ಪರಾಮರ್ಶೆ ಸಮಿತಿಯನ್ನು ನೇಮಿಸಬೇಕಾಗಿರಲಿಲ್ಲ. ಆದರೆ ಅವರು ಕೆಲವು ಪರಿಚ್ಛೇದಗಳನ್ನು ಕೈಬಿಟ್ಟು ಅವನ್ನು ಸ್ವೀಕಾರಾರ್ಹಗೊಳಿಸಲು ಅವಕಾಶ ನೀಡಿದ್ದಾರೆ.

ಒಮ್ಮೆ ಈ ರೀತಿ ಬೇರೆಯಾರಿಗಲ್ಲದಿದ್ದರೂ, ಮಂತ್ರಿಗಳಿಗಂತೂ ಖುಶಿಯಾದರೆ ಮುಂದೆ ಪ್ರಶ್ನೆ ಬಂದೇ ಬರುತ್ತದೆ. ಇನ್ನು ಈ ಪಠ್ಯಪುಸ್ತಕಗಳನ್ನು ರದ್ದುಮಾಡುವ ಅಗತ್ಯವಾದರೂ ಎಲ್ಲಿದೆ? ಬಹಳಮಟ್ಟಿಗೆ ಈ ಕೋಮುವಾದಿ ಪುಸ್ತಕಗಳನ್ನು ಧರ್ಮನಿರಪೇಕ್ಷತೆಯ ಪರವಾಗಿ ಹಾಗೂ ಕೋಮುವಾದಿ ನೀತಿಗಳ ಕುರಿತು ಅಸಂತುಷ್ಟಿಯ ಜನಾದೇಶದ ಹಿನ್ನೆಲೆಯಲ್ಲಿ ತಕ್ಷಣವೇ ಹಿಂತೆಗೆದುಕೊಳ್ಳದಿದ್ದರೆ ಮುಂದೆ ಅದನ್ನು

ನಳಿನಿ ತನೇಜಾ

ಹಿಂತೆಗೆದುಕೊಳ್ಳುವುದು ಬಹಳ ಕಷ್ಟವಾಗುತ್ತದೆ.

ಪರಾಮರ್ಶೆಗಳು ಹಲವಾರು

ಭಾರತದ ಇತಿಹಾಸಕಾರರ ಪ್ರಧಾನ ಸಂಘಟನೆ ಭಾರತೀಯ ಇತಿಹಾಸ ಸಮ್ಮೇಳನ (ಐಹೆಚ್‌ಸಿ) ಬಿಜೆಪಿ ಇತಿಹಾಸ ಲೇಖನದಲ್ಲಿ ತನ್ನ 'ಸಂಶೋಧನೆ'ಗಳನ್ನು ಸಮರ್ಥಿಸಿಕೊಳ್ಳಲು ಪಠ್ಯಕ್ರಮದ ಚೌಕಟ್ಟನ್ನು ಬದಲಿಸಲು ನಿರಾಕರಿಸಿದಂದಿನಿಂದಲೇ ಈ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ಬಂದಿದೆ. 1999 ರ ಕೋಝಿಕೋಡ್ ಅಧಿವೇಶನದಲ್ಲಿ ಈ ಬಗ್ಗೆ ತನ್ನ ಆಕ್ಷೇಪಗಳನ್ನು ಅದು ವ್ಯಕ್ತಪಡಿಸಿತ್ತು. 2001 ರ ಕೋಲ್ಕತ್ತಾ ಅಧಿವೇಶನ ಇದನ್ನು ಪ್ರಶ್ನಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತ್ತು. 2002 ರಲ್ಲಿ ಹೊಸ ಪಠ್ಯಪುಸ್ತಕಗಳನ್ನು ಪ್ರಕಟಿಸಿದ ನಂತರ ತನ್ನ ಅಮೃತಸರ ಅಧಿವೇಶನದಲ್ಲಿ ಕಾರ್ಯಕಾರಿ ಸಮಿತಿ ಈ ಪಠ್ಯಪುಸ್ತಕಗಳ ನಡೆಸಬೇಕು ಎಂದು ನಿರ್ಧರಿಸಿತು. ಈ ಪ್ರಕಾರ ನೇಮಿಸಲ್ಪಟ್ಟ ಸಮಿತಿ (ಇದರಲ್ಲಿ ಇತಿಹಾಸಕಾರರಾದ ಇರ್ಫಾನ್ ಹಬಿಬ್, ಸುವೀರ್ ಜೆಸ್ವಾಲ್ ಮತ್ತು ಆದಿತ್ಯ ಮುಖರ್ಜಿ ಸದಸ್ಯರಾಗಿದ್ದರು) ಇತರ ಹಲವಾರು ಇತಿಹಾಸಕಾರರ ಅಭಿಪ್ರಾಯ ಸಂಗ್ರಹಿಸಿ ಒಂದು ವರದಿಯನ್ನು ಪ್ರಕಟಿಸಿತು.

ಈ ವರದಿಯನ್ನು ಕಾರ್ಯಕಾರಿ ಸಮಿತಿ ಅನುಮೋದಿಸಿತು. 2003 ರಲ್ಲಿ ಇದನ್ನು ಐಹೆಚ್‌ಸಿ ಪ್ರಕಟಿಸಿತು. ಇದರಲ್ಲಿ ಮೊದಲ ನಾಲ್ಕು ಪಠ್ಯಪುಸ್ತಕಗಳಿಂದ ಪಟ್ಟಿ ಮಾಡಿದ ತಪ್ಪುಗಳೇ 130 ಪುಟಗಳಷ್ಟಿವೆ. ಪುಟಕ್ಕೊಂದರಂತೆ ತಪ್ಪುಗಳಿವೆ ಎಂಬ ವರದಿ ಅವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕಾಗುತ್ತದೆ ಎಂಬ ಸ್ಪಷ್ಟ ತೀರ್ಮಾನಕ್ಕೆ ಬಂದಿತ್ತು. ಈ ಪಠ್ಯಪುಸ್ತಕಗಳ ಹಿಂದಿರುವ ಸಂಕುಚಿತವಾದದ ಪೂರ್ವಾಗ್ರಹವನ್ನು ಬದಲಿಸದೆ ಕೇವಲ ಈ ದೀರ್ಘ ಪಟ್ಟಿಯಲ್ಲಿರುವ ತಪ್ಪುಗಳನ್ನು ಸರಿಪಡಿಸಿದರಷ್ಟೇ ಇವನ್ನು ಪಠ್ಯಪುಸ್ತಕಗಳೆಂದು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಅದು ಅಭಿಪ್ರಾಯಪಟ್ಟಿತ್ತು.

ಅಲ್ಲದೆ ಬೇರೆ ಬೇರೆ ಇತಿಹಾಸಕಾರರು ಈ ಪಠ್ಯಪುಸ್ತಕಗಳ ಬಗ್ಗೆ, ಆರ್‌ಎಸ್‌ಎಸ್‌ನ ಇತಿಹಾಸ ಕಣ್ಣೋಟದ ಪರಿಣಾಮಗಳ ಬಗ್ಗೆ, ಮುಖ್ಯವಾಗಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಸೃಷ್ಟಿಸುವಲ್ಲಿ, ದಲಿತರ ಪಾತ್ರವನ್ನು ಇಲ್ಲವಾಗಿಸುವಲ್ಲಿ ಅದರ ಪಾತ್ರ ಹಾಗೂ ಮಹಿಳೆಯರ ಬಗ್ಗೆ ಅಡಕವಾಗಿರುವ ಪಕ್ಷಪಾತದ ದೃಷ್ಟಿ ಇವುಗಳೆಲ್ಲದರ ಬಗ್ಗೆ ಬರೆದಿದ್ದಾರೆ. ಹಲವು ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸಂಘಟನೆಗಳು ಇವುಗಳ ವಿರುದ್ಧ ಸತತವಾಗಿ ಪ್ರತಿಭಟನೆ ವ್ಯಕ್ತಪಡಿಸಿದೆ. ಬಿಜೆಪಿ ಆಳ್ವಿಕೆಯ ಕಾಲದಲ್ಲಿ ರಚಿಸಿದ ಸಂಸದೀಯ ಶಿಕ್ಷಣ ವೇದಿಕೆ ಹಲವು ಪ್ರಶ್ನೆಗಳನ್ನೆತ್ತಿದೆ, ಸಂಸತ್ತಿನಲ್ಲಿ ಬಲವಾದ ಟೀಕೆಗಳನ್ನು ಮಾಡಿದೆ. ಸಹಮತ್ ಸಂಘಟನೆಗಳ 14 ಬಿಜೆಪಿಯೇತರ ರಾಜ್ಯಗಳ ಶಿಕ್ಷಣ ಮಂತ್ರಿಗಳ ಸಮಾವೇಶದಲ್ಲಿ ಈ ಶಿಕ್ಷಣ ಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಈ ಪಠ್ಯಗಳನ್ನು ಜಾರಿಗೆ ತರುವುದಿಲ್ಲ ಎಂದು ನಿರ್ಣಯಿಸಿದ್ದರು. ವಿವಿಧ ರಾಜಕೀಯ ಪಕ್ಷಗಳ ಹಲವಾರು ಸಂಸತ್ ಸದಸ್ಯರು ಈ ಮೂಲಕ ಶಿಕ್ಷಣದ ಕೋಮುವಾದೀಕರಣದ ವಿರುದ್ಧ ಆತಂಕ ವ್ಯಕ್ತಪಡಿಸಿದ್ದಾರೆ. ಎಡಪಕ್ಷಗಳಂತೂ ಬಿಜೆಪಿಯ ಶಿಕ್ಷಣ ನೀತಿಯನ್ನು ಬಲವಾಗಿ ವಿರೋಧಿಸಿದ್ದವು ಹಾಗೂ ಸಾಮಾನ್ಯ ಕನಿಷ್ಟ ಕಾರ್ಯಕ್ರಮಗಳಲ್ಲಿ ಶಿಕ್ಷಣದ ಕೇಸರೀಕರಣವನ್ನು ನಿರ್ಮೂಲ ಮಾಡುವ ಅಂಶವನ್ನು ಸೇರಿಸುವಂತೆ ಮಾಡಿದ್ದವು.

ಜನಾದೇಶಕ್ಕೆ ಅವಮಾನ

ಇಷ್ಟೆಲ್ಲಾ ವರದಿಗಳು ನಿರ್ಣಯಗಳು ಇದ್ದರೂ ಹೊಸ ಸರ್ಕಾರಕ್ಕೆ ಇನ್ನೊಂದು ಪರಾಮರ್ಶೆ ಬೇಕೆ? ಈ ಪುಸ್ತಕಗಳು ಸಂವಿಧಾನದಲ್ಲಿನ ಮೌಲ್ಯಗಳಿಗೆ ವಿರುದ್ಧವಾದವುಗಳು, ಅವು ಮಿಥ್ಯೆಗಳನ್ನು ಇತಿಹಾಸದ ಸತ್ಯಸಂಗತಿಗಳೆಂದು ಪ್ರಸ್ತುತ ಪಡಿಸುವ ಕೆಟ್ಟ ಪುಸ್ತಕಗಳು. ಇತಿಹಾಸಕಾರು ಹೇಳಿರುವಂತೆ "ಕೋಮುವಾದವೆಂಬುದು ಕೇವಲ ಇನ್ನೊಂದು ಪಕ್ಷಪಾತವಲ್ಲ, ಅದು ಜನಾಂಗದ್ವೇಷ. ಈ ಕೋಮುವಾದಿ ಪಕ್ಷಪಾತವನ್ನು ನಿವಾರಿಸುವುದು ಸರ್ಕಾರದ ನಾಗರೀಕ ಹಾಗೂ ಸಾಂವಿಧಾನಿಕ ಕರ್ತವ್ಯ. ಮಾನವ ಸಂಪನ್ಮೂಲ ಮಂತ್ರಾಲಯ ಈ ಪಠ್ಯಪುಸ್ತಕ ಪ್ರಶ್ನೆಯ ಬಗ್ಗೆ ಆರಾಮವಾಗಿ ನಿರ್ಧರಿಸೋಣ ಎಂಬ ನಿಲುವು ತಳೆದರೆ ಈ ಪುಸ್ತಕಗಳ ಬಳಕೆ ಮುಂದುವರಿಯುತ್ತದೆ. ಇದು ಧರ್ಮನಿರಪೇಕ್ಷ ಪ್ರಜಾಪ್ರಭುತ್ವಕ್ಕೆ ಮತ್ತು ಯುಪಿಎಯನ್ನು ಅಧಿಕಾರದಲ್ಲಿ ಕುಳ್ಳಿರಿಸಿದ ಜನಾದೇಶಕ್ಕೆ ಮಾಡಿದ ಅಪಮಾನವಾಗುತ್ತದೆ' ಎಂಬ ಅವರ ಅಭಿಪ್ರಾಯ ಗಮನಾರ್ಹ.

ಮಾನವ ಸಂಪನ್ಮೂಲ ಮಂತ್ರಿಗಳು ಈ ಪುಸ್ತಕಗಳನ್ನು ಹಿಂತೆಗೆದುಕೊಂಡರೆ ಅದು ಜನಾದೇಶಕ್ಕೆ ಅನುಗುಣವಾಗಿರುತ್ತದಷ್ಟೇ ಅಲ್ಲ, ಸರಿಯಾದ ವಿಧಿ-ವಿಧಾನಗಳಿಂದ ಅನುಮೋದನೆಗೊಂಡ ತಜ್ಞರ ಅಭಿಪ್ರಾಯಗಳಿಗೂ ಅನುಗುಣವಾಗಿರುವ ಕ್ರಮವಾಗುತ್ತದೆ.

ಒಂದು ಜಾತ್ಯತೀತ ಶಿಕ್ಷಣ ಬೇಕೆ, ಅಥವಾ ಕೋಮುವಾದಿ ಶಿಕ್ಷಣ ಬೇಕೇ ಎಂಬ ರಾಜಕೀಯ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಈ ಪಠ್ಯಪುಸ್ತಕಗಳನ್ನು ಈ ಶಾಲಾ ವರ್ಷದಿಂದಲೇ ಹಿಂತೆಗೆದುಕೊಳ್ಳಬೇಕು, ಅವುಗಳ ವಿತರಣೆಯನ್ನು ನಿಲ್ಲಿಸಬೇಕು. ಸದ್ಯಕ್ಕೆ ಹಳೆಯ ಎನ್‌ಸಿಇಐರ್‌ಟಿ ಪಠ್ಯ ಪುಸ್ತಕಗಳನ್ನು ಬಳಸಬಹುದು.

ಹೊಸ ಸನ್ನಿವೇಶ ಮತ್ತು ಕಾರ್ಮಿಕ ವರ್ಗ

ಚುನಾವಣೆಯ ನಂತರ ಕೇಂದ್ರದಲ್ಲಿ ಹೊಸ ಸರ್ಕಾರದ ರಚನೆಯಲ್ಲಿ ಹಾಗೂ ಈ ಸರ್ಕಾರದ ಆಡಳಿತದ ದಿಕ್ಕನ್ನು ನಿರ್ಣಯಿಸುವಲ್ಲಿ ಎಡಪಕ್ಷಗಳು ಒಂದು ನಿರ್ಣಾಯಕ ಬೃಹತ್ ಶಕ್ತಿಯಾಗಿವೆ ಎಂಬುದು ಇಂದು ಸಾರ್ವತ್ರಿಕವಾಗಿ ಅಂಗೀಕಾರಗೊಂಡ ವಿಷಯ.

ಕೇಂದ್ರಮಂತ್ರಿ ಮಂಡಲದಲ್ಲಿ ಸೇರದೇ ಬಾಹ್ಯ ಬೆಂಬಲ ನೀಡುವ ಎಡಪಕ್ಷಗಳಿಗೆ ಹಾಗೂ ಆಡಳಿತದಲ್ಲಿ ಪಾಲುದಾರರಾದ ಮಿತ್ರ ಪಕ್ಷಗಳಿಗೆ ಕಾಂಗ್ರೆಸ್ ವಿತರಿಸಿದ ಕರಡು ಕಾರ್ಯಕ್ರಮ ಕಾಂಗ್ರೆಸ್‌ನ ಹಳೆಯ ಧೋರಣೆಯ ಆಧಾರದಲ್ಲಿಯೇ ಇದ್ದಿತು. ಸ್ವಾಭಾವಿಕವಾಗಿ ಇದು ಎಡಪಕ್ಷಗಳಿಗೆ ಸ್ವೀಕೃತವಾಗುವ ವಿಷಯವಲ್ಲ. ಈ ಬಗ್ಗೆ ಎಡಪಕ್ಷಗಳಿಂದ ತೀವ್ರ ಆಕ್ಷೇಪಣೆ ಪ್ರಕಟವಾದ ನಂತರ ಕೊನೆಯಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ವಿತರಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹಲವು ಮೂಲ ಬದಲಾವಣೆಗಳನ್ನು ತರುವಲ್ಲಿ ಕಾಂಗ್ರೆಸ್ ಪಕ್ಷ ನಿರ್ಭಂದಿತವಾಯಿತು. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಬಗ್ಗೆ ನಿಲುವು, ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ತರುವ ಬಗ್ಗೆ, ಪ್ಯಾಲೆಸ್ಟಿನ್ ಹಾಗೂ ಇರಾಕ್ ಸೇರಿದಂತೆ ಹೊಸ ಸರ್ಕಾರ ಅನುಸರಿಸಬೇಕಾದ ವಿದೇಶಾಂಗ ನೀತಿ ಇವುಗಳ ಬಗ್ಗೆ ಆರಂಭದ ಕರಡು ಕಾರ್ಯಕ್ರಮದಲ್ಲಿ ಪ್ರಸ್ತಾವನೆ ಇರಲಿಲ್ಲ. ಆದರೆ ಮುಂದೆ ಪ್ರಕಟಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ಎಲ್ಲಾ ವಿಷಯಗಳು ಪ್ರಕಟವಾದವು. ಕೋಮು ಘರ್ಷಣೆ ತಡೆಯಲು ಸೂಕ್ತ ಕಾನೂನು ತರುವುದು, ಭೂಸುಧಾರಣೆಯನ್ನು ತ್ವರಿತಗೊಳಿಸುವುದು, ಕೃಷಿ ಉತ್ಪಾದನೆಗೆ ಸೂಕ್ತ ಬೆಲೆ ನಿಗದಿಪಡಿಸುವುದು ಇತ್ಯಾದಿ ಹಲವು ಬದಲಾವಣೆಗಳನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿಗಳು ಸೇರಿಸಿದರು. ಆದರೂ ಎಡಪಕ್ಷಗಳಿಗೆ ತೃಪ್ತಿಕರವಲ್ಲದ ಹಲವಾರು ವಿಷಯಗಳು ಇದರಲ್ಲಿ ಇವೆ. ಇಂದಿನ ಒಕ್ಕೂಟದ ವ್ಯವಸ್ಥೆಯಲ್ಲಿ ಇದು ಸ್ವಾಭಾವಿಕವಾಗಿದೆ. ಆದರೆ ಇದರರ್ಥ ಕಾಂಗ್ರೆಸ್ ಹೇಳಿದನ್ನೆಲ್ಲವನ್ನು ಎಡಪಕ್ಷಗಳು ಅಂಗೀಕರಿಸಿವೆ ಎಂದಲ್ಲ. ದೇಶದ ಜನತೆ ನಡುವೆ ಐಕ್ಯತೆ ಕಾಪಾಡಲು, ಜನಪರ ಕಾರ್ಯಕ್ರಮಗಳ ಜಾರಿಗಾಗಿ ಹೋರಾಟ ಮುಂದುವರೆಸಲು ನಾವು ತಯಾರಾಗಬೇಕಾಗಿದೆ. ಸೂಕ್ತ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರಲು ಎಡಪಕ್ಷಗಳು ತಮ್ಮ ಶ್ರಮವನ್ನು ಮುಂದುವರಿಸಬೇಕಾಗಿದೆ.

ಪ್ರಸ್ತುತ ಕೇಂದ್ರದ ರಾಜಕೀಯ ಬದಲಾವಣೆಯಲ್ಲಿ ಎಡಪಕ್ಷಗಳ ನಿಲುವನ್ನು ಸಂತೋಷದಿಂದ ಸ್ವೀಕರಿಸುವವರು ಬಹಳಷ್ಟು ಮಂದಿ ಇದ್ದಾರೆ. ಇದೇ ಸಮಯದಲ್ಲಿ ಹಲವರು ನಿರಾಸೆ ಹಾಗೂ ಆಕ್ರೋಶ ಸಹಾ ವ್ಯಕ್ತಪಡಿಸಿದ್ದಾರೆ. ಇದು ಅವರವರ ವರ್ಗ ಧೋರಣೆಯ ನಿಲುವನ್ನು ಬಿಂಬಿಸುತ್ತದೆ. ಸಹಜವಾಗಿ ಹಿಂದಿನ ಆಡಳಿತ ಸರ್ಕಾರದಿಂದ ಹಲವಾರು ಪ್ರಯೋಜನ ಗಳನ್ನು ಪಡೆದವರಿಗೆ ಮತ್ತು ಲಾಭವನ್ನು ಕೊಳ್ಳೆಹೊಡೆದವರಿಗೆ ಹೆಚ್ಚು ನಿರಾಶೆ ಉಂಟಾಗಿದೆ.

2004 ರ ಏಪ್ರಿಲ್- ಮೇ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಬಡ ಜನತೆ, ರೈತರು ಹಾಗೂ ವಿಶೇಷವಾಗಿ ದೇಶದ ಕಾರ್ಮಿಕ ವರ್ಗ ಹಿಂದೆಂದೂ ಇಲ್ಲದ ರೀತಿಯಲ್ಲಿ ತಮ್ಮ ರಾಜಕೀಯ ಜವಾಬ್ದಾರಿಯನ್ನು ಈ ಸಂಕೀರ್ಣವಾದ ಪರಿಸ್ಥಿತಿಯಲ್ಲಿ ನಿಭಾಯಿಸಿವೆ. ಕಳೆದ ಒಂದು ದಶಕದಿಂದ ಕೇಂದ್ರ ಸರಕಾರದ ಕಾರ್ಮಿಕ - ರೈತ ವಿರೋಧಿ ನೀತಿಗಳಿಗೆ ಎದುರಾಗಿ ಹಾಗೂ ದೇಶದ ಆರ್ಥಿಕ ಸ್ವಾವಲಂಬನೆಯನ್ನು ಕಾಪಾಡಲಿಕ್ಕಾಗಿ, ಹೊಸ ಆರ್ಥಿಕ ಧೋರಣೆಗೆ ಎದುರಾಗಿ ಕಳೆದ ದಶಕದಲ್ಲಿ ನಡೆದ ಹಲವು ಹೋರಾಟಗಳ ಮುಂಚೂಣಿಯಲ್ಲಿ ಭಾರತದ ಕಾರ್ಮಿಕ ವರ್ಗ ನಿಂತಿದೆ. ಈ ಹೋರಾಟಗಳಲ್ಲಿ ಸಂಘಟನಾ ವ್ಯತ್ಯಾಸವಿಲ್ಲದೆ ಎಲ್ಲಾ ವಿಭಾಗದ ದುಡಿಯುವ ಜನರ ನಡುವೆ ಒಂದು ಐಕ್ಯ ತಿಳುವಳಿಕೆ ಮೂಡಲು ಸಾಧ್ಯವಾಗಿದೆ.

ಈ ವರ್ಷ ಪೆಬ್ರವರಿ 24 ರಂದು ಭಾರತದ ಕಾರ್ಮಿಕ ವರ್ಗ ಮುಷ್ಕರ ನಿಷೇಧ ಮಾಡಿದ



ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ರಾಷ್ಟ್ರವ್ಯಾಪಿ ಮುಷ್ಕರ ನಡೆಸಿತು. ಹಲವು ವರ್ಷಗಳಿಂದ ಕೇಂದ್ರ ಕಾರ್ಮಿಕ ಸಂಘಟನೆಗಳು ಹಾಗೂ ಸ್ವತಂತ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಅಂಗೀಕರಿಸಿದ ಎಂಟು ಬೇಡಿಕೆಗಳನ್ನು ಮುಂದಿಟ್ಟು ಫೆಬ್ರವರಿ 24 ರ ಮುಷ್ಕರ ನಡೆಯಿತು. ಈ ಅಖಿಲ ಭಾರತ ಮುಷ್ಕರ ಚುನಾವಣೆಯ ಮೇಲೆ ಬೃಹತ್ ರೀತಿಯಲ್ಲಿ ಪರಿಣಾಮ ಬೀರಿತು. "ಭಾರತ ಪ್ರಕಾಶಿಸುತ್ತಿದೆ", "ಜನತೆ ಸುಖಾನುಭವದಲ್ಲಿದೆ" ಎಂಬ ಘೋಷಣೆಗಳೊಂದಿಗೆ ಬಿಜೆಪಿ ಸರ್ಕಾರ ಚುನಾವಣೆಗೆ ಬಹಳ ಮುಂಚಿತವಾಗಿ ಆರಂಭಿಸಿದ ಪ್ರಚಾರ ಫೆಬ್ರವರಿ 24 ರ ಮುಷ್ಕರದ ಕಾರಣ ನೀರಿನ ಮೇಲಿನ ಗುಳ್ಳೆಯ ರೀತಿಯಲ್ಲಿ ಒಡೆದು ಹೋಯಿತು. ಹತ್ತಾರು ವರ್ಷಗಳಿಂದ ಎಡಪಕ್ಷಗಳ ಪ್ರಯತ್ನದ ಫಲವಾಗಿ ಹಾಗೂ ಎಲ್ಲಾ ವಿಭಾಗಗಳ ಕಾರ್ಮಿಕರಲ್ಲಿ ಬೆಳೆದು ಬಂದ ಐಕ್ಯತೆಯ ಆಧಾರದಲ್ಲಿ ಹಲವು ಅಖಿಲ ಭಾರತ ಕಾರ್ಮಿಕ ಮುಷ್ಕರಗಳು ನಡೆದವು.

ರಾಷ್ಟ್ರದ ಭವಿಷ್ಯವನ್ನು ನಿರ್ಧರಿಸುವಲ್ಲಿ ದೊ... ರೀತಿಯಲ್ಲಿ ತಿಳುವಳಿಕೆಯನ್ನು ಕಾರ್ಮಿಕ ವರ್ಗ ತೋರ್ಪಡಿಸಿದೆ. ಕಾರ್ಮಿಕ ವರ್ಗ ಇಷ್ಟೊಂದು ಬೃಹತ್ ನಿರ್ಣಾಯಕ ಶಕ್ತಿಯಾಗಿ ಎದ್ದು ಬಂ... ಪ್ರಸಂಗ ಭಾರತದ ಚರಿತ್ರೆಯಲ್ಲಿ ಈ ಹಿಂ... ನಡೆದಿರಲಿಲ್ಲ. ಇದರಲ್ಲಿ ಸಿಐಟಿಯು ವಹಿಸಿ... ಪಾತ್ರ ಗೌರವಾನ್ವಿತವಾಗಿದೆ. ಮಾತ್ರವ... ಭವಿಷ್ಯದ ಬಗ್ಗೆ ದೇಶದ ದುಡಿಯು... ಜನತೆಗೆ, ರೈತಾಪಿ ವರ್ಗಕ್ಕೆ ಭರವ... ಮೂಡಿಸಲು ಕಾರಣವಾಗಿವೆ. ಹೊ... ಆರ್ಥಿಕ ಧೋರಣೆಗಳಿಗೆದುರಾಗಿ ಕಳೆದ ಒಂದು ದಶಕದಲ್ಲಿ ಕಾರ್ಮಿಕ ವರ್ಗ ನಡೆಸಿ... ಹೋರಾಟವನ್ನು ಪ್ರಸ್ತುತ ಸಂದರ್ಭದಲ್ಲಿ ಹೊ... ಐಕ್ಯತೆಯೊಡನೆ ಕಟ್ಟಿ ಬೆಳೆಸಿ ಮುನ್ನಡೆಸಬೇಕಾಗಿದೆ. ಚುನಾವಣೆಗೆ ಮುಂಚಿತವಾಗಿ ನಡೆದ ಹೋರಾಟಗಳನ್ನು ಅದೇ ರೀತಿಯಲ್ಲಿ ಮುಂದು ವರೆಸಬೇ... ಎಂದು ಇದರರ್ಥವಲ್ಲ. ಸಾಮಾನ್ಯ ಕನಿ... ಕಾರ್ಯಕ್ರಮ ಅಂಗೀಕರಿಸಿದ ರೈತ ಕಾರ್ಮಿಕ, ಜ... ಸಾಮಾನ್ಯರಿಗೆ ಅನುಕೂಲಕರವಾದ ತೀರ್ಮಾ... ಗಳನ್ನು ಜಾರಿ ಮಾಡಿಸಲು ಸಂಘಟಿತವಾ... ಪರಿಶ್ರಮಗಳು ತಕ್ಷಣವೇ ನಡೆಯಬೇಕಾಗಿದೆ.

ಇದೇ ಸಮಯದಲ್ಲಿ ಸಾಮಾನ್ಯ ಕನಿ... ಕಾರ್ಯಕ್ರಮದಲ್ಲಿ ಒಳಪಡದ ಜನಪ... ಕಾರ್ಯಕ್ರಮಗಳ ಬಗ್ಗೆ ಸಮರ ಸಹ... ನಡೆಯಬೇಕಾಗಿದೆ. ಈ ಆಧಾರದಲ್ಲಿ ಸಂಘಟನ... ವ್ಯತ್ಯಾಸವಿಲ್ಲದೆ ಕಾರ್ಮಿಕ ವರ್ಗದ ಐಕ್ಯತೆಯನ... ವ್ಯಾಪಕವಾಗಿ ವಿಸ್ತರಿಸಬೇಕಾಗಿದೆ. ಇದು ಇಂದಿ... ತುರ್ತು ಅವಶ್ಯಕತೆ. ಇದು ಸಾಧ್ಯವಾಗದಿದ್ದರೆ ಈ ಹೊಸ ಸರ್ಕಾರ ಕೆಲವು ಸ್ಥಾಪಿತ ಹಿತಾಸಕ್ತಿಗ... ಕೈಗೊಂಬೆಯಾಗುತ್ತದೆ. ಈ ಸ್ಥಾಪಿತ ಹಿತಾಸಕ್ತಿಗಳ... ಯಾವತ್ತೂ ಸುಮ್ಮನಿರುವುದಿಲ್ಲ ಎಂಬ ಅಂಶ... ಬಗ್ಗೆ ನಾವು ಎಚ್ಚರಿಕೆ ವಹಿಸಬೇಕಾಗಿದೆ.

ಇ.ಕೆ.ಎನ್.ರಾಜನ...

ದಿಕ್ಕು ದೆಸೆಯುಂಟೇನಯ್ಯಾ ಈ ಸರ್ಕಾರಕ್ಕೆ?

ಪುಟ 3 ರಿಂದ

ಒಡ್ಡಿದೆ. ರಸ್ತೆ, ಕುಡಿಯುವ ನೀರು, ನಾಗರೀಕ ಸೌಲಭ್ಯಗಳಿಗಾಗಿ ವಿಶ್ವಬ್ಯಾಂಕ್ - ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ಕೈ ಒಡ್ಡಿದೆ. ಇಂತಹ ಸಾಲದ ಹೊರೆಯನ್ನು ಜನಸಾಮಾನ್ಯರ ಹೆಗಲಿಗೇರಿಸಲಿದೆ. ಅದರಂತೆ ಬೆಂಗಳೂರು ಒಳಗೊಂಡು 8 ಪ್ರಮುಖ ಪಟ್ಟಣಗಳಿಗೂ ಇಂತಹುದೇ ಯೋಜನೆ ಹಾಕಿದೆ. ಈಗಾಗಲೇ ಕಾವೇರಿ ನೀರಿನ ಪೂರೈಕೆಗಾಗಿ 3500 ಕೋಟಿ ವೆಚ್ಚ ಮಾಡಲಾಗುತ್ತಿದ್ದು ಈ ಬಂಡವಾಳವನ್ನೇ ಜನರಿಂದ ಸಂಗ್ರಹಿಸಲು ನಿರ್ಧರಿಸಲಾಗಿದೆ. ಹಣ ನೀಡಲಾಗದವರು ನೀರಿಲ್ಲದೆ ನರಕವಾಸ ಅನುಭವಿಸಬೇಕು. ಕೃಷಿ ನೀರಾವರಿಯ ಸಹಕಾರ ಸಂಘಗಳ ಮೂಲಕ ನೀರಿನ ವ್ಯಾಪಾರೀಕರಣವನ್ನು ಇನ್ನಷ್ಟು ತೀವ್ರಗೊಳಿಸಲಿದೆ. ವಿದ್ಯುತ್ ಕ್ಷೇತ್ರದಲ್ಲಿ ಮುಂದಿನ 4 ವರ್ಷಗಳಲ್ಲಿ 2675 ಮೆಗಾವಾಟ್ ಸಾಮರ್ಥ್ಯ ಸೃಷ್ಟಿಸಲು ಕಾರ್ಯಕ್ರಮವಿದೆಯೆಂದಿದೆ. ಇದು ಹೇಗೆ ಎಂಬುದರ ಬಗ್ಗೆ ನಿಖರ ವಿವರ ಮಾಹಿತಿ ನೀಡಿಲ್ಲ. ಆಲಮಟ್ಟಿ, ಬಳ್ಳಾರಿ ವಿದ್ಯುತ್ ಘಟಕಗಳ ಬಗ್ಗೆ ಪ್ರಸ್ತಾಪ ಇದೆಯಾದರೂ ರಾಜ್ಯವನ್ನೇ ಕಾಡುತ್ತಿರುವ, ಖಾಸಗೀಕರಣದ ಪೀಡೆಯನ್ನು ತೊಲಗಿಸಲು ಚಕಾರವೇ ಇಲ್ಲ. ತಣ್ಣೀರು ಬಾವಿ ವಿದ್ಯುತ್ ಯೋಜನೆಯ ಅನಾಹುತಕಾರಿ ಒಪ್ಪಂದಗಳ ಪುನರ್ ವಿಮರ್ಶೆ ಅಗತ್ಯವಿದೆ. ರಾಜ್ಯದ ಜನರ ಯೋಗಕ್ಷೇಮದ ಕಾಳಜಿ ಅಕ್ಷರಗಳಲ್ಲಿದೆ. ಆದರೆ ದುಬಾರಿ ವಿದ್ಯುತ್ ದರಗಳು, ಭಾಗ್ಯಜ್ಯೋತಿಯಂತಹ ಬಳಕೆದಾರರಿಗೂ ಮೀಟರ್ ಅಳವಡಿಕೆ, ದುಬಾರಿ ಶುಲ್ಕ ವಿಧಿಸಿರುವುದು, ಪಂಪ್‌ಸೆಟ್ ಬಳಕೆದಾರರ ಬವಣೆಗಳತ್ತ ಕಿಂಚಿತ್ತೂ ಕಾಳಜಿಯಿಲ್ಲ. ಚುನಾವಣೆಗಳ ಬಳಿಕ ಆಂಧ್ರ-ತಮಿಳುನಾಡು ಸರ್ಕಾರಗಳು ಕೈಗೊಂಡ ನಿರ್ಧಾರದ ಪ್ರಮುಖ ಅಂಶಗಳನ್ನಾದರೂ ಇಲ್ಲಿ 'ಮಾದರಿ'ಯಾಗಿ ಪರಿಗಣಿಸಬೇಕಿತ್ತು.

ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳು ಅರಣ್ಯ ಪ್ರದೇಶದ ಭೂ ಅತಿಕ್ರಮಣ ಕೃಷಿಕರಿದ್ದಾರೆ. ಅವರ ಸಾಗುವಳಿಗೆ ಕೇಂದ್ರ ಸರ್ಕಾರದ ಆದೇಶಗಳು ಅಡ್ಡಿಯಾಗಿ, ನ್ಯಾಯಾಲಯದ ನಿರ್ದೇಶನಗಳು ಅವರ ಹಲವು ದಶಕಗಳ ಕಾಲದ ಭೂ ಸಾಗುವಳಿ ಹಕ್ಕಿನಿಂದ ವಂಚಿತರನ್ನಾಗಿಸಿ ಒಕ್ಕಲೆಬ್ಬಿಸುತ್ತಿರುವುದನ್ನು ಸರ್ಕಾರ ಗಂಭೀರ ಪ್ರಶ್ನೆ ಎಂದು ಭಾವಿಸಿಲ್ಲ. ಕೇಂದ್ರ ಶಾಸನ ಅಗತ್ಯವಿದ್ದ ಅದರತ್ತ ಚಕಾರವೇ ಇಲ್ಲ. ಅಪಾರ ಉದ್ಯೋಗ ಸೃಷ್ಟಿಯ ಭರವಸೆಯನ್ನು ನೀಡಿದೆಯಾದರೂ ಅದು ಹೇಗೆ ಎಂಬುದಿಲ್ಲ. ಕುಸಿಯುತ್ತಿರುವ ಮಾಹಿತಿ ತಂತ್ರಜ್ಞಾನ-ಅದಕ್ಕೆ ಹೊಂದಿಕೊಂಡು ಭಾಷಾಂತರಕಾರರ ತರಬೇತಿಯಿಂದಲೇ, ಬಿಪಿಓ ಮೂಲಕ ಸಾಧಿಸಲಾಗುವುದಂತೆ. ಕೈಗಾರಿಕೆಗಳು ಕುಸಿಯುತ್ತಿರುವಾಗ, ಕೃಷಿಯೂ ಬಿಕ್ಕಟ್ಟಿನಲ್ಲಿರುವಾಗ ಉದ್ಯೋಗ ಸೃಷ್ಟಿ ಹೇಗೆ? ಆಡಳಿತ ಸುಧಾರಣೆ ಹೆಸರಿನಲ್ಲಿ ಹುದ್ದೆಗಳ ನಿರ್ನಾಮ, ತಡೆಯುವುದೇ - ಹೊಸ ನೇಮಕಾತಿ ಮಾಡದೇ ಉದ್ಯೋಗಗಳು ಲಭಿಸುವುದಾದರೂ ಹೇಗೆ? ಇಂದಿನ ಅತ್ಯಂತ ಜ್ವಲಂತ ಪ್ರಶ್ನೆಯಾದ ಗ್ರಾಮೀಣ ಕೃಪಾಂಕದ ನೌಕರರ ಅತಂತ್ರ ಸ್ಥಿತಿ ಬಗ್ಗೆ ಕಾಳಜಿಯೇ ಕಾಣದು. ಶಿಕ್ಷಣದ ಕ್ಷೇತ್ರದ ನೂರಾರು ಪ್ರಶ್ನೆಗಳು ಒತ್ತಟ್ಟೆಗಿರಲಿ, ವೃತ್ತಿ ಶಿಕ್ಷಣಕ್ಕೆ ಪ್ರವೇಶಾವಕಾಶ, ಸಿಇಟಿ ಸಮಸ್ಯೆ - ಶುಲ್ಕಗಳ ನಿಗದಿ, ಪೋಷಕರ - ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯತ್ತು ತೂಗು ಕತ್ತಿಯಡಿ ಸಿಲುಕಿರುವುದು ಈ ಸರ್ಕಾರಕ್ಕೆ ಸಮಸ್ಯೆ ಎನ್ನಿಸಿಯೇ ಇಲ್ಲ. ಬಹುಶಃ ಖಾಸಗಿ ಶಿಕ್ಷಣ ವ್ಯಾಪಾರಿಗಳ ಕೈಗೆ ನಾಡಿನ ವಿದ್ಯಾರ್ಥಿಗಳ ಭವಿಷ್ಯ ಒಪ್ಪಿಸಿಯಾಗಿದೆಯೆಂಬ ಪರಿಹಾರದ ನಿಟ್ಟುಸಿರರಬಹುದು!

ಕಾನೂನು - ಸುವ್ಯವಸ್ಥೆಯನ್ನು ಕಾಪಾಡಲಾಗಿದೆಯೆಂದೂ, ಅದಕ್ಕೆ ಚುನಾವಣೆಗಳು ಶಾಂತಿಯಿಂದ ನಡೆಯುವುದೇ ಸಾಕ್ಷಿಯೆಂದು ರಾಜ್ಯಪಾಲರು ಬೆನ್ನು ಚಪ್ಪರಿಸಿಕೊಂಡಿದ್ದಾರೆ. ಆದರೆ ಚುನಾವಣೆಗೂ ಮೊದಲಿನ 6-8 ತಿಂಗಳಲ್ಲಿ ರಾಜ್ಯವು ಸುಮಾರು 50 ಕ್ಕೂ ಅಧಿಕ ಕೋಮು ಗಲಭೆಗಳನ್ನು ಕಂಡಿತು. ಈಗಲೂ ಅನೇಕ ಪ್ರದೇಶಗಳಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳಗಳು ದ್ವೇಷದ ತಿದಿಯೂದುತ್ತಲೇ ಇವೆ. ದ್ವೇಷದ ಕಿಡಿ ಆರಿಲ್ಲ ಆದರೂ ಬಿಡುತ್ತಿಲ್ಲ. ಬಾಬಾ ಬುಡನ್ ಗಿರಿಯ ಸ್ಫೋಟಕಾರಿ ವಿವಾದ ಇನ್ನೂ ಹೆಚ್ಚುವ ಸಂಭವವಿದೆ. 79 ಸ್ಥಾನ ಗಳಿಸಿರುವ ಬಿಜೆಪಿ - ಇದರ ಹುಮ್ಮಸ್ಸಿನಿಂದ ಕೋಮುವಾದಿ ಶಕ್ತಿಗಳು ಗರಿಗೆದರಿ ಇನ್ನೂ ದೊಡ್ಡ ಪ್ರಮಾಣದ ಧಾಳಿಗೆ ಸಜ್ಜಾಗಿವೆ. ದಲಿತರು, ಮಹಿಳೆಯರು ದುರ್ಬಲರ ಮೇಲಿನ ದೌರ್ಜನ್ಯಗಳು ತಡೆಯಲು ಹೊಸ ಕ್ರಮಗಳಿಲ್ಲ. ಇಂತಹ ಪ್ರಮುಖವಾದ ರಾಜಕೀಯ, ಸೈದ್ಧಾಂತಿಕ, ಆಡಳಿತಾತ್ಮಕ ಪ್ರಶ್ನೆಯನ್ನು ಪೂರ್ಣವಾಗಿಯೇ ರಾಜ್ಯಪಾಲರು ಭಾಷಣ ನಿರಾಕರಿಸಿದೆ. ಯಾವ ಕಾಂಗ್ರೆಸ್ - ಜನತಾದಳ(ಎಸ್) ಪಕ್ಷಗಳು ಕೋಮುವಾದಿಗಳನ್ನು ದೂರ ಇಡಲೆಂದೇ ಮೈತ್ರಿಕೂ... ರಚಿಸಿಕೊಂಡಿರುವುದಾಗಿ ಜಗತ್ತಿಗೆ ಸಾರಿದ್ದವ... ಸರ್ಕಾರ ರಚಿಸಿದವು. ಆದರೆ ಅದೇ ಮೂ... ರಾಜಕೀಯ ಉದ್ದೇಶವನ್ನೇ ಮರೆತಿರುವುದ... ಅಪಾಯದ ಸೂಚನೆಯಾಗಿದೆ. ಈ ವಿಷಯದ... ಜಾಗೃತಿ ವಹಿಸದಿದ್ದಲ್ಲಿ ಮುಂದಿನ ದಿನಗ... ರಾಜಕೀಯವೇ ಸಂಕೀರ್ಣವಾಗಲಿದೆ. ಅದ... ಕೋಮುವಾದಿ ಶಕ್ತಿಗಳ ಮುನ್ನಡೆ... ಸೋಪಾನವಾದೀತು.

ಹೀಗೆ ರಾಜ್ಯಪಾಲರ ಭಾಷಣ ಕರ್ನಾಟಕ... ಪ್ರಮುಖ ರಾಜಕೀಯ ಕರ್ತವ್ಯಗಳನ್ನು ಗುರುತಿಸದ... ಅದಕ್ಕೆ ಮುಖಾಮುಖಿಯಾಗಿ ಸವಾಲ... ಕೈಗೆತ್ತಿಕೊಂಡು ಸಮರ ಹೂಡದೇ ಹೋಗಿದ... ರಾಜ್ಯಪಾಲರ ಭಾಷಣ ಅವಸರ... ಮಾಘಸ್ನಾನವೆಂದರೂ ಕನಿಷ್ಠ ವಿಷಯಗಳ ಪ್ರಸ್ತಾ... ಬೇಕಿತ್ತು. ಇಲ್ಲಿ ಎದ್ದು ಕಾಣುವ ಅಂಶವೆಂದ... ಎರಡೂ ಪಕ್ಷಗಳೂ ಈ ಕೂಡಲೇ ಅವರ... ಪ್ರಕಟಿಸಿದಂತೆ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ... ರೂಪಿಸಿಯೇ ಮುಂದಡಿ ಇಡಬೇಕು. ಇದ... ಕೊರತೆಯು ವಿಧಾನಸಭಾ ಅಧಿವೇಶನ... ಕಲಾಪಗಳಲ್ಲಿಯೂ ಎದ್ದು ಕಾಣುತ್ತಿದೆ. ಆದ್ದರಿಂ... ಸಿಎಂಪಿಯನ್ನು ರೂಪಿಸಿಕೊಂಡು ರಾಜಕೀಯ... ಆಡಳಿತ ನಡೆಸಲು ಮುಂದಾಗಬೇಕು. ಹಳೇಜಾ... ತಿರಸ್ಕರಿಸಿ ಜನಾದೇಶದಂತೆ ಹೊಸ ಹಾ... ಹಿಡಿಯಬೇಕು. ಕನಿಷ್ಠ ಜನತಾದಳ(ಎಸ... ಪಕ್ಷವಾದರೂ ಖಾತೆಗಳ ಹಂಚಿಕೆಯ ವ್ಯಾಜ್ಯ... ಮೂಲಕ ಕಾಂಗ್ರೆಸ್ ನಿಂದ ಭಿನ್ನ... ಗುರುತಿಸಿಕೊಳ್ಳುವ ಬದಲು ಜನರ ಬಾಧೆಗಳ... ಪರಿಹಾರ ಸೂಚಿಸಲು ಹೋರಾಡುವುದ... ಆದ್ಯತೆಯಾಗಿರಬೇಕು.

ಎಸ್.ವೈ.ಗುರುಶಾಂತ್.

ಬಹುಕೋಟಿ ರೂ. ಅಕ್ಕಿಹಗರಣ ಸಿಬಿಐ ತನಿಖೆ ಅಗತ್ಯ

ಕಳೆದ ನಾಲ್ಕು ವರ್ಷದಿಂದ ತತ್ತರಿಸಿದ ಗ್ರಾಮೀಣ ಕೂಲಿಕಾರರಿಗೆ, ಹಸಿದ ಬಡವರ ಹೊಟ್ಟೆಗೆ ತುತ್ತು ಆಗಬೇಕಾದ, ಕೇಂದ್ರ ಸರ್ಕಾರದ 'ಕೂಲಿಗಾಗಿ ಕಾಳು' ಯೋಜನೆ ಇಂದು ದಲ್ಲಾಳಿಗಳ, ಕಾಳಸಂತೆಕೋರರ, ಅಧಿಕಾರಿಗಳ ಮತ್ತು ಭ್ರಷ್ಟ ರಾಜಕಾರಣಿಗಳ ಖಜಾನೆ ತುಂಬಿದೆ. ರಾಜ್ಯದಲ್ಲೇ ಅಲ್ಲದೆ ದೇಶದ ಬೇರೆಡೆಯಲ್ಲೂ ಕೋಲಾಹಲ ಎಬ್ಬಿಸಿರುವ ಬಹುಕೋಟಿ ರೂಗಳ ಈ ಅಕ್ಕಿ ಹಗರಣದ ಬಗ್ಗೆ ವಿಧಾನಮಂಡಲದಲ್ಲಿ ಬಿಜೆಪಿ ಮತ್ತು ಮಿತ್ರ ಪಕ್ಷಗಳು ಹಗರಣವನ್ನು ಜಂಟಿ ಸದನ ಸಮಿತಿಗೆ ಒಪ್ಪಿಸುವಂತೆ ಆಗ್ರಹಿಸುತ್ತಿರುವಾಗ ಸಿಪಿಐ(ಎಂ) ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಪತ್ರಿಕೆಗೆ ನೀಡಿದ ಸಂದರ್ಶನ ಸಾರ



ಪ್ರಶ್ನೆ: ಕೂಲಿಗಾಗಿ ಕಾಳು ಯೋಜನೆಯ ಉದ್ದೇಶವೇನು?

ಶ್ರೀರಾಮ ರೆಡ್ಡಿ: ಕಳೆದ ನಾಲ್ಕು ವರ್ಷದಿಂದ ಕರ್ನಾಟಕವಲ್ಲದೆ, ಬೇರೆ ರಾಜ್ಯಗಲು ಸಹ ತೀವ್ರ ಬರಗಾಲಕ್ಕೆ ತುತ್ತಾಗಿದ್ದವು. ಇಂತಹ ಸಂದರ್ಭದಲ್ಲಿ ಹಸಿದ ಜನತೆಯ ತೀವ್ರ ಒತ್ತಡದ ನಂತರ ಕೇಂದ್ರ ಸರ್ಕಾರ ವಿಶ್ವ ಬ್ಯಾಂಕ್ ನೆರವಿನಿಂದ ಗ್ರಾಮೀಣ ಜನತೆಯ ಅದರಲ್ಲೂ ಕೃಷಿಕೂಲಿಕಾರರ, ಬಡರೈತರ ಹಸಿವು ನೀಗಿಸಲು ಮತ್ತು ನಗರಗಳತ್ತ ವಲಸೆ ತಪ್ಪಿಲು ಈ ಯೋಜನೆ ರೂಪಿಸಿತು.

ಪ್ರಶ್ನೆ: ಈ ಯೋಜನೆ ಯಶಸ್ವಿಯಾಯಿತೆ?

ಶ್ರೀರಾಮರೆಡ್ಡಿ: ಕೂಲಿಗಾಗಿ ಕಾಳು ಯೋಜನೆ ವಿಫಲಗೊಂಡಿದೆ. ಕಾರಣ ಈ ಯೋಜನೆಯ ರೂಪುರೇಷೆಗಳು ಅವೈಜ್ಞಾನಿಕ ಹಾಗೂ ಅಪ್ರಯೋಗಿಕವಾಗಿ ರೂಪುಗೊಂಡಿರುವುದರಿಂದ.

ಪ್ರಶ್ನೆ: ಯಾವ ರೀತಿ ಅವೈಜ್ಞಾನಿಕತೆ ಎನ್ನುತ್ತೀರಿ?

ಶ್ರೀರಾಮರೆಡ್ಡಿ: ಯೋಜನೆಯ ಉದ್ದೇಶಕೂಲಿಗಾರರಿಗೆ, ಬಡವರಿಗೆ ಒಪ್ಪತ್ತು ಊಟಕ್ಕೂ ಸಂಕಷ್ಟ ಪಡುವವರಿಗೆ ಸಹಾಯವಾಗಲೆಂದು. ಕೆರೆ ಹೂಳೆತ್ತುವುದು, ನಾಲೆ, ರಸ್ತೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಯಂತ್ರಗಳನ್ನು ಬಳಸದೆ ಮಾನವ ಸಂಪನ್ಮೂಲ ಬಳಸಿ ಕಾಮಗಾರಿ ನಡೆಸಬೇಕು. ಮತ್ತೆ ಅಂದೆ ಸಂಜೆ ಕಾಳು ವಿತರಣೆಯಾಗಬೇಕು ಇಲ್ಲವೇ ವಾರಕ್ಕೊಮ್ಮೆಯಾದರು ವಿತರಣೆಯಾಗಬೇಕು. ಆದರೆ, ತಿಂಗಳುಗಟ್ಟಲೆ ಧಾನ್ಯಗಳು ಬಿಡುಗಡೆಯಾಗುತ್ತಿರಲಿಲ್ಲ. ಇದರಿಂದಾಗಿ ಕೂಲಿಕರರಿಗೆ ಕಾಳು ತಲುಪುತ್ತಿರಲಿಲ್ಲ. ಗೊಡೌನ್‌ಗಳಲ್ಲಿ ಕೊಳೆಯುತ್ತಿದ್ದ ಧಾನ್ಯಗಳನ್ನು ವಿಲೇವಾರಿಗಾಗಿ ಹವಾನಿಯಂತ್ರಿತ ಕೊಠಡಿಗಳಲ್ಲಿ ಅಧಿಕಾರಿಗಳು ರೂಪಿಸಿದ ಒಂದು ಅವೈಜ್ಞಾನಿಕ ಹಾಗೂ ಅಪ್ರಯೋಜಕ ಯೋಜನೆಯಾಯಿತು.

ಪ್ರಶ್ನೆ: ಕಾಮಗಾರಿಗಳು ನಡೆಯಲಿಲ್ಲವೆ?

ಶ್ರೀರಾಮರೆಡ್ಡಿ: ಕಾಮಗಾರಿಗಳು ನಡೆದಿವೆ, ಕೂಲಿಗಾರರಿಗಾಗಿ ಅಲ್ಲ ಗುತ್ತಿಗೆದಾರರಿಗಾಗಿ ಯೋಜನೆಯ ಉದ್ದೇಶ ಕೇವಲ ಮಾನವ ಸಂಪನ್ಮೂಲ ಬಳಸಿ ಕಾಮಗಾರಿ ನಡೆಸುವಂತೆ ಷರತ್ತುಗಳಿದ್ದರು ಅವುಗಳನ್ನು ಗಾಳಿಗೆ ತೂರಿ ಜೆಸಿಬಿ, ಇಟಾಚ್ಚಿಯಂತಹ ಬೃಹತ್ ಯಂತ್ರಗಳನ್ನು ಬಳಸಿ ತಿಂಗಳು ಕಾಲ ನಡೆಯಬೇಕಾದ ಕಾಮಗಾರಿಯನ್ನು ಕೇವಲ 2-3 ದಿನಗಳಲ್ಲೇ ಮುಗಿಸಿ ಯೋಜನೆಯ ಫಲವನ್ನು ದೋಚಿಕೊಂಡಿದ್ದಾರೆ.

ಪ್ರಶ್ನೆ: ಆ ಯೋಜನೆಗಾಗಿ ಕೇಂದ್ರದಿಂದ ಬಿಡುಗಡೆಯಾಗಿರುವ ಧಾನ್ಯವೆಷ್ಟು?

ಶ್ರೀರಾಮರೆಡ್ಡಿ: ಕೇಂದ್ರ ಸರ್ಕಾರಕ್ಕೆ ರಾಜ್ಯಕ್ಕೆ ಮೊದಲನೆ ಹಂತದಲ್ಲಿ 11 ಲಕ್ಷ ಮೆಟ್ರಿಕ್ ಟನ್ ಧಾನ್ಯ ಬಿಡುಗಡೆ ಮಾಡಿದೆ. ರಾಯ ಸರ್ಕಾರ ಮತ್ತೊಮ್ಮೆ ಬೇಡಿಕೆ ಸಲ್ಲಿಸಿದನಂತರ17 ಲಕ್ಷ ಮೆಟ್ರಿಕ್ ಟನ್ ಧಾನ್ಯ ಬಿಡುಗಡೆಗೊಳಿಸಿದೆ.



ಪ್ರಶ್ನೆ: ಕೇಂದ್ರ ಸರ್ಕಾರಗಳ ಉಸ್ತುವಾರಿಯಲ್ಲಿ ನಡೆದಿರುವ ಈ ಯೋಜನೆಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಗರಣ ನಡೆಯಲು ಹೇಗೆ ಸಾಧ್ಯ?

ಶ್ರೀರಾಮರೆಡ್ಡಿ: ಮೊದಲೇ ಹೇಳಿದಂತೆಯೇ ಒಂದು ಅಪ್ರಯೋಜಕ ಹಾಗೂ ಅವೈಜ್ಞಾನಿಕವಾಗಿ ರೂಪಗೊಂಡ ಯೋಜನೆ. ಗುತ್ತಿಗೆದಾರರು ಕೆಲಸ ಮಾಡಿದ ಕೂಲಿಕಾರರಿಗೆ ಸ್ಥಳದಲ್ಲೆ ಅಕ್ಕಿ ವಿತರಿಸಬೇಕಾಗಿತ್ತು. ಆದರೆ ಸರ್ಕಾರವೇ ಸಕಾಲದಲ್ಲಿ ಕಾಳು ಬಿಡುಗಡೆ ಮಾಡದಿರುವುದರಿಂದ ಕೂಲಿಕಾರರಿಗೆ ಅಲ್ಪ ಸ್ವಲ್ಪ ಹಣ ನೀಡಿ ಇದನ್ನು ಗುತ್ತಿಗೆದಾರರು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿದ್ದಾರೆ.

ಪ್ರಶ್ನೆ: ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರವೇನು?

ಶ್ರೀರಾಮರೆಡ್ಡಿ: ಮೇಲ್ನೋಟಕ್ಕೆ ಹಗರಣದಲ್ಲಿ ಕೇಂದ್ರ ಸರ್ಕಾರದ ಪಾತ್ರ ಕಾಣದಿದ್ದರು, ಈ ಯೋಜನೆಯ ರೂವಾರಿ ಕೇಂದ್ರ ಸರ್ಕಾರವೇ

ಪುಟ 10 ಕ್ಕೆ

ಪುಟ 7 ರಿಂದ


ಕಾರ್ಯದರ್ಶಿಯಾದ ರಂಗನಾಥನ್, AIKS (AKG ಭವನ) AIKS (ಅಜಯ್‌ಭವನ) ರಾಜ್ಯ ಸಮಿತಿಯ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ತಜ್ಞರು, ಬುದ್ಧಿಜೀವಿಗಳೂ ಸಹ ಭಾಗವಹಿಸಿದ್ದರು.

ಕೇಂದ್ರ ಜಲಸಂಪನ್ಮೂಲ ಮಾಜಿ ಕಾರ್ಯದರ್ಶಿ ಪ್ರೊ.ರಾಮಸ್ವಾಮಿ ಅಯ್ಯರ್, ಫ್ರಂಟ್‌ಲೈನ್ ಪತ್ರಿಕೆಯ ಸಂಪಾದಕರಾದ ಎನ್.ರಾಮ್, MIDSನ ಅಧ್ಯಕ್ಷರಾದ ಪ್ರೊ.ಕೆ.ಟಿ.ಕುರಿಯನ್, ನಿರ್ದೇಶಕರಾದ ವಿ.ಕೆ.ನಟರಾಜ್ ಮುಂತಾದವರು ಭಾಗವಹಿಸಿದ್ದು ಬೆಂಗಳೂರಿನ ಸಭೆಯ ಉದ್ಘಾಟನೆಯನ್ನು ವಿಶ್ರಾಂತ ನ್ಯಾಯಮೂರ್ತಿಗಳಾದ ಡಿ.ಎಂ.ಚಂದ್ರಶೇಖರ್‌ರವರು ನೆರವೇರಿಸಿದ್ದು ಈ ಪ್ರಯತ್ನಕ್ಕೆ ಮತ್ತಷ್ಟು ವಿಶ್ವಾಸವನ್ನು ತುಂಬಿತು.

ಬೆಂಗಳೂರಿನ ಸಭೆಯಲ್ಲಿ ಮಹತ್ವದ ಈ ಪ್ರಯತ್ನವನ್ನು ಮುಂದುವರಿಸಲು ಸಮಿತಿಯೊಂದನ್ನು ರಚಿಸಿ ಈ ಸಮಿತಿಗೆ 'ಕಾವೇರಿ ಕುಟುಂಬ' ಎಂದು ನಾಮಕರಣ ಮಾಡಲಾಯಿತು.

ಈ 'ಕಾವೇರಿ ಕುಟುಂಬ' ಕಳೆದ ಹದಿನಾಲ್ಕು ತಿಂಗಳುಗಳಲ್ಲಿ ನಾಲ್ಕು ಬಾರಿಯ ಬೇಟಿಯಲ್ಲಿ ಸಭೆಗಳನ್ನು ಸೇರಿದೆ ಮತ್ತು ಮೂರು ಬಾರಿ ಎರಡುಬಾರಿ ತಮಿಳುನಾಡು ಭಾಗದ ಕಾವೇರಿ ಕಣಿವೆ ಪ್ರದೇಶ ಹಾಗೂ ಒಂದು ಬಾರಿ ಕರ್ನಾಟಕ ಕಾವೇರಿ ಪ್ರದೇಶಕ್ಕೆ ಬೇಟಿ ನೀಡಿ ಪರಸ್ಪರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ ಮತ್ತು ಸುದೀರ್ಘವಾಗಿ ಸಮಸ್ಯೆ ಪರಿಹಾರಕ್ಕೆ

ಕಾವೇರಿ ಕುಟುಂಬ



ಇರುವ ಮಾರ್ಗಗಳ ಬಗ್ಗೆ ಗಹನವಾದ ಚರ್ಚೆಗಳನ್ನು ನಡೆಸಿದೆ.

ಇತ್ತೀಚೆಗೆ ಜೂನ್ 11..2004 ರಂದು ತಮಿಳುನಾಡಿನ ತಿರುಚಿ ನಗರದಲ್ಲಿ ಸಭೆ ಸೇರಿ, ಹದಿನಾಲ್ಕು ತಿಂಗಳು ಕ್ರಮಿಸಿದ ಹಾದಿಯ ಬಗ್ಗೆ ಮೆಲುಕು ಹಾಕಿದಾಗ ಎಲ್ಲರ ಬಾಯಿಯಲ್ಲಿ ಬಂದಿದ್ದು, ಪ್ರೀತಿ, ವಿಶ್ವಾಸದ ಮಾತುಗಳು.

ಕಳೆದ ವರ್ಷದಲ್ಲಿ ಚೆನ್ನೈ ಮತ್ತು ಬೆಂಗಳೂರಿನಲ್ಲಿ ನಡೆದ ಸಭೆಗಳಲ್ಲಿ ನನ್ನ ರಾಜ್ಯದ ರೈತನ ಸಮಸ್ಯೆ, ನನ್ನ ರಾಜ್ಯದ ರೈತನ ಸಮಸ್ಯೆ ಎಂದು ವಾದ ಮಾಡುತ್ತಿದ್ದ, ಈ ವಾದದಲ್ಲಿ ಕೆಲವೊಮ್ಮೆ ಪರಸ್ಪರ ದೋಷಣೆ, ಬೆದರಿಕೆ ಮಾತುಗಳು ವ್ಯಕ್ತವಾಗಿದ್ದ ಪರಿಸ್ಥಿತಿ ಮಾಯವಾಗಿ ಇಡೀ ಕಾವೇರಿ ಪ್ರದೇಶದ ಸಮಸ್ಯೆಯನ್ನು ಕುಟುಂಬದ ಸಮಸ್ಯೆಯಾಗಿ ಚರ್ಚಿಸಿ, ಏನು ಮಾಡಬಹುದೆಂಬ ಸ್ನೇಹಮಯ ವಾತಾವರಣ ಮೂಡಿಸಿರುವುದನ್ನು ಗಮನಿಸಿತು.

ಕಾವೇರಿ ನದಿ ನೀರಿನ ಹಂಚಿಕೆ ಮತ್ತು ಮುಖ್ಯವಾಗಿ ಸಂಕಷ್ಟ ಪರಿಹಾರ ಸೂತ್ರವನ್ನು ರೂಪಿಸುವುದು ತೀರ ಕಠಿಣವಾದ ಕೆಲಸವಾದರೂ, ಎರಡು ರಾಜ್ಯಗಳ ರೈತರ, ನಡುವೆ ಮೂಡಿ ಬಂದಿರುವ ಪರಸ್ಪರ ತಿಳುವಳಿಕೆ, ಸ್ನೇಹಮಯ ವಾತಾವರಣ ವಿಶ್ವಾಸದಿಂದ ಸಮಸ್ಯೆಯ ಇತ್ಯರ್ಥ ಸಾಧ್ಯವಾಗಬಹುದೆಂಬ ನಂಬಿಕೆಯನ್ನು ವ್ಯಕ್ತಪಡಿಸಿತು. ಈ ಹಿನ್ನೆಲೆಯಲ್ಲಿ ಪರಿಸ್ಥಿತಿಯ ನೈಜ ಚಿತ್ರಣವನ್ನು ಆಯಾಯ ಪ್ರದೇಶದ ರೈತ, ಕೂಲಿಕಾರರ ನಡುವೆ ಪ್ರಚಾರ ಮಾಡಿ, ಯಾವುದೇ ಕಾರಣಕ್ಕೂ ಕಾವೇರಿ ನದಿ ನೀರಿನ ವಿಷಯವನ್ನು ಪ್ರಾದೇಶಿಕ ಸಂಕುಚಿತ ಶಕ್ತಿಗಳು, ದುರುಪಯೋಗಪಡಿಸಿಕೊಂಡು ದೌರ್ಜನ್ಯ, ಹಿಂಸೆ ನಡೆಸುವುದನ್ನು ತಡೆಯಲು ಮುಂದಾಗಬೇಕೆಂದು ನಿರ್ಧರಿಸಿತು ಮತ್ತು ಇಂತಹ ಯಾವುದೇ ಕೆಲಸಗಳಲ್ಲಿ ಕುಟುಂಬದ ಸದಸ್ಯ ಸಂಘಟನೆಗಳು, ಸದಸ್ಯರು ಭಾಗವಹಿಸಬಾರದೆಂದು ನಿರ್ಣಯಿಸಿತು. ಕಾವೇರಿ ಕುಟುಂಬದ ಸಭೆ, ಸಮಾಲೋಚನೆಗಳನ್ನು ಮುಂದುವರಿಸಬೇಕೆಂದು ನಿಶ್ಚಯಿಸಿದ ಸಭೆಯು, ಮುಂದಿನ ಸಭೆಯನ್ನು 2044ರ ಆಗಸ್ಟ್‌ನಲ್ಲಿ ಕರ್ನಾಟಕದಲ್ಲಿ ನಡೆಸಬೇಕೆಂದು ಹಾಗೂ ಸಂಕಷ್ಟ ಪರಿಹಾರ ಸೂತ್ರ ಮತ್ತು ನೀರಿನ ಹಂಚಿಕೆ ಸಂಬಂಧಿಸಿದ ವಿಷಯಗಳಿಗೆ ಇನ್ನಷ್ಟು ನಿರ್ಧಿಷ್ಟ ಚರ್ಚೆ ಸಂವಾದಗಳನ್ನು ನಡೆಸಲು ನಿರ್ಧರಿಸಿತು. ಮಾತ್ರವಲ್ಲದೆ, ಈ ದಿಸೆಯಲ್ಲಿ ನಾಗರೀಕ ಸಮಾಜ, ಕಾವೇರಿ ಕುಟುಂಬದ ಜೊತೆ ಕೈಜೋಡಿಸಿ, ಈ ಪ್ರಯತ್ನವನ್ನು ಯಶಸ್ವಿ ಮಾಡಲು ಸಹಕರಿಸಲು ಕೋರಿದೆ.

ಕಾವೇರಿ ಕುಟುಂಬ ಈಗ ಸದ್ಯ ನೀರಿನ ಹಂಚಿಕೆ ಮತ್ತು ಸಂಕಷ್ಟ ಪರಿಹಾರ ಸೂತ್ರದ ಬಗ್ಗೆ ಗಮನ ಹರಿಸುತ್ತಿದ್ದರೂ ಪರಿಸರ ರಕ್ಷಣೆ, ಅಂತರ್‌ಜಲ ಹೆಚ್ಚಿಸುವುದು, ಕುಡಿಯುವ ನೀರಿನ ಸಮಸ್ಯೆ ಜೀವರಾಶಿಗಳ ಸಂರಕ್ಷಣೆ ಇತ್ಯಾದಿ ಅಂಶಗಳತ್ತ ಗಮನ ಹರಿಸುವುದು ಸಹ ಕುಟುಂಬದ ಉದ್ದೇಶವಾಗಿದೆ.

ಈ ಕಾವೇರಿ ಕುಟುಂಬ ಸಂಚಾಲಕರಾಗಿ ಎಮ್‌ಐಡಿಎಸ್‌ನ ಪ್ರೊ. ಜನಕರಾಜ್ ಸಲಹೆಗಾರರಾಗಿ ಪ್ರೊ.ರಾಮಸ್ವಾಮಿ ಅಯ್ಯರ್ ಮಾಜಿ ಜಿಲ್ಲಾಧಿಕಾರಿಗಳಾದ ಡಿ.ಗಂಗಪ್ಪ (ಕರ್ನಾಟಕ) ಸಂಯೋಜಕರಾಗಿ ಪ್ರೊ.ವಿ.ಕೆ. ನಟರಾಜ್, ಡಾ. ಜಿ.ಎನ್.ಪ್ರಕಾಶ್ (ಬೆಂ. ಕೃಷಿ ವಿ.ವಿ) ಮತ್ತು ನೀರಾವರಿ ತಜ್ಞರಾಗಿ ಎನ್.ನಟರಾಜನ್(ತಮಿಳುನಾಡು), ಶ್ರೀ ಭವಾನಿಶಂಕರ್ (ಕರ್ನಾಟಕ) ಕಾರ್ಯನಿರ್ವಹಿಸುತ್ತಿದ್ದಾರೆ.

ಮಾಧ್ಯಮಗಳ ಪ್ರತಿಕ್ರಿಯೆ

ಕಾವೇರಿ ಕುಟುಂಬದ ಸಭೆ ಮತ್ತು ಕ್ಷೇತ್ರ ದರ್ಶನಕ್ಕೆ ಹೋದೆಡೆಯಲ್ಲಿ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಗೆಳೆಯರು ಕುಟುಂಬದ ಜೊತೆಯಲ್ಲಿ ಬಂದು ಪ್ರತಿಯೊಂದು ವಿಷಯಕ್ಕೆ ಬಾರಿ ಮಹತ್ವ ನೀಡಿ ಪ್ರಚಾರಿಸಿದರು ಮತ್ತು ಈ ಪ್ರಯತ್ನಕ್ಕೆ ಫಲಪ್ರದವಾಗಲೆಂದು ಹಾರೈಸಿದ್ದರು


ಕುಟುಂಬದ ಸದಸ್ಯರ ಕೈತುಂಬ- ಬಣ್ಣ ಬಣ್ಣದ ಶಾಲು

ಕುಟುಂಬದ ಸದಸ್ಯರು ಪ್ರತಿ ಗ್ರಾಮಕ್ಕೆ ಭೇಟಿ ನೀಡುವಾಗಲು ಕೆಂಬಾವುಟದ ರೈತಸಂಘಗಳ ಕಾರ್ಯಕರ್ತರು ಕೆಂಪು ಶಾಲುಗಳನ್ನು ಹೊದಿಸಿದರೆ ಮತ್ತೆ ಕೆಲವರು ಹಸಿರು ಶಾಲುಗಳನ್ನು ಹೀಗೆ ಬಣ್ಣ ಬಣ್ಣದ ಶಾಲುಗಳು ಕುಟುಂಬದ ಸದಸ್ಯರಿಗೆ ಹೊದಿಸಿ ಗೌರವದಿಂದ ಸ್ವಾಗತ ಮಾಡುತ್ತಿದ್ದರು.

ಊಟ, ಉಪಚಾರಗಳನ್ನು ನೀಡುವಲ್ಲಿ ಬಾರಿ ಮುತುವರ್ಜಿಯನ್ನು ವಹಿಸಿ 'ಅತಿಥಿ' ವೆಂದರೆ ಹೀಗೆ ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು.

ಊಟ, ಉಪಚಾರಗಳಲ್ಲಿ ಮಾತ್ರವಲ್ಲದೆ, ಕಾವೇರಿ ನೀರಿನ ಹಂಚಿಕೆ ವಿಷಯ, ನೀರಾವರಿ ಪ್ರಶ್ನೆ, ಕೃಷಿಯ ಪದ್ಧತಿ, ಇತ್ಯಾದಿ ಹಲವಾರು ವಿಷಯಗಳ ಬಗ್ಗೆ ಖಂಡಿತವಾಗಿಯೂ ತಮಿಳುನಾಡಿನ ಈ ಪ್ರದೇಶದ ಸಾಮಾನ್ಯ ರೈತರ ಜ್ಞಾನವನ್ನು ಮೆಚ್ಚತಕ್ಕದ್ದು.

ನೂರಾರು ವರ್ಷಗಳ ಕಾಲ ನೀರಾವರಿ ಪ್ರದೇಶದಲ್ಲಿ ಕೃಷಿ ಮಾಡಿರುವ ರೈತರು ಇವರು.



ಬೆಲೆಯೇರಿಕೆ ವ್ಯತ್ಯಾಸ

ಜಿ.ಎಸ್.ಮಣಿ

ಪೆಟ್ರೋಲ್, ಡಿಸೆಲ್ ಮತ್ತು ಅಡುಗೆ ಅನಿಲ ಗಳ ಬೆಲೆ ಹೆಚ್ಚಾಗಿದೆ. ಹಿಂದೆ ಎನ್‌ಡಿಎ ಸರ್ಕಾರವಿದ್ದಾಗಲೂ ಹೆಚ್ಚಾಗುತ್ತಲೇ ಇತ್ತು. ಈಗ ಯುಪಿಎ ಸರ್ಕಾರ ಬಂದಾಗಲೂ ಹೆಚ್ಚಾಗುತ್ತಿದೆ ಎಂದು ಕೆಲವರು ಹೇಳಬಹುದು. ಮೇಲ್ನೋಯಿಂದ ನೋಡಿದರೆ ಇದು ನಿಜ ಎಂದೂ ಅನ್ನಿಸಬಹುದು. ಆದರೆ ಆಳದಲ್ಲಿ ಮೂಲಭೂತವಾದ ವ್ಯತ್ಯಾಸವಿದೆ.

ಹಾಗೆ ನೋಡಿದರೆ ಕಾಂಗ್ರೆಸ್ ಮತ್ತು ಬಿಜೆಪಿಗಳ ಆರ್ಥಿಕ ನೀತಿಗಳಲ್ಲಿ ಬಹಳ ವ್ಯತ್ಯಾಸ ಕಾಣಲಿಕ್ಕಿಲ್ಲ. ಆದರೆ ಯುಪಿಎ ಸರ್ಕಾರ ಎಡ ಪಕ್ಷಗಳ ಬೆಂಬಲದಿಂದ ಆದದ್ದು. ಆದ್ದರಿಂದಲೇ ಇಲ್ಲಿ ವ್ಯತ್ಯಾಸವಿರುವುದು ಜನವಿರೋಧಿ ಕ್ರಮಗಳನ್ನು ತೆಗೆದುಕೊಳ್ಳಲು ಕಾಂಗ್ರೆಸ್ ತುದಿಗಾಲಿನಲ್ಲಿದ್ದಾಗಲೂ ಎಡಪಕ್ಷಗಳು ಜನಪರತೆಯ ಲಗಾಮನ್ನು ಹಿಡಿದಿವೆ. ದಿನನಿತ್ಯದ ಆಡಳಿತದಲ್ಲಿ ಎಡಪಕ್ಷಗಳು ಮೂಗು ತೂರಿಸದಿದ್ದರೂ ಸಿಪಿಐ(ಎಂ)ನ ನೇತೃತ್ವದಲ್ಲಿ ಇವು ನೀತಿಗಳ ವಿಷಯದಲ್ಲಿ ಖಂಡಿತವಾಗಿಯೂ ಜನಪರವಾದ ಪ್ರಭಾವವನ್ನು ಸರ್ಕಾರದ ಮೇಲೆ ಬೀರುತ್ತಿವೆ.

ಎನ್.ಡಿ.ಎ ಸರ್ಕಾರದ ಕಾಲದಲ್ಲಿಯೂ ಬೆಲೆ ಏರಿಕೆ ಆಗುತ್ತಿತ್ತು. ಈ ದೇಶದಲ್ಲಿ ಬಡಜನರು ಮತ್ತು ಜನಸಾಮಾನ್ಯರು ಇಲ್ಲವೇನೋ ಎಂಬಂತೆ ಆ ಸರ್ಕಾರ ವರ್ತಿಸುತ್ತಿತ್ತು. ಯಾವ ಮಧ್ಯರಾತ್ರಿ ಪೆಟ್ರೋಲ್, ಡೀಸೆಲ್ ಇತ್ಯಾದಿಗಳ ಬೆಲೆ ಹೆಚ್ಚಾಗುತ್ತಿತ್ತೋ ಗೊತ್ತಾಗುತ್ತಿರಲಿಲ್ಲ. ಈ ಬೆಲೆ ಹೆಚ್ಚಳಕ್ಕೆ ಮಿತಿಯಿರಲಿಲ್ಲ. "ವಿಶ್ವ ಮಾರುಕಟ್ಟೆಗೆ ತಕ್ಕಂತೆ" ಎಷ್ಟು ದಿನ ಸಹಾಯಧನ ನೀಡುವುದು ಸಾಧ್ಯ" "ಸಹಾಯಧನ ನೀಡಿಯೇ ಜನ ಸೋಮಾರಿಗಳಾಗು ತ್ತಿದ್ದಾರೆ. ಇತ್ಯಾದಿ ಸಮರ್ಥನೆಗಳು ಆ ಸರ್ಕಾರದ ಮಂತ್ರಿಗಳಿಂದ ವಕ್ತಾರರಿಂದ ಬರುತ್ತಿದ್ದವು. ಜನರೂ ಸಹ ಇವುಗಳು ಅನಿವಾರ್ಯವೇನೋ ಎಂಬಂತೆ ಒಪ್ಪಿಕೊಂಡಂತೆ ಇರುತ್ತಿದ್ದರು. ಈ ಎಲ್ಲ ನೋವುಗಳನ್ನು ಚುನಾವಣೆಯ ಸಮಯದಲ್ಲಿ ಅವರು ಹೊರಹಾಕಿದರೆಂಬುದು ಈಗ ಸ್ಪಷ್ಟ.

ಎನ್‌ಡಿಎ ಸರ್ಕಾರ ವಾಪಸ್ಸು ಅಧಿಕಾರಕ್ಕೆ ಬಂದರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ಅಗಾಧವಾಗಿ ಆಗಲಿವೆ ಎಂದು ಆಗಲೇ ಸಮೂಹ ಮಾಧ್ಯಮಗಳು ಹೇಳಿದ್ದವು.

ಕಾಂಗ್ರೆಸ್ ಸಹ ಇಂತಹ ವಿಚಾರಗಳನ್ನು ಮೊದಲು ಇಟ್ಟುಕೊಂಡಿತ್ತೆಂದು ಕಾಣುತ್ತದೆ. ಆದರೆ ಎಡಪಕ್ಷಗಳ ಮಧ್ಯ ಪ್ರವೇಶದಿಂದ ಈ ಏರಿಕೆಗಳು ಅಲ್ಪಪ್ರಮಾಣದಲ್ಲಿ ಮಾತ್ರ ಆಗಿದೆ. ಎಡಪಕ್ಷಗಳು "ಜವಾಬ್ದಾರಿ ಇಲ್ಲದೆ ಅಧಿಕಾರ ಚಲಾಯಿಸುತ್ತಿವೆ" ಎಂದು ಬೂರ್ಜ್ವ ಮಾಧ್ಯಮಗಳಲ್ಲಿ ಅಪಪ್ರಚಾರ ಬರುತ್ತಲೇ ಇದೆ. ಇಲ್ಲಿ ವರ್ಗಹಿತಗಳು ಕೆಲಸ ಮಾಡುತ್ತಿರುವುದು ಸ್ಪಷ್ಟ. ಬೂರ್ಜ್ವ ಆಸಕ್ತಿಗಳಿಗೆ ಲಗಾಮು ಹಾಕಿ ಜನಸಾಮಾನ್ಯರ ಹಿತಾಸಕ್ತಿಗಳನ್ನು ಎಡಪಕ್ಷಗಳು ಕಾಯುತ್ತಿರುವುದರಿಂದಲೇ ಇಂತಹ ಆಪಾದನೆಗಳು ಬರುತ್ತಿವೆಯೆಂಬುದನ್ನು ನಾವು ಕಾಣಬಹುದು. ಬಹುತೇಕ ಸಂಖ್ಯೆಯ ಜನಸಾಮಾನ್ಯರ ಹಿತಾಸಕ್ತಿಗಳನ್ನು ಅತ್ಯಂತ ಜವಾಬ್ದಾರಿಯಿಂದ ಅಧಿಕಾರವಿಲ್ಲದೆಯೂ ಎಡಪಕ್ಷಗಳು ಕಾಯುತ್ತಿವೆ ಎಂಬುದು ನಮ್ಮ ಬೂರ್ಜ್ವ ಮಾಧ್ಯಮಗಳಿಗೂ ಗೊತ್ತು. ಆದರೆ ಅವು ಅದನ್ನು ಒಪ್ಪಿಕೊಳ್ಳಲಾರವು ಅಷ್ಟೆ. (ವರ್ಗ ಹಿತಾಸಕ್ತಿ ಅಡ್ಡಬರುವುದರಿಂದ)

ಜನರ ವಿಷಯಗಳು ಪ್ರಾಮುಖ್ಯತೆಯಲ್ಲಿ

ಕಾಂಗ್ರೆಸ್ ನೇತೃತ್ವದ, ಎಡ, ಜಾತ್ಯತೀತ ಪಕ್ಷಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ ಆಡಳಿತ ಸೂತ್ರ ವಹಿಸಿಕೊಂಡ ಮೇಲೆ ಒಂದು ಬಹುಮುಖ್ಯ ಬದಲಾವಣೆ ಆಗಿದೆ. ಅದೆಂದರೆ ಜನರ ವಿಷಯಗಳು ಪ್ರಾಮುಖ್ಯತೆ ಪಡೆಯುತ್ತಿವೆ. ದುಡಿವ ಜನರ ಹಿತಾಸಕ್ತಿಯ ವಿಷಯಗಳು ಸಮೂಹ ಮಾಧ್ಯಮಗಳಲ್ಲಿ ಕಂಡುಬರುತ್ತಿವೆ.

ಎನ್‌ಡಿಎ ಸರ್ಕಾರದಡಿ ಬಂಡವಾಳಿಗರ ವಿಷಯಗಳು, ಸುಧಾರಣೆಯ ಹೆಸರಿನಲ್ಲಿ ಮುಂದೆ ಬಂದಿದ್ದವು. ದುಡಿವ ಜನರ ವಿಷಯಗಳು ನಗಣ್ಯವೊ ಎಂಬಂತೆ ಆಗಿತ್ತು.

ಕಾರ್ಮಿಕ ಸುಧಾರಣೆಯ ಹೆಸರಿನಲ್ಲಿ ಯಾವಾಗ ಬೇಕಾದರೂ ಕೆಲಸಕ್ಕೆ ತೆಗೆದುಕೊಳ್ಳಬಹುದು. ಬೇಡವಾದಾಗ ತೆಗೆಯಬಹುದು ಎಂಬುದು ಕಾನೂನಾಗಿ ಬರ ಹೊರಟಿತ್ತು. ಒಂದು ಸಾವಿರದವರೆಗೆ ಕೆಲಸಗಾರರಿರುವಲ್ಲಿ ಇರುವ ನಿರ್ಬಂಧಗಳನ್ನು ಸಡಿಲಿಸಲಾಗಿತ್ತು. ದುಡಿವ ಜನರ ಪ್ರಾವಿಡೆಂಟ್‌ಫಂಡ್‌ನ ಮೇಲಿನ ಬಡ್ಡಿದರವನ್ನು ಕಡಿತಗೊಳಿಸುತ್ತಲೇ ಬರಲಾಯಿತು. ಕೆಲಸಗಾರರ ಪಿಂಚಣಿ ಯೋಜನೆಯನ್ನೇ ತಿರುಚಿ ಹೊಸ ಪಿಂಚಣಿ ಯೋಜನೆಯನ್ನು ತರಲಾಯಿತು. ಈ ಯೋಜನೆ ಮಾಲಕರ ಪರವಾಗಿ ಇರುವಂತೆ ನೋಡಿಕೊಳ್ಳಲಾಗಿತ್ತು. ಇದಲ್ಲದೆ ಬಂಡವಾಳದ ಮೇಲಿರುವ ಹಲವು ನಿರ್ಬಂಧಗಳನ್ನು ತೆಗೆದು ಹಾಕಲಾಗಿತ್ತು.

ಒಟ್ಟಿನಲ್ಲಿ ಹೇಳುವುದಾದರೆ ಬಂಡವಾಳ ಲಂಗುಲಗಾಮಿಲ್ಲದೆ ದುಡಿವ ಜನರ ಎದೆಯ ಮೇಲೆ ನಗ್ನ ನರ್ತನ ಮಾಡಲು ಅನುವು ಮಾಡಿಕೊಡುವ ಎಲ್ಲ ಕ್ರಮಗಳನ್ನು ಎನ್‌ಡಿಎ ಸರ್ಕಾರ ಕೈಗೊಳ್ಳುತ್ತಲಿತ್ತು.

ಬದಲಾವಣೆಗೆ ಮತ ನೀಡಿದ ದುಡಿವ ಜನತೆಗೆ ಕನಿಷ್ಠ ಈ ಬದಲಾವಣೆ ಕಾಣಿಸುತ್ತಿದೆ. ಜನರ ಬದುಕಿಗೆ ಸಂಬಂಧಪಟ್ಟ ವಿಷಯಗಳು ಮೇಲಕ್ಕೆ ಬರುತ್ತಿವೆ. ಎಡಪಕ್ಷಗಳ ಹೋರಾಟದಿಂದ ಪರಿಸ್ಥಿತಿ ಬದಲಾಗುತ್ತಿದೆ. ಜನಸಾಮಾನ್ಯರು ನೆಮ್ಮದಿಯ ನಿಟ್ಟುಸಿರು ಬಿಡಲು ಸ್ವಲ್ಪವಾದರೂ ಅವಕಾಶ ಈಗಿದೆ ಅಲ್ಲವೆ?


ಬಹುಕೋಟಿ ರೂ. ಅಕ್ಕಿಹಗರಣ ಸಿಬಿಐ ತನಿಖೆ ಅಗತ್ಯ

ಪುಟ 9 ರಿಂದ

ಆಗಿರುವುದರಿಮದ ಯೋಜನೆಯ ಜಾರಿಯಲ್ಲಿ ಕೇಂದ್ರ ಸರ್ಕಾರ ಉಸ್ತುವಾರಿ ವಹಿಸಬೇಕಿತ್ತು. ಬದಲಾಗಿ ಕೇವಲ ಧಾನ್ಯ ಬಿಡುಗಡೆಮಾಡಿ ಕೈ ತೊಳೆದುಕೊಂಡು ತನ್ನ ಬೇಜವಾಬ್ದಾರಿ ಪ್ರದರ್ಶಿಸಿದೆ. ಮತ್ತು ವಾಜಪೇಯಿ ಸರ್ಕಾರ ಅಗತ್ಯ ವಸ್ತುಗಳ ಕಾಯ್ದೆ ರದ್ದುಗೊಳಿಸಿದ್ದು ಸಹ ಕರಣವಾಗಿದೆ. ಇದರ ದುರುಪಯೋಗ ಪಡಿಸಿಕೊಂಡ ರಾಜ್ಯ ಸರ್ಕಾರದ ಕೆಲ ಸಚಿವರು, ಅಧಿಕಾರಿಗಳು, ಗುತ್ತಿಗೆದಾರರು, ಮತ್ತು ಕಾಳಸಂತೆ ಕೋರರು ಕೋಟ್ಯಾಂತರ ರೂಗಳನ್ನು ಲೂಟಿ ಮಾಡಿ ಹಸಿದ ಜನತೆಯನ್ನು ವಂಚಿಸಿದ್ದಾರೆ.

ಪ್ರಶ್ನೆ: ಯಾವ ರೀತಿ ತನಿಖೆ ಸೂಕ್ತ?

ಶ್ರೀರಾಮರೆಡ್ಡಿ: ಹಗರಣದ ಸಮಗ್ರ ತನಿಖೆ ನಡೆಸಲು ಸಿಬಿಐ ತನಿಖೆ ಸೂಕ್ತ. ರಾಜ್ಯ ಸರ್ಕಾರ ಈಗಾಗಲೇ ಸಿಬಿಐ ತನಿಖೆಗೆ ಆರಂಭಿಸಿದೆ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಎಷ್ಟರ ಮಟ್ಟಿಗೆ ಸಿಓಡಿ ತನಿಖೆಗೆ ಒಳಪಡಿಸಬಹುದು ಎಂಬ ಶಂಕೆ ಇದ್ದೆ ಇದೆ. ಈ ಹಗರಣ ಬೇರೆ ರಾಜ್ಯಗಳಿಗೂ ವ್ಯಾಪಿಸಿರುವುದರಿಂದ ಜಂಟಿ ಸದನ ಸಮಿತಿಗೂ ತನಿಖೆ ಸಾಧ್ಯವಿಲ್ಲ. ಆದ್ದರಿಂದ ಸಿಬಿಐ ತನಿಖೆಗೆ ಒಳಪಡಿಸಿ ತಪ್ಪಿತಸ್ಥರನ್ನು ಗುರುತಿಸಿ ಮೊಕದ್ದಮೆ ಹೂಡಲು ಸಿಬಿಐ ತನಿಖೆ ಸೂಕ್ತ ಹಾಗು ಅಗತ್ಯವಾಗಿದೆ.



ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ನಕಲೀ ವೈದ್ಯ

ನಾವು ದಿನಬೆಳಗಾದರೆ ವೈದ್ಯರ ಹತ್ತಿರ ಹೋಗುತ್ತೇವೆ, ಚಿಕಿತ್ಸೆ ಪಡೆಯುತ್ತೇವೆ, ವೈದ್ಯರ ಚಿಕಿತ್ಸೆಗೆ ಹೊಂದಿಕೊಂಡು ಹೋಗಲು ಪ್ರಯತ್ನಿಸುತ್ತೇವೆ. ಅನೇಕ ವೇಳೆ 'ವೈದ್ಯನೇ ದೇವರು' ಎಂದೂ ತೀರ್ಮಾನಿಸುತ್ತೇವೆ. ಹೆಚ್ಚಿನ ಸಮಯದಲ್ಲಿ ವೈದ್ಯನ ಕೈಗುಣವೇ ಚಿಕಿತ್ಸೆ ಮುಂದುವರೆಸಲು ಮುಖ್ಯ ಕಾರಣವಾಗುತ್ತದೆ. ಆದರೆ ವೈದ್ಯ ಆಧುನಿಕ ಚಿಕಿತ್ಸೆ ನೀಡಬೇಕು, ಅದು ಪರಿಣಾಮಕಾರಿಯಾಗಬೇಕು, ರೋಗ ಹಾಗೂ ಚಿಕಿತ್ಸೆ ಬಗ್ಗೆ ವಿವರ ನೀಡಬೇಕು, ಹಾಗೂ ಜವಾಬ್ದಾರಿ ವಹಿಸಬೇಕು, ಸಾಧ್ಯವಾದಲ್ಲಿ ರೋಗ ತಡೆಗಟ್ಟಲು ಸಹಾಯ ಮಾಡಬೇಕು, ಮುಂತಾದ ವಿಷಯಗಳ ಬಗ್ಗೆ ಜನರ ಗಮನ ಹರಿಯುವುದೇ ಇಲ್ಲ. ವೈದ್ಯ ಹೆಚ್ಚು ಜನರಿಗೆ ಚಿಕಿತ್ಸೆ ನೀಡುತ್ತಾನೆ, ಕಡಿಮೆ ಬೆಲೆಯಲ್ಲೇ ಚಿಕಿತ್ಸೆ ನೀಡುತ್ತಾನೆ, ಬಹಳಷ್ಟು ಔಷಧಿಗಳನ್ನು ಬರೆದು ಕೊಡುತ್ತಾನೆ, ಮುಂತಾದವುಗಳಿಗೆ ಜನರು ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ. ಇದರಿಂದಾಗಿ ನಕಲೀ ವೈದ್ಯರೂ ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗುತ್ತಿದೆ.

ಮೋಸ ಹಾಗೂ ನಕಲೀ ಚಿಕಿತ್ಸೆಗಳು ಸಾಮಾನ್ಯವಾಗಿವೆ. ರಾಜಕೀಯದಂತೆಯೇ, ಆರೋಗ್ಯ ರಕ್ಷಣೆಯೂ ಹಲವಾರು ರಾಕ್ಷಸರಿಗೆ ಕೊನೆಯ ರಕ್ಷಣೆಯಾಗಿದೆ. ಜೆ.ಹೆಚ್.ಯಂಗ್, ಇತಿಹಾಸ ಪ್ರಾಧ್ಯಾಪಕರು ನಕಲೀ ಚಿಕಿತ್ಸೆಯನ್ನು ಹಾಗೂ ಚಿಕಿತ್ಸಕರನ್ನು ಕಂಡುಹಿಡಿಯುವ ಕೆಲವು ಮಾರ್ಗಸೂಚಿಗಳನ್ನು ಗುರುತಿಸಿದ್ದಾರೆ.

1. ಭಯ ಹಾಗೂ ಹೆದರಿಕೆಯನ್ನು ತಮ್ಮ ಲಾಭಕ್ಕಾಗಿ ಬೆಳೆಸುವುದು ಅಥವಾ ಪವಾಡ ತೋರಿಸುವುದಾಗಿ ಭರವಸೆ ಕೊಡುವುದು.

2. ಪವಾಡಮಯ ವೈಜ್ಞಾನಿಕ ಪ್ರಗತಿಯನ್ನು ಸಾಧಿಸುವ ಭರವಸೆ ಕೊಡುವುದು.

3. ಈಗಾಗಲೇ ಅನೇಕ ಚಿಕಿತ್ಸಕರು ಗುಣಪಡಿಸದೇ ಇರುವಂತಹ ಕಾಯಿಲೆಗೆ ನೋವು ರಹಿತ ಸುರಕ್ಷಿತ ಚಿಕಿತ್ಸೆ ಮಾಡುವುದಾಗಿ ಹಾಗೂ ಅದರಿಂದ ಸಂಪೂರ್ಣ ಗುಣಹೊಂದುವುದಾಗಿ ಭರವಸೆ ಕೊಡುವುದು.

4. ದಂತ ಕಥೆ ಹಾಗೂ ಪ್ರತಿಷ್ಠಿತ ವ್ಯಕ್ತಿಗಳ ಪ್ರಸಂಶೆ ಪತ್ರವನ್ನು ಕೋರುವುದು (ಇವುಗಳು ಸತ್ಯ ಹಾಗೂ ಅಭಿಪ್ರಾಯಗಳನ್ನು ಬೇರ್ಪಡಿಸಲಾರವು, ಕಾಕತಾಳೀಯ ವಿಷಯದ ಕಾರಣ ಹಾಗೂ ಪರಿಣಾಮವನ್ನು ತಿಳಿಸಲಾರವು).

5. ಅವರು ಒಂದೇ ಚಿಕಿತ್ಸೆ ವಿಧಾನವನ್ನು ಅನುಸರಿಸದೇ ಅನೇಕ ವಿಧಾನಗಳನ್ನು (ಉದಾ. ಹೋಮಿಯೋಪತಿ, ಆಯುರ್ವೇದ, ಅಲೋಪತಿ) ಅನುಸರಿಸಲು (ರೋಗಿಗೆ ಬೇಕಾದ) ಪ್ರಯತ್ನಿಸುವುದು.

6. ಜಾಹೀರಾತಿನ ಮೂಲಕ ಶ್ರೇಷ್ಠತೆಯನ್ನು ಸ್ಥಾಪಿಸುವುದು (ವೈದ್ಯರು ಜಾಹೀರಾತು ಮಾಡುವಂತಿಲ್ಲ).

7. ಚಿಕಿತ್ಸೆ ಪಡೆಯಲು ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ ಎಂದು ಹೇಳುವುದು.

8. ರೋಗಕ್ಕೆ ಒಂದೇ ಕಾರಣ 'ಆಹಾರ', ನೀರು, ನೀರಿನ ಚಿಕಿತ್ಸೆಯಿಂದ ಎಲ್ಲಾ ರೋಗಗಳನ್ನು ಗುಣಪಡಿಸಬಹುದು' ಎಂದು ನಂಬಿಸುವುದು.

9. ವಿಜ್ಞಾನ ಕುರುಡಾಗಿದೆ, ನಾನು ವಿಜ್ಞಾನಕ್ಕಿಂತ ಎತ್ತರದಲ್ಲಿದ್ದೇನೆ ಹಾಗೂ ಮುಂದಿನ ದಿನಗಳಲ್ಲಿ ನನ್ನ ಪ್ರಾಮುಖ್ಯತೆಯನ್ನು ಎಲ್ಲರೂ ಅರಿಯುತ್ತಾರೆ ಏಡ್ಸ್ ಚಿಕಿತ್ಸೆಗಳ ಸಂದರ್ಭದಲ್ಲಿ ಚಿಕಿತ್ಸಕ ಈ ರೀತಿ ಹೇಳಿ ನಂಬಿಸುವುದು.

10. ತತ್ವವನ್ನು ಸಮಯಕ್ಕೆ ತಕ್ಕಂತೆ ಬದಲಿಸುತ್ತಾ, ಜನರನ್ನು ನಂಬಿಸುವುದು.

ಒಬ್ಬ ನಕಲೀ ವೈದ್ಯನಲ್ಲಿ ಈ ಎಲ್ಲಾ ಗುಣಗಳು ಇರುತ್ತವೆ ಎಂದಲ್ಲ, ಮೇಲೆ ತಿಳಿಸಿದ ಕೆಲವು ಗುಣಗಳು ಮಾತ್ರ ಇರಬಹುದು. ಕೇವಲ ಅನರ್ಹ ವೈದ್ಯರನ್ನೇ ನಕಲೀ ವೈದ್ಯ ಎಂದು ಹೇಳಲಾಗುವುದಿಲ್ಲ. ಆಧುನಿಕ ಚಿಕಿತ್ಸೆ ಕೊಡದ ವೈದ್ಯರೆಲ್ಲರೂ ನಕಲೀ ವೈದ್ಯರು ಎಂದು ಹೇಳುವುದು ತಪ್ಪು. ಅನೇಕ ಬಾರಿ ಆಧುನಿಕ ವೈದ್ಯರಲ್ಲೂ ಈ ಗುಣಗಳಿರಲು ಸಾಧ್ಯ. ಮೇಲೆ ತಿಳಿಸಿದ ಕೆಲವು ಸೂತ್ರಗಳಿಂದ ನಕಲೀ ವೈದ್ಯರನ್ನು ಗುರುತಿಸ ಬಹುದಾಗಿದೆ. ಖಾಸಗೀ ವೈದ್ಯಕೀಯ ವೃತ್ತಿಯಲ್ಲೇ ನಕಲೀ ವೈದ್ಯರು ಇರುವ ಸಾಧ್ಯತೆ ಹೆಚ್ಚು.

ಖಾಸಗೀ ವೈದ್ಯಕೀಯ ನಿಯಂತ್ರಣ ಗೊಳ್ಳದ್ದರಿಂದ ಈ ಪರಿಸ್ಥಿತಿ ಉದ್ಭವವಾಗಿದೆ. ಸರಕಾರ ಈ ಸಮಸ್ಯೆ ಬಗ್ಗೆ ಎಚ್ಚೆತ್ತುಕೊಳ್ಳಬೇಕು ಹಾಗೂ ಜನರೇ ಈ ಸಮಸ್ಯೆಯನ್ನು ಗುರುತಿಸಿ, ಪರಿಹಾರ ಕಂಡುಕೊಳ್ಳಬೇಕು. ನಕಲೀ ವೈದ್ಯನನ್ನು ಒಪ್ಪಿಕೊಳ್ಳುವುದು ವ್ಯಕ್ತಿ 'ತಿಳುವಳಿಕೆಯ ಸ್ವಾತಂತ್ರ್ಯ', 'ಆಯ್ಕೆಯ ಸ್ವಾತಂತ್ರ್ಯವನ್ನು' ಕೇಳುತ್ತಾ 'ಮೋಸ ಹೋಗುವ ಸ್ವಾತಂತ್ರ್ಯವನ್ನು' ಪಡೆದಂತಾಗುತ್ತದೆ.

ಯುರೋ - ಪಾರ್ಲಿಮೆಂಟುಚುನಾವಣೆಗಳು

ಯುರೋ-ಬ್ರಾಂಡ್ ಜಾಗತೀಕರಣಕ್ಕೆ ತಿರಸ್ಕಾರ


ತ್ತಿಚೆಗೆ ನಡೆದ ಯುರೋ- ಪಾರ್ಲಿಮೆಂಟು ಚುನಾವಣೆಗಳಲ್ಲಿ ಐಕ್ಯ-ಯುರೋಪು ರೋಧಿ ಶಕ್ತಿಗಳಿಗೆ ಜಯ, ಎಲ್ಲೆಡೆ ಆಳುವ ಪಕ್ಷಗಳ ಪರಾಭವ, ಇರಾಕ್-ಯುದ್ಧ ಪರ ಶಕ್ತಿಗಳ ಸೋಲು, ಐಕ್ಯ-ಯುರೋಪು ವಿರೋಧಿ ಶಕ್ತಿಗಳ ಗಮನಾರ್ಹ ಮುನ್ನಡೆ. ಸಪ್ಪೆ ಮತದಾನ - ಇವೆಲ್ಲ ರಾಜಕೀಯ ವೀಕ್ಷಕರನ್ನು ಂದಲಗೊಳಿಸಿದೆ. ಪ್ರತಿದೇಶದ ರಾಜಕೀಯ ಛಾಪು, ಹತ್ತು ಹೊಸದಾಗಿ ಸೇರಿದ ೇಶಗಳ ಮತದಾರರು ಮೊದಲ ಬಾರಿಗೆ ಭಾಗವಹಿಸುತ್ತಿರುವುದು, ಯುರೋಪು ವ್ಯಾಪಿ ಚುನಾವಣಾ ವಿಷಯಗಳ ಅಭಾವ-ಚುನಾವಣಾ ಫಲಿತಾಂಶದ ವಿಶ್ಲೇಷಣೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿದೆ. ಈ ಎಲ್ಲಾ ಗೊಂದಲಕಾರಿ ಅಂಶಗಳ ನಡುವೆ ಸ್ಪಷ್ಟವಾಗಿ ಗುರತಿಸಬಹುದಾದ ಕೆಲವು ಅಂಶಗಳಿವೆ. ಐಕ್ಯ-ಯುರೋಪು ಹೆಸರಲ್ಲಿ ಜನತೆಯ ಪ್ರಜಾಸತ್ತಾತ್ಮಕ- ಸಾಮಾಜಿಕ-ಆರ್ಥಿಕ ಹಕ್ಕು/ಸವಲತ್ತುಗಳ ಮೇಲೆ ಧಾಳಿಯನ್ನು ಜನ ತಿರಸ್ಕರಿಸಿದ್ದಾರೆ. ಇರಾಕ್-ಯುದ್ಧಕ್ಕೆ ತಮ್ಮ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ 'ಯುರೋ-ಬ್ರಾಂಡಿನ' ಜಾಗತೀಕರಣವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.



ಯುರೋಪಿಯನ್ ಪಾರ್ಲಿಮೆಂಟಿಗೆ ಲ್ಕು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಗಳು ಮಾನ್ಯವಾಗಿ ಸುದ್ದಿ ಮಾಡುವುದಿಲ್ಲ. ಈ ರಿಯ ಚುನಾವಣೆಗಳು - ಫಲಿತಾಂಶ ಲವುಕಾರಣಗಳಿಗಾಗಿ ಕುತೂಹಲ ಕೆರಳಿಸಿತ್ತು. ೊದಲನೆಯದಾಗಿ ಹತ್ತು ಹೊಸ ದೇಶಗಳು ುರೋಪಿಯನ್ ಒಕ್ಕೂಟಕ್ಕೆ ಸೇರಿದ್ದು, ಈ ೇಶಗಳ ಜನತೆ ಮೊದಲ ಬಾರಿಗೆ ುರೋಪಿಯನ್ ಒಕ್ಕೂಟದ ಪಾರ್ಲಿಮೆಂಟಿಗೆ ತದಾನ ಮಾಡುತ್ತಿದ್ದರು. ಇದಲ್ಲದೆ ಹಲವು ಶ್ಚಿಮ ಯುರೋಪ್ ದೇಶಗಳಲ್ಲಿ ುರೋಪಿಯನ್ ಒಕ್ಕೂಟದ ಸ್ವರೂಪ, ್ರತಿದೇಶಕ್ಕೆ ಇರಬಹುದಾದ ಸ್ವಾಯತ್ತತೆ, ೂರ್ವಯುರೋಪಿನ ಹಲವು ದೇಶಗಳು ೇರಿರುವುದರಿಂದ ತಮ್ಮದೇಶದ ಪ್ರಭಾವ ಕಡಿಮೆ ಗುವ ಭೀತಿ-ಅತ್ಯಂತ ಚರ್ಚಾಸ್ಪದ ಷಯವಾಗಿತ್ತು. ಕೆಲವು ದಿನಗಳಲ್ಲಿ ುರೋಪಿಯನ್ ಒಕ್ಕೂಟಕ್ಕೆ ಸಂವಿಧಾನ ರಚಿಸಿ, ಂದೇ ರಾಜಕೀಯ ಘಟಕ ಆಗಿಸುವ ಬಗ್ಗೆ ೃಂಗಸಭೆಗೆ ಯುರೋ ಚುನಾವಣೆ ಮೂಲಕ ಜನತೆ ನು ನಿರ್ದೇಶನ ನೀಡುತ್ತಾರೆ ಎಂಬುದು ುತೂಹಲ ಕೆರಳಿಸಿತ್ತು.

ಯುರೋಪಿಯನ್ ಒಕ್ಕೂಟ ಏನು?

ಯುರೋಪಿಯನ್ ಪಾರ್ಲಿಮೆಂಟಿನಲ್ಲಿ ಸುಮಾರು 8 ಲಕ್ಷ ಜನಸಂಖ್ಯೆಗೆ ಒಂದು ಸೀಟು



ಇದ್ದು, ಈಹಿಂದೆ 626 ಸೀಟುಗಳು ಇದ್ದು, ಹತ್ತು ದೇಶಗಳು ಸೇರಿರುವುದರಿಂದ ಸಂಖ್ಯೆ 788 ಕ್ಕೆ ಏರಿದೆ. ಯುರೋಪಿಯನ್ ಒಕ್ಕೂಟ ಅಮೆರಿಕನ್ ಪ್ರಜಾಪ್ರಭುತ್ವ ಮಾದರಿಯಲ್ಲಿ ರೂಪಿಸಲಾಗಿದ್ದು, ಯುರೋಪಿಯನ್ ಕಮಿಷನ್ ಎಂಬ ಚುನಾಯಿತಅಲ್ಲದ ಅಧಿಕಾರಶಾಹಿಗಳ ಕಾರ್ಯಾಂಗ, ಶಾಸಕಾಂಗಕ್ಕಿಂತ ಹೆಚ್ಚು ಪ್ರಬಲವಾಗಿದೆ. ಆದ್ದರಿಂದ ಪಾರ್ಲಿಮೆಂಟಿಗೆ ಹೆಚ್ಚು ಮಹತ್ವವಿಲ್ಲ, ಹೆಚ್ಚು ಕಡಿಮೆ ಅಲಂಕಾರಿಕವಾಗಿದೆ. ಯುರೋಪಿಯನ್ ಒಕ್ಕೂಟ ವರ್ಗದೃಷ್ಟಿಯಿಂದ ನೋಡಬೇಕೆಂದರೆ ಯುರೋಪಿನ ಬಹು-ರಾಷ್ಟ್ರೀಯ ಪ್ರಬಲ ಗುತ್ತೇದಾರಿ ಬಂಡವಾಳಶಾಹಿ ಶಕ್ತಿಗಳ ಹಿತಾಸಕ್ತಿಗೆ ರೂಪಿಸಲಾಗಿದೆ. ಮುಖ್ಯವಾಗಿ ಫ್ರಂಚ್, ಜರ್ಮನ್(ಆದರೆ ಯುರೋಪಿನಾದ್ಯಂತ ತಮ್ಮಆರ್ಥಿಕ ಸಾಮ್ರಾಜ್ಯ ವಿಸ್ತರಿಸುವ) ಗುತ್ತೇದಾರಿ ಬಂಡವಾಳಶಾಹಿಗಳು ಇದರ ರೂವಾರಿಗಳು. ಆರ್ಥಿಕವಾಗಿ ಯುರೋಪು ಒಂದು ಕೂಟ, ಮಾರುಕಟ್ಟೆಯಾಗುವುದು ಯುರೋಪಿಯನ್ ಆರ್ಥಿಕತೆಗೆ ಜಾಗತಿಕವಾಗಿ ಹೆಚ್ಚಿನ ಬಲ ನೀಡುತ್ತದೆ. ಇದು ಎಲ್ಲರಿಗೆ ಅನುಕೂಲಕರ ಎಂಬುದು ಅವರ ವಾದ. ಎಲ್ಲೆಡೆಯಂತೆ ಯುರೋ-ಬ್ರಾಂಡಿನ ಈ ಸಾಮ್ರಾಜ್ಯಶಾಹಿ, ಜಾಗತೀಕರಣ, ಕೇವಲ ಯುರೋಪಿನ ಪ್ರಬಲ ಬಹುರಾಷ್ಟ್ರೀಯ ಗುತ್ತೇದಾರಿ ಬಂಡವಾಳಶಾಹಿ ಗುಂಪುಗಳ ಒಂದು ಸಣ್ಣ ವಿಭಾಗಕ್ಕೆ ಅನುಕೂಲಕರವಾಗಿ ರೂಪುಗೊಳ್ಳುತ್ತಿದೆ. ಉಳಿದೆಲ್ಲರೂ ಇದರ ದುಷ್ಪರಿಣಾಮಗಳನ್ನು ಅನುಭವಿಸಬೇಕಾಗಿದೆ. ಇದರಿಂದಾಗಿ ಯುರೋಪಿನೊಳಗೆ ದೇಶಗಳ ನಡುವೆ, ದೇಶಗಳೊಳಗೆ ವಿವಿಧ ವರ್ಗಗಳ ನಡುವೆ ಇರುವ ಆರ್ಥಿಕ ಪಾಲಿನಲ್ಲಿ ಇರುವ ವೈಷಮ್ಯ ಇನ್ನಷ್ಟುಹೆಚ್ಚಿದೆ. ಹಲವು ದೇಶಗಳಲ್ಲಿ ಜನತೆ ದಶಕಗಳ, ಶತಮಾನಗಳ ಹೋರಾಟದ ನಂತರ ಗೆದ್ದುಕೊಂಡ ಪ್ರಜಾಸತ್ತಾತ್ಮಕ ಆರ್ಥಿಕ-ಸಾಮಾಜಿಕ ಹಕ್ಕು /ಸವಲತ್ತುಗಳನ್ನು ಯುರೋಪಿಯನ್ ಒಕ್ಕೂಟದ ಸಾಮಾನ್ಯ ಕಾನೂನಿನ ಹೆಸರಲ್ಲಿ ಕಿತ್ತುಕೊಳ್ಳಲಾಗಿದೆ. ಸಾಮಾನ್ಯ ಜನತೆ ಮೇಲೆ ಪರಿಣಾಮ ಬೀರುವ ಹಲವು ಸಾಮಾಜಿಕ - ಆರ್ಥಿಕ ವಿಷಯಗಳ ಮೇಲೆ ಪ್ರತಿ ದೇಶದ ಸರ್ಕಾರಕ್ಕೆ ಇರುವ ಸಾರ್ವಭೌಮ ಹಕ್ಕುಗಳನ್ನು ಮೊಟಕುಗೊಳಿಸಲಾಗಿದೆ.

ವಿವಿಧ ರಾಜಕೀಯ ಶಕ್ತಿಗಳ ಧೋರಣೆಗಳು


ಇದರಿಂದಾಗಿ ಯುರೋಪಿಯನ್ ಒಕ್ಕೂಟ ಬಗ್ಗೆ ಹಲವು ಜನವಿಭಾಗಗಳು ವಿರೋಧ ವ್ಯಕ್ತಪಡಿಸಿವೆ. ಹಲವು ದೇಶಗಳ ರಾಷ್ಟ್ರೀಯ ಬಂಡವಾಳಶಾಹಿ, ಗುತ್ತೇದಾರಿ ಅಲ್ಲದ ಬಂಡವಾಳಶಾಹಿ, ಎಲ್ಲಾ ಕಡೆ ಕಾರ್ಮಿಕ ವರ್ಗ, ದುಡಿಯುವ ಜನ ವಿರೋಧಿಸುತ್ತ ಬಂದಿದ್ದಾರೆ. ಪ್ರಬಲ ದೇಶಗಳ ಬಂಡವಾಳಶಾಹಿ ವರ್ಗದಲ್ಲಿ ಒಕ್ಕೂಟ ಪರವಾಗಿ ಒಮ್ಮತ ಮೂಡಿದೆ. ಬೇರೆ ಬೇರೆ ರಾಜಕೀಯ ಶಕ್ತಿಗಳು ಬೇರೆ ಬೇರೆ ಧೋರಣೆ ರೂಪಿಸಿವೆ. ಪ್ರಬಲ ದೇಶಗಳಲ್ಲಿ (ಫ್ರಾನ್ಸ್, ಜರ್ಮನಿ, ನೆದರ್‌ಲ್ಯಾಂಡ್) ಮಧ್ಯ ಬಲಪಂಥೀಯ ಶಕ್ತಿಗಳು, ಸೋಶಿಯಲ್ ಡೆಮಾಕ್ರಟಿಕ್ ಪಕ್ಷಗಳು ಒಕೂಟ-ಪರ ಧೋರಣೆ ತೆಗೆದುಕೊಂಡಿವೆ. ಸಣ್ಣ ದೇಶಗಳಲ್ಲಿ ಬಲಪಂಥೀಯ, ಮಧ್ಯ-ಬಲಪಂಥೀಯ ಪಕ್ಷಗಳಲ್ಲಿ ಹಲವು ಒಕ್ಕೂಟ-ವಿರೋಧಿ ಧೋರಣೆ ಅಂಗೀಕರಿಸಿವೆ. ಹೆಚ್ಚಿನ ದೇಶಗಳಲ್ಲಿ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷಗಳು ಒಕ್ಕೂಟ - ಪರ ಧೋರಣೆ ತೆಗೆದುಕೊಂಡಿವೆ. ಹೆಚ್ಚಿನ ದೇಶಗಳಲ್ಲಿ ಅರೆ-ಫ್ಯಾಸಿಸ್ಟ್ ವಲಸೆಗಾರರ - ಅಲ್ಪಸಂಖ್ಯಾತರ ವಿರೋಧಿ ಬಲಪಂಥೀಯ ಶಕ್ತಿಗಳ ಒಕ್ಕೂಟದ ವಿರೋಧಿ ಧೋರಣೆ ಅನುಸರಿಸಿವೆ. ಬ್ರಿಟನ್‌ನಲ್ಲಿ ಉದಾಹರಣೆಗೆ ಲೇಬರ್ ಪಾರ್ಟಿ ಒಕ್ಕೂಟ-ಪರವಾಗಿದ್ದರೆ, ಟೋರಿ ಮತ್ತು ಲಿಬರಲ್ ಪಕ್ಷಗಳ ಒಕ್ಕೂಟ-ವಿರೋಧಿ (ಅಷ್ಟೇನೂ ಪ್ರಬಲವಲ್ಲದಿದ್ದರೂ) ಅರೆ-ಫ್ಯಾಸಿಸ್ಟ್ ಸ್ವತಂತ್ರ ಪಕ್ಷ ಪ್ರಬಲ ಒಕ್ಕೂಟ-ವಿರೋಧಿಯಾಗಿದೆ. ಕಮ್ಯುನಿಸ್ಟ್ /ನೈಜ ಎಡ-ಪಂಥೀಯ ಶಕ್ತಿಗಳು ಒಕ್ಕೂಟದ ಪರಿಕಲ್ಪನೆಯನ್ನು ವಿರೋಧಿಸುವುದಿಲ್ಲ. ಒಕ್ಕೂಟದ ಪ್ರಜಾಸತ್ತೀಕರಣ ಹೆಚ್ಚಿನ ದೇಶಗಳ ಸ್ವಾಯತ್ತತೆ, ಸಮಾಜವಾದಿ ಯುರೋಪಿನ ಘೋಷಣೆ ಕೊಟ್ಟಿದ್ದಾರೆ.

ಫಲಿತಾಂಶ ಏನು?

ಈಗಿನ ಫಲಿತಾಂಶವನ್ನು ಒಕ್ಕೂಟದ ಬಗ್ಗೆ ಈ ಹಿನ್ನೆಲೆಯಲ್ಲಿ ನೋಡಬೇಕು. ಒಟ್ಟಾರೆ ಸೋಶಲಿಸ್ಟ್ /ಸೋಶಿಯಲ್ - ಡೆಮಾಕ್ರಟಿಕ್, ಕಮ್ಯುನಿಸ್ಟ್/ ಎಡ ಶಕ್ತಿಗಳು, ಒಕ್ಕೂಟ-ಪರ ಮಧ್ಯ- ಬಲಪಂಥೀಯ ಶಕ್ತಿಗಳು, ಒಕ್ಕೂಟ- ವಿರೋಧಿ ಮಧ್ಯ-ಬಲ, ಅತಿ ಬಲಪಂಥೀಯ ಶಕ್ತಿಗಳ ಪ್ರಮಾಣ ಲೆಕ್ಕ ಹಾಕಿದರೆ ಭಾರಿ ಬದಲಾವಣೆಗಳು ಆಗಿಲ್ಲ. ಸೋಶಲಿಸ್ಟ್ / ಸೋಶಿಯಲ್ - ಡೆಮಾಕ್ರಟಿಕ್ ಕೂಟದ ಬಲ ಮಾತ್ರ 232 ರಿಂದ 199 ಕ್ಕೆ ಕುಸಿದಿದೆ. ಒಕ್ಕೂಟ ಪರ ಮಧ್ಯ-ಬಲಪಂಥೀಯ ಶಕ್ತಿಗಳೂ ಸೀಟುಗಳನ್ನು ಕಳೆದುಕೊಂಡಿದೆ. ಎಲ್ಲೆಡೆ ಒಕ್ಕೂಟ-ವಿರೋಧಿ ಬಲಪಂಥೀಯ ಶಕ್ತಿಗಳು ಹೆಚ್ಚಿನ ಸೀಟು ಗಳಿಸಿವೆ.

ಒಟ್ಟಾರೆ ಮತದಾನ ಹಿಂದೆಂದಿಗಿಂತಲೂ ಅತ್ಯಂತ ಕನಿಷ್ಟ ಮಟ್ಟಕ್ಕೆ ಕುಸಿದಿದ್ದು ಇನ್ನೊಂದು ವಿಶೇಷ. ಈ ಬಾರಿಯ ಮತದಾನ ಕೇವಲ ಶೇಕಡಾ 40. ಯುರೋಪಿನ್ ಮಾನದಂಡದಿಂದ ಇದು ಬಹಳ ಕಡಿಮೆ. ಯುರೋಪಿಯನ್ ಮತದಾರರ ಸಂಖ್ಯೆ ಶೇ. 70-80 ಸಾಮಾನ್ಯ. ಅದರಲ್ಲೂ ಹೊಸದಾಗಿ ಸೇರಿದ ಎಂಟು ಪೂರ್ವ ಯುರೋಪಿಯನ್ (ಮಾಜಿ ಸಮಾಜವಾದಿ) ದೇಶಗಳಲ್ಲಿ ಇನ್ನೂ ಕಡಿಮೆ ಮತದಾನ (ಕೇವಲ ಶೇಕಡಾ 29) ನಡೆದಿದೆ. ಈ ದೇಶಗಳಲ್ಲಿ ಮತದಾನ ಅತ್ಯಂತ ಹೆಚ್ಚಿನ ಮಟ್ಟದಲ್ಲಿರಬಹುದು. (ಮೊದಲ ಬಾರಿಯಾದ್ದರಿಂದ) ಎಂಬ ನಿರೀಕ್ಷೆಯ ಹಿನ್ನೆಲೆಯಲ್ಲಿ ಇದು ಆಶ್ಚರ್ಯ ತಂದಿದೆ. ಒಕ್ಕೂಟ-ಪರ ಶಕ್ತಿಗಳ ಪರಾಭವ ಮತ್ತು ಒಕ್ಕೂಟ - ವಿರೋಧಿ ಶಕ್ತಿಗಳ ವಿಜಯದ ಜತೆ ನೋಡಿದರೆ, ಒಟ್ಟಾರೆ ಅರ್ಥ ಸ್ಪಷ್ಟ - ಯುರೋಪಿನ ಜನತೆ ಯುರೋ-ಬ್ರಾಂಡಿನ ಸಾಮ್ರಾಜ್ಯಶಾಹಿ ಜಾಗತೀಕರಣದ ಮಾದರಿಯ ಒಕ್ಕೂಟವನ್ನು ತಿರಸ್ಕರಿಸಿದ್ದಾರೆ. ಜನತಾ-ವಿರೋಧಿ ಒಕ್ಕೂಟ ಬೇಡ ಎಂಬ ಸಂದೇಶವನ್ನು ಶೃಂಗಸಭೆಗೆ ನೀಡಿದ್ದಾರೆ. ಒಕ್ಕೂಟದ ಸಂವಿಧಾನ ಈಗಿನ ಸ್ವರೂಪವನ್ನು ತೀವ್ರವಾಗಿ ಜನತಾ-ಪರವಾಗಿ ಬದಲಾಯಿಸಬೇಕು ಎಂಬ ನಿರ್ದೇಶನ ನೀಡಿದ್ದಾರೆ.


ಬ್ರಿಟನ್, ಇಟಲಿಗಳ ಆಳುವ ಪಕ್ಷ/ಕೂಟಗಳು ಭಾರಿ ಪ್ರಮಾಣದಲ್ಲಿ ಶೇಕಡಾವಾರು ಮತ ಕಳೆದುಕೊಂಡಿವೆ. ಇದು ಇರಾಕ್ ಯುದ್ಧ ಪರನೀತಿಗೆ ಜನ ನೀಡಿದ ಶಿಕ್ಷೆ. ಫ್ರಾನ್ಸ್, ಜರ್ಮನ್ ಪಕ್ಷ./ಕೂಟಗಳು (ಇವು ಇರಾಕ್ ಯುದ್ಧ ವಿರೋಧಿ ತಳೆದಿದ್ದರೂ) ಅವುಗಳ ಶ್ರೀಮಂತ ಪರ ನಿರುದ್ಯೋಗ ಹೋಗಲಾಡಿಸಲಾಗದ ಆರ್ಥಿಕ ನೀತಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಬ್ರಿಟನ್, ಸ್ವೀಡನ್, ಚೆಕ್‌ಗಳಲ್ಲಿ ಅರೆ-ಫ್ಯಾಸಿಸ್ಟ್ ಒಕ್ಕೂಟ-ವಿರೋಧಿ ಪಕ್ಷಗಳು ಭಾರಿ ಜಯ ಗಳಿಸಿವೆ. ಬ್ರಿಟನ್‌ನಲ್ಲಿ ಇಂಡಿಪೆಂಡೆನ್ಸ್ ಪಾರ್ಟಿ ಪ್ರಬಲ ಎರಡು (ಟೋರಿ ಮತ್ತು ಲೇಬರ್)



ಶಕ್ತಿಗಳಷ್ಟೇ ಹೆಚ್ಚು ಕಡಿಮೆ ಸೀಟುಪಡೆದಿದೆ. ಬ್ರಿಟನ್‌ನಲ್ಲಿ ಅದೇ ಸಮಯದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಲೇಬರ್ ಪಕ್ಷ ಮೂರನೇ ಸ್ಥಾನಕ್ಕೆ ಹೋಗಿ ಅತ್ಯಂತ ಆಶ್ಚರ್ಯ ತಂದಿತ್ತು.

ಒಕ್ಕೂಟ-ಪರ ಜಾಗತೀಕರಣ ನೀತಿಗಳನ್ನು ಪಾಲಿಸುತ್ತಿರುವ ಆಸ್ಟ್ರಿಯಾ, ಡೆನ್ಮಾರ್ಕ್ ಮತ್ತು ಪೋಲೆಂಡ್‌ಗಳಲ್ಲೂ ಆಳುವ ಪಕ್ಷ/ಕೂಟಗಳಿಗೆ ಬಲವಾದ ಏಟು ಬಿದ್ದಿದೆ ಫಲಿತಾಂಶಗಳಲ್ಲಿ. ಜರ್ಮನಿಯ ಆಳುವ ಸೋಶಲಿಸ್ಟ್ ಪಕ್ಷದ ಮತ ಶೇಕಡಾ 30 ರಿಂದ ಶೇಕಡಾ 20 ಕ್ಕೆ ಕುಸಿದಿದೆ.

ಇದೆಲ್ಲದರ ಅರ್ಥ ಯುರೋಪಿನ ಜನತೆ ಸಾಮ್ರಾಜ್ಯಶಾಹಿ ಜಾಗತೀಕರಣ ಮಾದರಿಯ ಒಕ್ಕೂಟವನ್ನು ಸ್ಪಷ್ಟ ವಿರೋಧಿಸಿದ್ದಾರೆ. ಇರಾಕ್-ಯುದ್ಧಕ್ಕೂ ತಮ್ಮ ಸ್ಪಷ್ಟ ವಿರೋಧ ವ್ಯಕ್ತಪಡಿಸಿದ್ದಾರೆ.



ಚಿಂತನೆಗೆ ಹಚ್ಚುವ ಚಿತ್ರ 'ದೇವ್'

ನಮ್ಮ ದೇಶದಲ್ಲಿ ಇಂದು ಎದ್ದಿರುವ ಕೋಮುಗಲಭೆಗಳಿಗೆ ಕಾರಣಗಳೇನು, ಅದರ ಹಿನ್ನೆಲೆಯ ವಾಸ್ತವವೇನು, ಕೋಮುವಾದಿಗಳ ಕುತಂತ್ರದ ಆಟಕ್ಕೆ ಬಲಿಯಾಗುವ ಅಮಾಯಕರು, ಇದರ ಮಧ್ಯೆಯೂ ಶಾಂತಿ-ಸಹಬಾಳ್ವೆಗಾಗಿ ತುಡಿಯುವ ಮನಸ್ಸುಗಳು...... ಪ್ರೇಕ್ಷಕರ ಮನದಾಳಕ್ಕಿಳಿದು ಚಿಂತನೆಗೆ ಹಚ್ಚುವಂತಹ ಚಿತ್ರವನ್ನಿತ್ತಿದ್ದಾರೆ ಗೋವಿಂದ ನಿಹಲಾನಿ.

ಸದಾ ಅಲ್ಪಸಂಖ್ಯಾತರನ್ನು ಗುಮಾನಿಯಿಂದಲೇ ಕಾಣುವ ಸಮಾಜ-ಸರ್ಕಾರ, ಇದರಿಂದಾಗಿ ರೋಷಗೊಳ್ಳುವ ಭಾರತೀಯ ಅಲ್ಪಸಂಖ್ಯಾತ ಯುವ ಜನಾಂಗದ್ದು 'ಗೌರವಯುತ' ಬದುಕಿನ ಹಕ್ಕಿಗಾಗಿ, ಶಾಂತಿಯುತ ಸಹಬಾಳ್ವೆಗಾಗಿ ತುಡಿಯುವ ಮನಸ್ಸು. ಇಂತಹವರ ಆಕ್ರೋಶವನ್ನೇ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲೆತ್ನಿಸುವ ಎರಡೂ ಕೋಮಿನ ಜನ ನಾಯಕರು ಗಲಭೆ ಹುಟ್ಟು ಹಾಕಿ ಮೋಜು ನೋಡುವವರು.

'ರಾಜಧರ್ಮ'ದ ಪಾಲನೆಗಾಗಿ ಒಂದು ಕೋಮಿನ ಧಾಳಿಕೋರರಿಗೆ ಬೆಂಗಾವಲಾಗಿ ನಿಲ್ಲುವ ಪೋಲೀಸ್ ಅಧಿಕಾರಿ, ದೌರ್ಜನ್ಯಕ್ಕೀಡಾದವರಿಗೆ ನ್ಯಾಯ ದೊರಕಿಸಿಕೊಡಲು ಜೀವ ಪಣಕ್ಕಿಟ್ಟು ಹೋರಾಡುವ ಮತ್ತೊಬ್ಬ ಪೋಲೀಸ್ ಅಧಿಕಾರಿ. ಈ ಇಬ್ಬರೂ ಅಧಿಕಾರಿಗಳ ಮುಖಾಂತರ ನಮ್ಮ ಇಂದಿನ ದೇಶದ ವಾಸ್ತವ ಸ್ಥಿತಿಯನ್ನು ಅನಾವರಣಗೊಳಿಸುವ ಚಿತ್ರವೇ 'ದೇವ್'

ಗುಜರಾತ್ ಹತ್ಯಾಕಾಂಡ ಮಾನವ ಕುಲವೇ ನಾಚಿಕೆಯಿಂದ ತಲೆತಗ್ಗಿಸುವಂತಹ ಕೃತ್ಯ. ಆ ಹತ್ಯಾಕಾಂಡವನ್ನೇ ಆಧಾರವಾಗಿಸಿಕೊಂಡು ಕಥೆ ಹೆಣೆದಿರುವ ಗೋವಿಂದ ನಿಹಲಾನಿ ಮನಮಟ್ಟುವಂತೆ ಚಿತ್ರಿಸಿದ್ದಾರೆ. ಆಪ್ತ ಸ್ನೇಹಿತರಿಬ್ಬರೂ ಉನ್ನತ ಪೋಲೀಸ್ ಅಧಿಕಾರಿಗಳು. ಆದರೆ ಅವರ ಸೈದ್ಧಾಂತಿಕ ನಿಲುವುಗಳು ವಿಭಿನ್ನ.

ಭಯೋತ್ಪಾದಕರಾಗುವ ಅಲ್ಪಸಂಖ್ಯಾತರ ಹಿಂದಿನ ಸಮಸ್ಯೆಗಳನ್ನು ಅರಿತು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕೆಂದು ಬಯಸುವ ಅಧಿಕಾರಿ 'ದೇವ್'. ಆದರೆ ಭಯೋತ್ಪಾದಕರನ್ನು ಯಾವುದೇ ಮುಲಾಜಿಲ್ಲದೇ ಹೊಸಕಿಹಾಕಬೇಕೆಂಬುದು ಆತನ ಸ್ನೇಹಿತ ಜೈ ನ ಅಭಿಮತ. ಕ್ಷುಲ್ಲಕ ಕಾರಣಗಳಿಗಾಗಿ ಮತ್ತು ರಾಜಕೀಯ ಲಾಭಗಳಿಗಾಗಿ ಧರ್ಮಾಂಧರು ಗಲಭೆ ಹುಟ್ಟುಹಾಕುತ್ತಾರೆ. ಮುಖ್ಯಮಂತ್ರಿಗಳ ಅಧೀನದಲ್ಲಿಯೇ ಕೆಲಸ ಮಾಡುವ ದೇವ್ ನ ಸ್ನೇಹಿತ ಜೈ 'ತಮ್ಮ ಮೇಲಿನ ಧಾಳಿಯಿಂದ ಕ್ರೋಧಗೊಂಡಿರುವ ಬಹುಸಂಖ್ಯಾತರ ಭಾವನೆಗಳಿಗೆ ಅಭಿವ್ಯಕ್ತಿಗೆ ಅವಕಾಶ ಕೊಡಬೇಕು' ಎಂಬ ಮುಖ್ಯಮಂತ್ರಿಗಳ ಅಭಿಪ್ರಾಯಕ್ಕೆ ಪೂರಕವಾಗಿ ಅಲ್ಪಸಂಖ್ಯಾತರ ಮೇಲಿನ ಧಾಳಿಗೆ ಬೆಂಗಾವಲಾಗಿ ನಿಲ್ಲುತ್ತಾನೆ. ಆದರೆ ಕಿರಿಯ ಅಧಿಕಾರಿಯಾದ ದೇವ್ ಅವರ ರಕ್ಷಣೆಗಾಗಿ ಹರಸಾಹಸ ನಡೆಸುತ್ತಾನೆ. ಆದರೆ ಮುಖ್ಯಮಂತ್ರಿಗಳ ಆದೇಶದಂತೆ ಗಲಭೆಕೋರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಆತನನ್ನು ಪ್ರತಿಬಂಧಿಸಲಾಗುತ್ತದೆ. ಈ ದೇಶದ ಕಾನೂನಿನ ಮೇಲೆ ಅಚಲ ವಿಶ್ವಾಸವಿರುವ ದೇವ್ ಅಂತಿಮ ಹಂತದರೆಗೆ ಹೋರಾಡುತ್ತಾನೆ. ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಕೊಡಿಸಲು, ದೌರ್ಜನ್ಯವೆಸಗಿದವರಿಗೆ ಶಿಕ್ಷೆ ಕೊಡಿಸುವ ನಿಟ್ಟಿನಲ್ಲಿ 'ರಾಜಧರ್ಮ'ವನ್ನು ಧಿಕ್ಕರಿಸಿ ನಡೆಯುತ್ತಾನೆ. ಅದಕ್ಕೆ ಪರಿಹಾರವಾಗಿ ಆತನನ್ನೇ ಹತ್ಯೆಗೈಯಲಾಗುತ್ತದೆ. ಆದರೆ ಭಯೋತ್ಪಾದಕನಾಗಲು ಹೊರಟು ದೇವ್‌ನ ಸಹಕಾರದಿಂದ ಪರಿವರ್ತನೆಗೊಳ್ಳುವ ಮುಸ್ಲಿಂ ಯುವಕ ದೇವ್ ಹೊಂದಿದ್ದ ಆಶಯಗಳನ್ನು ಸಾಕಾರಗೊಳಿಸಲು ಮುಂದಡಿಯಿಡುತ್ತಾನೆ. ಇದು ಎಲ್ಲರ ಕಾಳಜಿಯೂ ಆಗಬೇಕು.

ಪ್ರತಿಯೊಬ್ಬರೂ ನೋಡಬೇಕಾದ ಚಿತ್ರವಿದು. ಕೋಮುವಾದಿಗಳ ಆಟಕ್ಕೆ ದಾಳವಾಗದೇ ಮಾನವೀಯ ಮನಸ್ಸುಳ್ಳ ಮನುಷ್ಯರಾಗುವುದು ಇಂದಿನ ಅಗತ್ಯ.

ಸತ್ಯವನ್ನು ಜನತೆಯ ಮುಂದಿಟ್ಟಿದ್ದಕ್ಕಾಗಿ 'ಥಾಂಕ್ಸ್ ಟು ಗೋವಿಂದ ನಿಹಲಾನಿ'!.

- ಲವ



ಅಕ್ಕಿ ಹಗರಣ ಸಿಬಿಐ ತನಿಖೆಗೆ ಆಗ್ರಹಿಸಿ ಧರಣಿ

'ಕೂಲಿಗಾಗಿ ಕಾಳು' ಯೋಜನೆಯಲ್ಲಿ ನಡೆದಿರುವ ಬಹುಕೋಟಿ ರೂಗಳ ಅಕ್ಕಿ ಹಗರಣವನ್ನು ಸಿಬಿಐ ತನಿಖೆ ಒಳಪಡಿಸಬೇಕೆಂದು ಬೆಂಗಳೂರು ಜಿಲ್ಲಾ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು, ನಗರ ಜಿಲ್ಲಾಧಿಕಾರಿಗಳ ಕಛೇರಿ ಎದುರ ಪ್ರತಿಭಟನಾ ಧರಣಿ ನಡೆಸಿದರು.

ಕಳೆದು ಮೂರ್ನಾಲ್ಕು ವರ್ಷದಿಂದ ರಾಜ್ಯವನ್ನು ತೀವ್ರವಾಗಿ ಕಾಡಿದ ಬರಗಾಲದ ಬಾಧೆಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಬೇಕಿದ್ದ ಕೂಲಿಗಾಗಿ ಕಾಳು ಯೋಜನೆಯ ಅಕ್ಕಿಯನ್ನು ಬಡವರಿಗೆ ತಲುಪದ ಹಾಗೆ, ಯಂತ್ರಗಳಿಂದಲೇ ಕಾಮಗಾರಿಗಳನ್ನು ನಡೆಸಿ, ಹಸಿವಿನ ಸಾವುಗಳಿಗೆ ಕಾರಣರಾದ ನಿರ್ಲಜ್ಜ ದಗಾಕೋರರನ್ನು ತೀವ್ರವಾಗಿ ದಂಡಿಸಬೇಕಾಗಿದೆ. ಈ ಹಗರಣದಲ್ಲಿ ಎಲ್ಲಾ ಬಂಡವಾಳ ಶಾಹಿ ಪಕ್ಷಗಳ ಮುಖಂಡರುಗಳು ಒಳಗೊಂಡಿರುವ ಸಾಧ್ಯತೆಗಳಿವೆ, ರಾಜ್ಯ ಸರ್ಕಾರ ನೇಮಿಸಿರುವ ಸಿಓಡಿ ಕನಿಖೆಯು ಪ್ರಕರಣದ ಆಳ-ಅಗಲಗಳನ್ನು ಪೂರ್ಣವಾಗಿ ಬಹಿರಂಗಗೊಳಿಸಲು ಸಾಧ್ಯವಿಲ್ಲ. ಅಲ್ಲದೆ ಈ ಹಗರಣವು ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ಪಡೆದಿರುವುದರಿಂದ ಸಿಬಿಐ ತನಿಖೆಗೆ ಒಳಪಡಿಸುವಂತೆ ಈ ಸಂದರ್ಭದಲ್ಲಿ ಆಗ್ರಹಿಸಿದರು.

ಧರಣಿಯಲ್ಲಿ ಗುರುಶಾಂತ, ಕೆ.ಪ್ರಕಾಶ್, ಗೋಪಾಲಗೌಡ, ಗೋಪಾಲಕೃಷ್ಣ ಅರಳಹಳ್ಳಿ, ಕೆ.ಎಸ್.ವಿಮಲ, ಗೌರಮ್ಮ ಮುಂತಾದವರಲ್ಲದೆ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರುಗಳು ಭಾಗವಹಿಸಿದ್ದರು.

ಸಿರಗುಪ್ಪ: ಧರಣಿ ಸತ್ಯಾಗ್ರಹ

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕು ಸಿಪಿಐ(ಎಂ)ನ ಕಾರ್ಯಕರ್ತರು ತಾಲೂಕು ಕಛೇರಿ ಎದುರ ಧರಣಿ ನಡೆಸಿದರು. ಈ ಸಂಧರ್ಭದಲ್ಲಿ ಮಾತನ್ನಾಡಿದ ಮುಖಂಡರು ಅಕ್ಕಿ ಹಗರಣದಲ್ಲಿ ಭಾಗಿಯಾಗಿರುವವರಿಗೆ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸಿದರು. ಅಲ್ಲದೆ ಕಡುಬಡವರನ್ನು ಗುರುತಿಸಿ ಅವರಿಗೆ ಅಂತ್ಯೋದಯ ಯೋಜನೆಯಡಿ ಅಕ್ಕಿ ಗೋದಿ ವಿತರಿಸುವಂತೆ ಆಗ್ರಹಿಸಿದರು.

ಧರಣಿಯಲ್ಲಿ ಬಿ.ಅಡಿವಪ್ಪ, ಇ.ಆರ್.ಯಲ್ಲಪ್ಪ, ವಿ.ಗುರುಸ್ವಾಮಿ, ಕೆ.ತಿಪ್ಪ, ಕೆ.ಪಂಪಾಪತಿ, ಎಸ್.ಕೆ.ಷಣ್ಮುಖಪ್ಪ, ಬಿ.ನಾಗಪ್ಪ, ಎಂ.ನರಸಿಂಹ, ಕೆ.ಎಂ. ಮರಿಈರಪ್ಪ, ಬಸವಣ್ಣಪ್ಪ ಮತ್ತು ವಿ.ಮಾರುತಿ ಮುಂತಾದವರು ಭಾಗವಹಿಸಿದ್ದರು.

ಶಹಾಪುರ ಪ್ರತಿಭಟನೆ

ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲೂಕು ಸಿಪಿಐ(ಎಂ) ಕಾರ್ಯಕರ್ತರು ತಾಲೂಕು ಕಛೇರಿ ಎದುರ ಪ್ರತಿಭಟನೆ ನಡೆಸಿದರು.

ಅಕ್ಕಿ ಹಗರಣವನ್ನು ಸಿಬಿಐ ತನಿಖೆಗೆ ಒಳಪಡಿಸಿ, ಎಲ್ಲಾ ಬಡವರಿಗೆ ಅಂತ್ಯೋದಯ ಕಾರ್ಡು ನೀಡಿ 20 ಕೆ.ಜಿ.ಅಕ್ಕಿ ನೀಡುವಂತೆ ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿದಾವಲಸಾಬ ನದಾಫ್, ಚನ್ನಪ್ಪ ಆನೆಗುಂದಿ, ಸೋಡಿಸಾಬ ಕನ್ಯಾಕೊಳುರು, ಸಿದ್ದಯ್ಯ ಹಿರೆಮಠ, ಈರಮ್ಮ ಪಾಟೀಲ್, ಮಹೇಶ್ವರಿ, ಹಣವಂತ ಗುತ್ತೇದಾರ ಮೊದಲಾದವರು ಭಾಗವಹಿಸಿದ್ದರು. ○


ವೃತ್ತಿ ಶಿಕ್ಷಣ ಶುಲ್ಕ ಹೆಚ್ಚಳ ವಿರೋಧಿಸಿ ಮತ್ತು ಸೀಟಿ ಗೊಂದಲ ನಿವಾರಿಸುವಂತೆ ಒತ್ತಾಯಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಜೂನ್ 15 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH